
ಸಂಪುಟ 23 ಸಂಚಿಕೆ 51
ಡಿಸೆಂಬರ್ 23, 2001 ಬೆಲೆ ರೂ. 3.00

ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ



ಎನ್.ಕೆ. ಇನ್ನಿಲ್ಲ



ಶವಪೆಟ್ಟಿಗೆಯಲ್ಲೂ ದುಡ್ಡು ದೋಚಿದ 'ದೇಶಭಕ್ತರು'!




ದಗಲ್‌ಬಾಜಿ ಎನ್ರಾನ್ ದಿವಾಳಿ



ಸಿನಿಮಾ ನಗರಿಯಲ್ಲಿ ಗೂಳಿ ಕಾಳಗ

ಕಲ್ಕತ್ತಾದಲ್ಲಿ ನೆಲ್ಸನ್ ಮಂಡೇಲಾ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 83

ಹಿಂದಿನ ಸಂಚಿಕೆಯಲ್ಲಿ ಕೇಂದ್ರದಲ್ಲಿ ರಾಷ್ಟ್ರೀಯ ರಂಗ ಅಧಿಕಾರಕ್ಕೆ, ಯಾಸರ್‌ಅರಾಫತ್‌ರ ಭಾರತ ಭೇಟಿ, ಹಿರಿಯ ಸಂಗಾತಿಗಳಾದ ಸರೋಜ್ ಮುಖರ್ಜಿ ಮತ್ತು ಬಿ.ಟಿ.ರಣದಿವೆಯವರ ಮರಣ, ಆನಂದಮಾರ್ಗಿಗಳ ಭಯೋತ್ಪಾದನೆ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ವಿಯೆಟ್ನಾಂ ಸ್ಮರಣೀಯ ಪ್ರವಾಸ, ನಗರ ಪಾಲಿಕೆ ಚುನಾವಣೆಗಳಲ್ಲಿ ಎಡರಂಗಕ್ಕೆ ಮತ್ತೆ ಜನಾದೇಶ, ಕಲ್ಕತ್ತ ನಗರಪಾಲಿಕೆ ಮರಳಿ ಎಡಪಂಥೀಯರಿಗೆ, ಕಲ್ಕತ್ತದಲ್ಲಿ ನೆಲ್ಸನ್ ಮಂಡೇಲಾರಿಗೆ ಹೃದಯಸ್ಪರ್ಶಿ ಸನ್ಮಾನ, ಬಿಜೆಪಿಯ ಕೋಮುವಾದಿ ಆಟ ಆರಂಭ, ಚಂದ್ರ ಶೇಖರ್‌ರವರ ವಿಶ್ವಾಸದ್ರೋಹ ಮತ್ತು ವಿ.ಪಿ.ಸಿಂಗ್ ರಾಜಿನಾಮೆ ಈ ಬಗ್ಗೆ ಓದಿರಿ..

ವಿಯೆಟ್ನಾಂ ಪ್ರವಾಸ

ಹೊಚಿ ಮಿನ್ಹ್ ಜಯಂತಿ ಸಂದರ್ಭದಲ್ಲಿ 1990 ಏಪ್ರಿಲ್ 15-21 ರ ನಡುವೆ ಸರಕಾರಿ ನಿಯೋಗವೊಂದರ ಮುಖ್ಯಸ್ಥನಾಗಿ ನಾನು ವಿಯೆಟ್ನಾಂಗೆ ಭೇಟಿ ನೀಡಿದೆ. ಅಲ್ಲಿನ ಉನ್ನತ ಮುಖಂಡರನ್ನು ನಾನು ಭೇಟಿಯಾದೆ. ಹನಾಯ್ ಮತ್ತು ಹೊಚಿ ಮಿನ್ ನಗರಗಳನ್ನು ಸಂದರ್ಶಿಸಿದೆ. ಏಪ್ರಿಲ್ 18 ರಂದು ಮುಖ್ಯ ಕಾರ್ಯಕ್ರಮವಿತ್ತು. ಭಾರತವಲ್ಲದೆ ಸೋವಿಯತ್ ಒಕ್ಕೂಟ, ಕಾಂಬೋಡಿಯಾ, ಲಾವೋಸ್ ಮತ್ತು ಕ್ಯೂಬಾ ಕೂಡ ಪ್ರತಿನಿಧಿಸಿದ್ದವು. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ವಿಯೆಟ್ನಾಂ ದೇಶವನ್ನು ಪ್ರತಿನಿಧಿಸಿ ಭಾಗವಹಿಸಿದ್ದರು.

ನಮ್ಮ ವಿಯೆಟ್ನಾಂ ಸಂಗಾತಿಗಳೊಂದಿಗೆ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಪರಿಸ್ಥಿತಿಯನ್ನು ನಾವು ಚರ್ಚಿಸಿದೆವು. ಹೊಚಿಮಿನ್ಹ್ ವಿಯೆಟ್ನಾಂ ನ ಮಹಾನ್ ನಾಯಕರಷ್ಟೇ ಆಗಿರಲಿಲ್ಲ. ಅವರು ಇಡೀ ಜಗತ್ತಿಗೆ ಸೇರಿದವರು. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಸ್ವಯಂಟೀಕೆಗೆ ಸದಾ ಸಿದ್ಧವಿದೆ ಎಂಬುದನ್ನು ನಾವು ಮನಗಂಡೆವು. ಪಕ್ಷದ ಸದಸ್ಯತ್ವ ಕ್ರಾಂತಿಯೋತ್ತರ 5000 ದಿಂದ 20 ಲಕ್ಷಕ್ಕೆ ಏರಿತ್ತು. ಕೆಟ್ಟ ಶಕ್ತಿಗಳನ್ನು ಪಕ್ಷದಿಂದ ಹೊರಹಾಕುವ ಪ್ರಕ್ರಿಯೆ ಹಾಗೂ ಹೊಸಸದಸ್ಯರಿಗೆ ಶಿಕ್ಷಣ ನೀಡುವ ಕೆಲಸ ಪೂರ್ಣಪ್ರಮಾಣದಲ್ಲಿ ಸಾಗಿತ್ತು. ನಾವು ಸದಾ ವಿಯೆಟ್ನಾಂ ಜನರ ಹೋರಾಟದಲ್ಲಿ ಅವರ ಜತೆ ಇರುತ್ತೇವೆ ಎಂದು ನಾನು ಹೇಳಿದೆ. ಬಂಗಾಳ ಮತ್ತು ಕೇರಳದ ಕಮ್ಯುನಿಸ್ಟ್ ಸರಕಾರಗಳ ಯಶಸ್ಸನ್ನು ವಿವರಿಸಿದೆ. ವಿಯೆಟ್ನಾಂನಲ್ಲಿ ಸರಕಾರ ಮತ್ತು ಖಾಸಗಿ ಮಟ್ಟದಲ್ಲಿ ಭಾರತ ಹೇಗೆ ಹೆಚ್ಚು ಹಣವನ್ನು ಹೂಡಬಹುದು ಎಂದೂ ನಾನು ಚರ್ಚಿಸಿದೆ.

ನಗರಪಾಲಿಕೆ ಚುನಾವಣೆಗಳು

ನಾನು ಮರಳಿದ ಒಂದು ತಿಂಗಳೊಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಿತು. 14 ಜಿಲ್ಲೆಗಳ 74 ಪುರಸಭೆಗಳಿಗೆ ಮೇ 27 ರಂದು ಚುನಾವಣೆ ನಡೆಯಿತು. ಹಿಂದೆ 1981 ಹಾಗೂ 1986 ರಲ್ಲಿ ಚುನಾವಣೆಗಳು ನಡೆದಿದ್ದವು. ನಾವು 1981 ರಲ್ಲಿ ಪುರಸಭೆ ಕಾನೂನುಗಳನ್ನು ತಿದ್ದುಪಡಿ



ಆತ್ಮವಿಶ್ವಾಸದ ಪ್ರತಿರೂಪ ಮಂಡೇಲಾರಿಗೆ ನಾಗರೀಕ ಸನ್ಮಾನ

ಮಾಡಿ ಅಧಿಕಾರ ವಿಕೇಂದ್ರೀಕರಣಕ್ಕೆ ಒತ್ತು ನೀಡಿದೆವು. ಕೋಮುವಾದಿ ಶಕ್ತಿಗಳ ಆಟಾಟೋಪಗಳನ್ನು ನಾವೀಗ ಕಂಡೆವು. ಮಾಧ್ಯಮಗಳು ಬಿಜೆಪಿ ಬಗ್ಗೆ ಅಬ್ಬರದ ಪ್ರಚಾರ ನಡೆಸಿದರೂ ಅದಕ್ಕೆ ಸಿಕ್ಕಿದ್ದು ಕೇವಲ 9 ಸ್ಥಾನಗಳು. ಅಮ್ರ ಬಂಗಾಳಿ ಮತ್ತು ಎಸ್‌ಯುಸಿಐ ಕೂಡ ಕಾಂಗ್ರೆಸ್‌ನ ಜೊತೆ ಕೈಜೋಡಿಸಿದವು. ನಮ್ಮ ಆಡಳಿತದ ಆಧಾರದಲ್ಲಿ ಜನರು ತೀರ್ಪು ನೀಡಿದರು.

20 ದಿನಗಳ ನಂತರ ಕಲ್ಕತ್ತ ಮಹಾನಗರ ಪಾಲಿಕೆಗೆ ಚುನಾವಣೆ ನಡೆಯಿತು. ಕಾಂಗ್ರೆಸ್ ಹಿಂದೆಂದಿಗಿಂತ ಹೆಚ್ಚು ಒಗ್ಗಟ್ಟನಿಂದಿತ್ತು. ಇದು ಕಲ್ಕತ್ತದ ಭವಿಷ್ಯದ ಪ್ರಶ್ನೆ ಮಾತ್ರವೇ ಆಗಿರಲಿಲ್ಲ. ಇಡಿಯಾಗಿ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಗೇ ಒಂದು ಪರೀಕ್ಷೆಯಾಗಿತ್ತು.

ಕೇಂದ್ರದಲ್ಲಿರುವ ಸರಕಾರ ಜನಪರವಾಗಿದ್ದು ಕಲ್ಕತ್ತ ಮಹಾನಗರಕ್ಕೆ ಹೊಸ ಅವಕಾಶಗಳು ತೆರೆಯುತ್ತಿವೆ ಎಂದು ನಾವು ಒತ್ತುಕೊಟ್ಟು ಹೇಳಿದೆವು. ಮಹಾನಗರಪಾಲಿಕೆಯಲ್ಲಿ ಬೇಜವಾಬ್ದಾರಿಯಿಂದ ವರ್ತಿಸಿ ಕಾಂಗ್ರೆಸ್ ತನ್ನ ಗೋರಿಯನ್ನು ತಾನೇ ತೋಡಿಕೊಂಡಿತು. ಪಾಲಿಕೆಯ ಯಾವುದೇ ಅಧಿವೇಶನ ನಡೆದರೂ ಅಲ್ಲಿ ಕಾಂಗ್ರೆಸ್ ಅಂದಾದುಂದಿ ವರ್ತನೆ ಇದ್ದೇ ಇರುತ್ತಿತ್ತು. ಹಿಂದಿನ ಸಲ 70 ಸ್ಥಾನಗಳಲ್ಲಿ ಗೆದ್ದಿದ್ದ ಕಾಂಗ್ರೆಸ್‌ಗೆ ಈ ಸಲ ಕೇವಲ 37 ಸ್ಥಾನಗಳು ಸಿಕ್ಕವು. ಮಹಾನಗರ ನಮಗೆ, ಅಂದರೆ ಎಡಪಂಥೀಯರಿಗೆ ಮತ್ತೆ ಒಲಿಯಿತು.

ಕಲ್ಕತ್ತದಲ್ಲಿ ಮಂಡೆಲಾ

ಅಕ್ಟೋಬರ್ 18 ರಂದು ಕೊಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನೆಲ್ಸನ್ ಮಂಡೆಲಾರಿಗೆ ಹೃದಯಸ್ಪರ್ಶಿ ಸ್ವಾಗತ ಸಮಾರಂಭ ಏರ್ಪಡಿಸಲಾಯಿತು. 27 ವರ್ಷ ಕಾಲ ಸತತವಾದ ಸೆರೆಮನೆಯಲ್ಲಿದ್ದ ಮಂಡೆಲಾ ಅದಮ್ಯ ಆತ್ಮವಿಶ್ವಾಸದ ಪ್ರತಿರೂಪ. ರಾಜಿ ಪದದ ಅರ್ಥವೇ ಗೊತ್ತಿಲ್ಲದ ಒಬ್ಬ ಮಹಾನ್ ವ್ಯಕ್ತಿಗೆ ಕಲ್ಕತಾ ನಗರ ಗೌರವ ಸಲ್ಲಿಸುತ್ತಿತ್ತು. ಮಂಡೆಲಾರ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಮತ್ತು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಸದಾ ಹೆಗಲಿಗೆ ಹೆಗಲು ಕೊಟ್ಟು ಹೋರಾಟದಲ್ಲಿ ಶ್ರಮಿಸಿದವು. ಅದೊಂದು ಐತಿಹಾಸಿಕ ಮೈತ್ರಿಯಾಗಿತ್ತು. ಭಾರತ ಸರಕಾರ 'ಭಾರತ ರತ್ನ' ಪ್ರಶಸ್ತಿ ನೀಡಿ ಮಂಡೆಲಾರನ್ನು ಗೌರವಿಸಿತು. ಇದನ್ನು ಪಡೆದ ಎರಡನೇ ವಿದೇಶಿ ವ್ಯಕ್ತಿ ಮೆಂಡಲಾ. ಇದಕ್ಕೆ ಮುಂಚಿ ಖಾನ್ ಅಬ್ದುಲ್ ಗಫಾರ್ ಖಾನ್‌ರಿಗೆ 'ಭಾರತ ರತ್ನ' ನೀಡಲಾಗಿತ್ತು.

ತಾವಿನ್ನು ಸ್ವದೇಶದಲ್ಲೇ ಇರುವಂತೆ ಭಾಸವಾಗುತ್ತಿದೆ ಎಂದು ಮಂಡೆಲಾ ಆಗ ಹೇಳಿದ್ದು ಇನ್ನೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. ದಕ್ಷಿಣ ಆಫ್ರಿಕನ್ನರ ಹೋರಾಟಕ್ಕೆ ಭಾರತ ಸದಾ ನೆರವಿನ ಹಸ್ತ ಚಾಚಿರುತ್ತದೆ ಎಂದು ನಾನು ಹೇಳಿದೆ.

ಬಿಜೆಪಿ ಸಂಚು

ವಿ.ಪಿ.ಸಿಂಗ್ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಬಿಜೆಪಿ ತನ್ನ ಕೋಮು ಆಟವನ್ನು ಆರಂಭಿಸಿತು. ಎಲ್.ಕೆ.ಅಡ್ವಾಣಿ ಆರಂಭಿಸಿದ ರಥಯಾತ್ರೆಯಿಂದ ರಾಜಕೀಯ ಅಶಾಂತಿ ತಲೆದೋರಿತು. ಭ್ರಷ್ಟ ಕಾಂಗ್ರೆಸ್ ಆಡಳಿತವನ್ನು ಪದಚ್ಯುತಗೊಳಿಸಿ ತಾವು ಆಯ್ಕೆ ಮಾಡಿದ ಹೊಸ ಸರಕಾರದ ಮೂಲಕ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಅವಕಾಶ ಜನತೆಗೆ ಸಿಗಲಿಲ್ಲ. ಎಲ್ಲವೂ ಪೂರ್ವಯೋಜಿತವಾಗಿತ್ತು.

ರಾಮಜನ್ಮಭೂಮಿ ವಿವಾದ ಕಿಚ್ಚನ್ನು ಹಚ್ಚಲಾಯಿತು. ಯಾವ ಕಾರಣಕ್ಕೂ ಮಂದಿರವನ್ನು ಕಟ್ಟಲು ಸರಕಾರ ಅವಕಾಶ ನೀಡುವಂತಿರಲಿಲ್ಲ. ಯಾಕೆಂದರೆ ಆ ರೀತಿ ಮಾಡುವುದು ದೇಶದ ಮೂಲಭೂತ ಜಾತ್ಯಾತೀತ ಸ್ವರೂಪದೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ. ಆಶ್ಚರ್ಯದ ವಿಷಯವೆಂದರೆ ಬಿಜೆಪಿ ತನ್ನ ಚುನಾವಣೆ ಪ್ರಚಾರದಲ್ಲಿ ಮಂದಿರದ ಬಗ್ಗೆ ಚಕಾರವೆತ್ತಲಿಲ್ಲ. ಸಂದರ್ಭ ಬಂದಾಗ, ಅಧಿಕಾರವನ್ನು ಕಬಳಿಸಲು ಅದು ಕೋಮುವಾದದ ತಂತ್ರ ಹೂಡಿತು.

ವಿವಾದದಲ್ಲಿ ಒಳಗೊಂಡ ಎರಡೂ ಕಡೆಯವರು ಮಾತುಕತೆ ನಡೆಸಬೇಕು ಅಥವಾ ಈ ಸಂಬಂಧ ಅಲಹಾಬಾದ್ ಹೈಕೋರ್ಟು ತೀರ್ಪನ್ನು ಕಾಯಬೇಕು ಎನ್ನುವುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಆದರೆ ತಾರ್ಕಿಕ ಪರಿಹಾರಕ್ಕೆ ಕಾಯಲು ಕೋಮುವಾದಿ ಶಕ್ತಿಗಳು ಸಿದ್ಧವಿರಲಿಲ್ಲ.

ಮಂದಿರ ವಿಷಯದ ಬಗ್ಗೆ ಸಾಮೂಹಿಕ ಜಾಗೃತಿ ಮೂಡಿಸುವುದು ರಥಯಾತ್ರೆಯ ಉದ್ದೇಶ ಎಂದು ಅಡ್ವಾಣಿ ಹೇಳಿದರು. ಆದರೆ ಅವರ ರಥದ ಮೇಲಿನ ಬಿಜೆಪಿ 'ಚಿಹ್ನೆ'. ಅವರ ನಿಜಉದ್ದೇಶ ಏನೆಂಬುದನ್ನು ಸಾರಿ ಹೇಳಿತು. ಧರ್ಮದ ಮುಖವಾಡ ಹಾಕಿದ ಅಪಾಯಕಾರಿ ರಾಜಕಿಯ ಅದಾಗಿತ್ತು. ಆಡ್ವಾಣಿಯ ರಥ ಹೋದಲ್ಲೆಲ್ಲಾ ಗಲಭೆಗಳು ಹಾಗೂ ಗೊಂದಲದ ವಿನಾಶಕಾರಿ ಕೃತ್ಯಗಳು ನಡೆದವು. ಬಂಗಾಳಕ್ಕೂ ಅವರು ಬಂದರು. ಆದರೆ ನಮ್ಮ ಜನರು ಅವರ ಕೊಳಕು ನಾಟಕವನ್ನು ತಿರಸ್ಕರಿಸಿದರು. ಆದರೆ ದೇಶದ ಇತರ ಭಾಗಗಳ ಜನರು ಅಷ್ಟೊಂದು ಅದೃಷ್ಟವಂತರಾಗಿರಲಿಲ್ಲ.

ಅದುವರೆಗೆ ಆಗಿದ್ದು ಸಾಕು ಎಂದು ಕೇಂದ್ರ ಸರಕಾರ ನಿರ್ಧರಿಸಿತು. ಬಿಹಾರದಲ್ಲಿ ರಥಯಾತ್ರೆಯನ್ನು ತಡೆಯಲಾಯಿತು. ಮುಖ್ಯಮಂತ್ರಿ ಲಾಲೂಪ್ರಸಾದ್ ಯಾದವರ ಮುಖ್ಯಮಂತ್ರಿತ್ವದಲ್ಲಿ ಅಪಾರ ಆಡಳಿತಾತ್ಮಕ ಕೆಚ್ಚು ಹಾಗೂ ಕೌಶಲವನ್ನು ಪ್ರದರ್ಶಿಸಿದ ಬಿಹಾರ ಆಡಳಿತ ಅಡ್ವಾಣಿಯನ್ನು ಬಂಧಿಸಿತು.

ಅದಕ್ಕೂ ಮುಂಚಿ ಕರಸೇವೆಯ ಹೆಸರಿನಲ್ಲಿ ಗಲಾಟೆ ಉಂಟುಮಾಡಲು ಪ್ರಯತ್ನಗಳು ನಡೆದಿದ್ದವು. ಆದರೆ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ಪರಿಸ್ಥಿತಿಯನ್ನು ಚೆನ್ನಾಗಿ ನಿಭಾಯಿಸಿದರು. ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಬೇಕೆಂಬ ಬೇಡಿಕೆಯನ್ನು ಬಿಜೆಪಿ ಮುಂದಿಟ್ಟಿತು. ಇದು ಕಾಶ್ಮೀರ ಜನತೆಗೆ ಮಾಡಿದ ಅವಮಾನ. ಈ ಬೇಡಿಕೆಯನ್ನು ಈಗ ಎತ್ತುವುದರಿಂದ ಪ್ರತ್ಯೇಕತಾವಾದಿಗಳಿಗೆ ಇನ್ನೊಂದು ಅಸ್ತ್ರವನ್ನು ಕೊಟ್ಟಂತೆ ಆಗುತ್ತದೆ ಅಷ್ಟೆ.

ಕಾಂಗ್ರೆಸ್ ಹಿಂದೆ ಬೀಳಲಿಲ್ಲ. ಆ ಪಕ್ಷ ಯಾವತ್ತೂ ಜಾತ್ಯಾತೀತ ತತ್ವಗಳಿಗೆ ಬದ್ಧವಾಗಿತ್ತು. ಆದರೆ ರಾಜೀವಗಾಂಧಿ ಮೇಲಿನ ನ್ಯಾಯಾಲಯಕ್ಕೆ ಮನವಿ ಮಾಡುವ ಬದಲು ವಿವಾದಿತ ಪ್ರಾರ್ಥನಾ ಸ್ಥಳದ ಬಾಗಿಲನ್ನು ತೆರದರು ಎಂಬುದನ್ನು ಇತಿಹಾಸ ದೃಢಪಡಿಸುತ್ತದೆ. ಕರಸೇವೆಗೆ ಅವಕಾಶ ನೀಡಿದ್ದು ರಾಜೀವಗಾಂಧಿ ಸರಕಾರವೆ.

(ಮುಂದುವರಿಯುವುದು)

ರೈತ ಮುಖಂಡರ ಬಿಡುಗಡೆ

ಗುಲ್ಬರ್ಗಾದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್‌ಗೆ ಒತ್ತಾಯಿಸಿ ಚಳುವಳಿ ನಡೆಸುತ್ತಿದ್ದ ರೈತ ಮತ್ತು ರೈತ ಮುಖಂಡರ ಮೇಲೆ ಪೋಲೀಸರು ಲಾಠಿ, ಬೂಟು, ಬಂದೂಕುಗಳಿಂದ ಚಚ್ಚಿ, ಬಂಧಿಸಿ ಅವರ ಮೇಲೆ ಹನ್ನೊಂದು ಕೇಸುಗಳನ್ನು ದಾಖಲಿಸಿ ಐವತ್ತು ಜನರನ್ನ ಜೈಲಿಗೆ ಹಾಕಲಾಗಿತ್ತು. ಮಾರುತಿ ಮಾನ್ಪಡೆ ಮತ್ತು ಜೈಲಾಲ್‌ಮೇಲೆ ಈ ಹನ್ನೊಂದು ಕೇಸುಗಳ ಜೊತೆ ದರೋಡೆ ಕೇಸು ಹಾಕಿ ಜಾಮೀನು ದೊರಕದಂತೆ ಜಿಲ್ಲಾಡಳಿತ ಪಿತೂರಿ ಹೂಡಿತ್ತು. ಡಿಸೆಂಬರ್ ಹದಿನೈದರಂದು ಮಾನ್ಪಡೆ ಸೇರಿದಂತೆ ಬಂಧನದಲ್ಲಿದ್ದ ಎಲ್ಲಾ ಪ್ರತಿಭಟನಾಕಾರರಿಗೂ ಜಾಮೀನು ದೊರೆತು ಬಿಡುಗಡೆ ಹೊಂದಿದ್ದಾರೆ.

ಬೀದರ್ ಜಿಲ್ಲೆಯ ನರಬಲಿ ಕುರಿತು ನಿಷ್ಪಕ್ಷಪಾತ ತನಿಖೆ ಅಗತ್ಯ

2000 ರ ಏಪ್ರಿಲ್ 1 ರಂದು ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡ (ಬಿ) ಗ್ರಾಮದಲ್ಲಿ ಮಾಂತ್ರಿಕನ ಮಾತಿನಂತೆ ನಿಧಿಗಾಗಿ 5 ವರ್ಷದ ಬಾಲಕ ಬಸವರಾಜು ಅಲಿಯಾಸ್ ಬಬ್ಲುವಿನ ನರಬಲಿ ನಡೆದಿದ್ದು, ಇಡೀ ರಾಜ್ಯದ ಗಮನ ಸೆಳೆದಿತ್ತು.

ಈ ಬರ್ಬರ ಕೃತ್ಯ ನಡೆದು ಸುಮಾರು 2 ವರ್ಷಗಳಾಗಿದ್ದರೂ ಅಪರಾಧಿಗಳನ್ನು ಪತ್ತೆಹಚ್ಚಿ ಶಿಕ್ಷಿಸುವಲ್ಲಿ ಪ್ರಗತಿಯೇನೂ ನಡೆದಿಲ್ಲ. ಇಡೀ ಪ್ರಕರಣವನ್ನೇ ಮುಚ್ಚಿಹಾಕುವ ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ರಾಜ್ಯದ ಪೋಲೀಸ್ ಮಹಾ ನಿರ್ದೇಶಕರಿಗೆ, ಒಂದು ತಿಂಗಳ ಒಳಗಾಗಿ ವರದಿ ನೀಡುವಂತೆ ಆಜ್ಞಾಪಿಸಿದೆ. (ನಂ.374ಎ/01/2001-2002 ದಿನಾಂಕ: 17-11-2001)

ಇಡೀ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಬಲ ಗುಮಾನಿ ಮೂಡಿದೆ. ಪ್ರಮುಖ ಆರೋಪಿ ಶತ್ರುಘ್ನ ಹಿಬಾರೆಯ ಬಂಧನದ ಸ್ಥಳ ಕುರಿತಂತೆ ವಿಭಿನ್ನ ವರದಿಗಳು ಬಂದಿವೆ. ಮೊದಲು ಆತನನ್ನು ಮಹಾರಾಷ್ಟ್ರದ ಲಾತೂರಿನಲ್ಲಿ ಬಂಧಿಸಲಾಯಿತು ಎಂಬ ವರದಿಗಳಿದ್ದವು. ಆನಂತರ ಪೋಲೀಸರೇ ನೀಡಿರುವ ಮಾಹಿತಿ ಮೇರೆಗೆ ಆತನನ್ನು ಪ್ರಬಲ ರಾಜಕಾರಿಣಿ, ಬೀದರ್ ಜಿಲ್ಲಾ ಕಾಂಗ್ರೆಸ್(ಐ) ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರೂ ಆದ ಶ್ರೀ ಬಸವರಾಜು ಪಾಟಿಲ್ ಹುಮ್ನಾಬಾದ್ ರವರ ಮನೆಯಲ್ಲಿ ಬಂಧಿಸಲಾಯಿತೆಂಬ ವರದಿಯಿದೆ. ಅವರನ್ನು ವಿಚಾರಣೆ ಮಾಡಲು ಹೋದಾಗ ಅವರು ಪೋಲೀಸರೊಂದಿಗೆ ಸಹಕರಿಸಲಿಲ್ಲ ಎಂಬ ವರದಿಯೂ ಇದೆ.



ಸಿಪಿಐ(ಎಂ)ನ ರಾಜ್ಯ... ಲಿಂಗ ಮನವಿ ಸಲ್ಲಿಸುವಾಗ ರಾಜ್ಯ ...ದರ್ಶಿ ಸೂರಿ, ಎಸ್‌ವೈಜ

ಬೀದರ್ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಡಾ. ಆರ್.ಪಿ.ಶರ್ಮಾರವರು ಗುಲ್ಬರ್ಗಾ IGP ರವರಲ್ಲಿ MLC ಬಸವರಾಜ ಪಾಟೀಲ್ ಹಾಗು ಪ್ರಮುಖ ಆರೋಪಿಯ ಸಹೋದರ ಭರತ್ ಹಿಬಾರೆ ರವರನ್ನು 'ಪಾಲಿಗ್ರಾಫಿ'(ಸುಳ್ಳು ಪತ್ತೆಹಚ್ಚುವ) ಪರೀಕ್ಷೆಗೆ ಒಳಪಡಿಸಬೇಕು ಹಾಗೂ ಹುಮ್ನಾಬಾದ್ ನಲ್ಲಿರುವ DYSP ಯಾತನೂರ್ ರವರನ್ನು ಅಮಾನತ್ತು ಗೊಳಿಸಬೇಕೆಂದು ವಿನಂತಿಸಿದ್ದರು. ಆದರೆ ಯಾವುದೇ ಕ್ರಮ ಜರುಗಿಸಿಲ್ಲ ಬದಲಾಗಿ ಅಂದಿನ ಬೀದರ್ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳನ್ನೇ ರಾಜಕೀಯ ಒತ್ತಡಗಳ ಪರಿಣಾಮದಿಂದಾಗಿ ವರ್ಗಾಯಿಸಲಾಯಿತು. ವರ್ಗಾವಣೆಯ ಹಿಂದೆ ಗೃಹಸಚಿವ ಮಲ್ಲಿಕಾರ್ಜುನ ಖರ್ಗೆಯವರ ರಾಜಕೀಯ ಒತ್ತಡವಿದೆ ಎಂಬ ವರದಿಯಿದೆ. ಈ ಬಗ್ಗೆ ಗೃಹಸಚಿವ ಖರ್ಗೆಯವರು ಜನತೆಗೆ ಸ್ಪಷ್ಟನೆ ನೀಡಲೇಬೇಕು.

ಈ ಪ್ರಕರಣದ ಹಿನ್ನೆಲೆಯಲ್ಲಿ ಮೊದಲೇ ಹಿಂದುಳಿದ ಪ್ರದೇಶವಾಗಿರುವ ಬೀದರ್‌ನಲ್ಲಿ ಮೂಢನಂಬಿಕೆ ದುರ್ಬಲರ ಮೇಲೆ ದಬ್ಬಾಳಿಕೆ ತಾಂಡವವಾಡುತ್ತಿರುವಾಗ, ನರಬಲಿಗೆ ಕಾರಣರಾದವರನ್ನು ಬಂಧಿಸಿ ಶಿಕ್ಷಿಸುವ ಬದಲು ರಕ್ಷಿಸಲು ಮುಂದಾಗಿರುವ ಹಾಗೂ ರಾಜಕೀಯ ಒತ್ತಡದ ಪರಿಣಾಮವಾಗಿ ವರಿಷ್ಠಾಧಿಕಾರಿಗಳನ್ನು ವರ್ಗಾಯಿಸಿರುವ ಕ್ರಮ ಹಾಗೂ ಬಸವರಾಜ್ ಪಾಟೀಲ್ ಹುಮ್ನಾಬಾದ್‌ರವರ ಪಾತ್ರದ ಬಗ್ಗೆ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು.

ಮುಖ್ಯಮಂತ್ರಿ ಕೃಷ್ಣರವರು ರಾಜಕೀಯ ಒತ್ತಡಕ್ಕೆ ಮಣಿಯದೆ ಬಸವರಾಜ ಪಾಟೀಲ್ ಹುಮ್ನಾಬಾದ್ ಮತ್ತು ಭರತ ಹಿಬಾರೆಯವರನ್ನು 'ಪಾಲಿಗ್ರಫಿ' ಪರೀಕ್ಷೆಗೆ ಒಳಪಡಿಸಬೇಕು. ಬೀದರ್ ಎಸ್.ಪಿ. ಡಾ.ಆರ್.ಪಿ.ಶರ್ಮಾ ರವರನ್ನು ಯಾಕೆ ವರ್ಗಾಯಿಸಲಾಯಿತು ಎಂದು ಸ್ಪಷ್ಟನೆ ನೀಡಬೇಕು. ಅಲ್ಲದೆ ಸಂಬಂಧಪಟ್ಟ ಶಾಸಕರ ಮೇಲೂ ಕ್ರಮ ಜರುಗಿಸಬೇಕು.

ಬಳ್ಳಾರಿ: ಆಶ್ರಯ ಕಾಲೋನಿಯ ನಿರಾಶ್ರಿತರು

ಸೋನಿಯಾರ ರಾಜಕೀಯ ಆಶ್ರಯಕ್ಕೆ ಸುಷ್ಮಾರ ಅಡಿಕೆ ಎಲೆಗೆ ಸುಣ್ಣವಾಗಿ ಮೂರು ಭಾರೀ ಗಾತ್ರದ ಸಚಿವರು ಆಡಳಿತದ ಪಕ್ಷದ ರಾಜ್ಯ ಅಧ್ಯಕ್ಷರು, ಮುಖ್ಯಮಂತ್ರಿಗಳ 'ಪ್ಯಾಕೇಜ್' ಪೊಟ್ಟಣದಲ್ಲೂ ಸ್ಥಾನ ಗಿಟ್ಟಿಸಿರುವ, ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಅಧಿಕಾರಿಗಳು ಮರೆವ ಈ ಬಲವಿಲ್ಲದ ಬಳ್ಳಾರಿಯಲ್ಲಿ ನಾಗರೀಕರು, ಇದ್ದೂ ಇಲ್ಲದ ನಿರಾಶ್ರಿತರು. ಅಂತಹ ಆಶ್ರಯ ಕಾಲೋನಿಯೊಂದರ ಚಿತ್ರಣ ಇಲ್ಲಿ.

ನಾಲ್ಕು ವರ್ಷಗಳಿಂದ ಮತದಾನದ ಹಕ್ಕೇ ಇಲ್ಲದ ನತದೃಷ್ಟರು ನಾಗರೀಕ ಸೌಲಭ್ಯಗಳಿಂದಲೂ ವಂಚಿತರು. ಹೋರಾಟದ ಹಾದಿಗೆ ಇಳಿದಾಗ ಆಶ್ರಯ ಕಾಲೋನಿ ಜನತೆ ಕೆಲವನ್ನು ಪಡೆದರು

ವಿಶ್ವದಲ್ಲೇ ನಮ್ಮದು ಅತಿದೊಡ್ಡ ಪ್ರಜಾ ಪ್ರಭುತ್ವ ರಾಷ್ಟ್ರ ಎಂದು ಹೆಮ್ಮೆಯಿಂದ ಹೇಳುತ್ತೇವೆ. ಆದರೆ ಆನೊಂದು ಕಾಲೋನಿಯ ಜನ ಹಾಗೆ ಹೇಳುವಂತಿಲ್ಲ. ಯಾಕೆಂದರೆ ಪ್ರಜಾ ಪ್ರಭುತ್ವದಲ್ಲಿ ಸಾಮಾನ್ಯ ಪ್ರಜೆಗೂ ಇರಬೇಕಾದ ಮತದಾನದ ಹಕ್ಕೆ ಇಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ನಾಲ್ಕು ಚುನಾವಣೆಗಳು ನಡೆದು ಹೋದವು. ರಾಷ್ಟ್ರದ ಕೋಟ್ಯಾಂತರ ಜನ ಮತ ಚಲಾಯಿಸಿ ಲೋಕಸಭೆಗೆ ತಮಗೆ ಇಷ್ಟವಾದ ಪ್ರತಿನಿಧಿಗಳನ್ನು ಆರಿಸಿ ಕಳಿಸಿದರು. ಕಳೆದ ಲೋಕಸಭಾ ಚುನಾವಣೆ ಯಲ್ಲಿ ಬಳ್ಳಾರಿ ಕ್ಷೇತ್ರ ರಾಷ್ಟ್ರದ ಗಮನ ಸೆಳೆದಿತ್ತು. ಪ್ರಧಾನಿ ಸ್ಥಾನದ ಅಭ್ಯರ್ಥಿಯೆಂದು ಹೇಳಲಾಗಿದ್ದ ಸೋನಿಯಾ ಗಾಂಧಿ, ದೆಹಲಿಯ ಮಾಜಿ ಮುಖ್ಯಮಂತ್ರಿ ಬಿಜೆಪಿಯ ಸುಷ್ಮಾ ಸ್ವರಾಜ್‌ರಂತಹ ಘಟಾನುಘಟಿಗಳು ಸ್ಪರ್ಧಿಸಿದ್ದ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೂರು ಸಾವಿರ ಜನರಿಗೆ ಯಾವುದೇ ಪಾತ್ರವಿರದೆ,ಮೂಕಪ್ರೇಕ್ಷಕರಾಗಿದ್ದರು. ಸೋನಿಯಾ ಗಾಂಧಿಯವರು ರಾಜಿನಾಮೆ ನೀಡಿ ಮರು ಚುನಾವಣೆ ನಡೆದಾಗಲೂ ಈ ನತದೃಷ್ಟ ಜನತೆಗೆ ತಮ್ಮ ಪ್ರತಿನಿಧಿಯನ್ನು ಆರಿಸಲು ಸಾಧ್ಯ ವಾಗಲಿಲ್ಲ. ನಂತರ ನಡೆದ ವಿಧಾನ ಸಭೆ ಚುನಾ ವಣೆ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ತಮ್ಮ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಇವರಿಗೆ ಸಿಗಲೇ ಇಲ್ಲ.

ಎಲ್ಲಿದೆ ಈ ಕಾಲೋನಿ?

ರಾಷ್ಟ್ರದ ಜನ ತಂತ್ರದ ಮುಖ್ಯವಾಹಿನಿಯಿಂದ ಬೇರ್ಪಟ್ಟ ಈ ಕಾಲೋನಿ ಯಾವ ದಟ್ಟ ಅರಣ್ಯದಲ್ಲಿದೆ, ಎಂಬ ಚಿಂತೆಯೇ? ನೀವು ಯಾವುದೇ ದಟ್ಟಾರಣ್ಯ ಪ್ರವೇಶಿಸಬೇಕಾಗಿಲ್ಲ. ಬಳ್ಳಾರಿಗೆ ಬನ್ನಿ, ಇಲ್ಲಿಂದ ಬೆಳಗಲ್ ರಸ್ತೆಯಲ್ಲಿ ನೀವು 6 ಕಿ.ಮೀ. ದೂರ ಕ್ರಮಿಸಿದರೆ ಸಾಕು. ಆ ನತದೃಷ್ಟ ಆಶ್ರಯ ಕಾಲೋನಿ (ಡಿ.ಸಿ.ನಗರ) ನಿಮಗೆ ಸಿಗುತ್ತದೆ.

ಮೂಲಭೂತ ಸೌಲಭ್ಯ ವಂಚಿತರು

ಬಳ್ಳಾರಿ ನಗರದ ವಿವಿಧ ಬಡಾವಣೆಗಳಲ್ಲಿ ವಾಸವಾಗಿದ್ದ ಗುಡಿಸಲು ವಾಸಿಗಳನ್ನು ಒಕ್ಕಲೆಬ್ಬಿಸಿ 1997ರಲ್ಲಿ ಬೆಳಗಲ್ ರಸ್ತೆಯ ಈ ಪ್ರದೇಶಕ್ಕೆ ಸ್ಥಳಾಂತರಿಸಲಾಗಿತ್ತು. ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದರು. ನಾಲ್ಕು ವರ್ಷಗಳನ್ನು ಕಳೆದರೂ ಈ ಜನತೆಗೆ ಮೂಲ ಭೂತ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಿಕೊಡಲಿಲ್ಲ. ಕಳಪೆ ಗುಣಮಟ್ಟದ ಈ ಮನೆಗಳು ಮಳೆಗಾಳಿಗೆ ಹೆದರಿ ಎಂದು ಮುದುರಿ ಬೀಳುವವೋ ಹೇಳಲಾಗದು.

ಒಂದೇ ಕೊಳವೆ ಬಾವಿ

ಸುಮಾರು ಒಂದು ಸಾವಿರದ ಇನ್ನೂರು ಮನೆಗಳಿರುವ 5 ಸಾವಿರ ಜನರು ವಾಸಿಸುವ ಈ ಕಾಲೋನಿಗೆ ಕುಡಿಯುವ ನೀರೊದಗಿಸುವ ಕೊಳವೆ ಬಾವಿ ಮಾತ್ರ ಒಂದೇ. ಇನ್ನು ಸಾರ್ವಜನಿಕ ನಳಗಳಂತೂ ಇಲ್ಲವೇ ಇಲ್ಲ. ಮಗ್ಗುಲಲ್ಲೆ ಇರುವ ಬಳ್ಳಾರಿ ನಗರದ ಜನತೆಗೆ ಈಗ 2ನೇ ಹಂತದ ಕುಡಿಯುವ ನೀರಿನ ಯೋಜನೆ "ಸೋನಿಯಾ ಗಾಂಧಿ ಬ್ಯಾರೇಜ್' ಹೆಸರಿನಲ್ಲಿ ತಯಾರಿ ನಡೆಯುತ್ತಿದೆ. ಆ ಯೋಜನೆಯ ಕೊಳವೆ ಕಾಲೋನಿಯಿಂದ ಒಂದೆರಡು ಕಿ.ಮಿ. ಅಂತರದಲ್ಲೇ ಬರಲಿದೆ. ಆದರೆ ಕಾಲೋನಿಯ ಜನರಿಗೆ ಕುಡಿಯುವ ನೀರಿನ ಭವಣೆಯ ಬಗ್ಗೆ ಸರ್ಕಾರ ಎಳ್ಳಷ್ಟು ಚಿಂತಿಸಿಲ್ಲ.

ಲೋ ವೋಲ್ಟೇಜ್ ವಿದ್ಯುತ್

ಡಿ.ಸಿ. ಕಾಲೋನಿಯಲ್ಲಿ ಬೀದಿ ದೀಪಗಳಂತೂ ಇಲ್ಲವೆ ಇಲ್ಲ. ಬೆಳಕು ನೀಡುವ ಸೂರ್ಯ ಮರೆಯಾಗುತ್ತಿದ್ದಂತೆ ಇಲ್ಲಿನ ಬೀದಿಗಳೂ ಕತ್ತಲೆಯಲ್ಲಿ ಮುಳುಗಿಹೋಗುತ್ತವೆ. ಹೆಂಗಸರು ಮಕ್ಕಳು ಮನೆ ಸೇರಿಕೊಳ್ಳುತ್ತಾರೆ. ಇಲ್ಲಿನ ಬೀದಿಗಳು ಕಾಣಬೇಕೆಂದರೆ ಮತ್ತೆ ಸೂರ್ಯ ಬರಲೇಬೇಕು. ವಿದ್ಯುತ್‌ನ ಕಡಿಮೆ ವೋಲ್ಟೇಜ್‌ನಿಂದಾಗಿ ಮನೆಗಳ ವಿದ್ಯುತ್ ದೀಪಗಳು ಸೀಮೆಎಣ್ಣೆ ದೀಪಗಳಷ್ಟೆ ಬೆಳಕು ನೀಡುತ್ತಿವೆ. ಮಕ್ಕಳಂತೂ ಆ ಮಂದ ಬೆಳಕಿನಲ್ಲಿ ಓದಲು ಪಡುವ ಪಾಡು ಹೇಳತೀರದು. ಅನೇಕ ಮನೆಗಳಿಗೆ ವಿದ್ಯುತ್ ಸಂಪರ್ಕವೇ ಇಲ್ಲ.

ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಿದಾಗ ಕಟ್ಟಿದ ಶೌಚಾಲಯಗಳು ಈಗ ಉಪಯೋಗಿಸಲಾರದಷ್ಟು ಹಾಳಾಗಿವೆ. ಸಾರ್ವಜನಿಕ ಶೌಚಾಲಯವೂ ಇಲ್ಲವೆಂದಾಗ ಹೆಂಗಸರು, ಮಕ್ಕಳು ಪಡುವ ಪಾಡು ಯಾರಿಗಾದರೂ ಅರ್ಥವಾದೀತು. ಬಳ್ಳಾರಿ ನಗರಕ್ಕೆ 2ನೇ ಹಂತದ ಒಳ ಚರಂಡಿ ಯೋಜನೆ ಜಾರಿಗೊಳಿಸಲಾಗುತ್ತಿದೆ. ಆ ಯೋಜನೆಯಲ್ಲೂ ಈ ಕಾಲೋನಿಯನ್ನು ಲೆಕ್ಕಕ್ಕೆ ತೆಗದುಕೊಂಡಿಲ್ಲ.

ಇಲ್ಲೊಂದು ಪ್ರಾಥಮಿಕ ಶಾಲೆಯೊಂದಿದೆ ಇದು ಸ್ಥಾಪನೆಯಾಗಿ ನಾಲ್ಕು ವರ್ಷಗಳಾಗಿವೆ. 160 ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿರುವ ಈ ಶಾಲೆಗೆ ಶಿಕ್ಷಕರು ಮಾತ್ರ ಒಬ್ಬರೇ.

ಹೋರಾಟದ ಹಾದಿಯಲ್ಲಿ

ಇಷ್ಟೆಲ್ಲಾ ಸಮಸ್ಯೆಗಳನ್ನು ಹೊತ್ತ ಇಲ್ಲಿನ ಜನತೆ ಜನಪ್ರತಿನಿದಿಗಳನ್ನು, ಅಧಿಕಾರಿಗಳನ್ನು ಕಂಡು ಸಮಸ್ಯೆ ನಿವಾರಣೆಗೆ ಮನವಿ ಮಾಡಿದರೂ ಯಾವ ಅಧಿಕಾರಿಯೂ ಇತ್ತ ಗಮನಹರಿಸಲಿಲ್ಲ. ಇಲ್ಲಿನ ಯುವಕರು ಎಚ್ಚೆತ್ತುಕೊಂಡು ಸಂಘಟಿತರಾದರು.



ಡಿವೈಎಫ್‌ಐ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ

ದೇಶದ ದೊಡ್ಡ ಸಂಘಟನೆಯಾದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI) ನೇತೃತ್ವದಲ್ಲಿ ಘಟಕವೊಂದನ್ನು ಸ್ಥಾಪಿಸಿದರು. ತಮ್ಮ ಸಮಸ್ಯೆಗಳ ವಿರುದ್ಧ ಹೋರಾಡಲು ಸಿದ್ದತೆ ನಡೆಸಿದರು. ಪ್ರಾರಂಭಿಕ ಹಂತವಾಗಿ ಜಿಲ್ಲಾಧಿಕಾರಿಗಳಿಗೆ ತಮ್ಮ ಸಮಸ್ಯೆಗಳನ್ನು ಹೊತ್ತ ಮನವಿ ಪತ್ರ ಸಲ್ಲಿಸಿದರು. ಇದೇ ವರ್ಷದ ಸೆಪ್ಟೆಂಬರ್ 25 ರಿಂದ ಅಕ್ಟೋಬರ್ 10ರ ವರೆಗೆ ನಾಲ್ಕು ಬಾರಿ ಮನವಿ ಪತ್ರ ಸಲ್ಲಿಸಿದರೂ ಜಿಲ್ಲಾಧಿಕಾರಿ ಜನತೆಯ ಸಮಸ್ಯೆಗೆ ಸ್ಪಂದಿಸಲಿಲ್ಲ. ನಂತರ ಜನತೆ ಬೀದಿಗಿಳಿದು ಪ್ರತಿಭಟಿಸಲು ನಿರ್ಧರಿಸಿದರು.

ಬೃಹತ್ ಮೆರವಣಿಗೆ


ನವೆಂಬರ್ 7 ರಂದು ಸುಮಾರು ಒಂದು ಸಾವಿರ ಜನರ ಬೃಹತ್ ಮೆರವಣಿಗೆ ನಡೆಸಿ, ಸರ್ಕಾರದ ನಿರ್ಲಕ್ಷ ದೋರಣೆ ವಿರುದ್ಧ ದಿಕ್ಕಾರ ಕೂಗಿದರು. ತಮ್ಮ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವಂತೆ ಒತ್ತಾಯಿಸಿದರು. ಹತ್ತು ದಿನಗಳೊಳಗಾಗಿ ನಮ್ಮ ಸಮಸ್ಯೆಗೆ ಸ್ಪಂದಿಸದಿದ್ದರೆ, ಮತ್ತಷ್ಟು ದೊಡ್ಡ ಮಟ್ಟದ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಹೆಂಗಸರು, ಮಕ್ಕಳು, ಮುದುಕರೆನ್ನದೆ ಬೃಹತ್ ಸಂಖ್ಯೆಯಲ್ಲಿ ಸೇರಿದ್ದ ಜನತೆಯ ಪ್ರತಿಭಟನೆಯನ್ನು ಕಂಡ ಜಿಲ್ಲಾದಿಕಾರಿ ಮನವಿ ಪತ್ರ ಸ್ವೀಕರಿಸಿ, ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಬೇಕಾಯ್ತು.

ಮತದಾರರ ಪಟ್ಟಿಯಲ್ಲಿ ಆಶ್ರಯ ಕಾಲೋನಿಯ ಎಲ್ಲಾ ಅರ್ಹರನ್ನು ಸೇರಿಸಬೇಕು. ಬಳ್ಳಾರಿ ನಗರದ 2ನೇ ಹಂತದ ಕುಡಿಯುವ ನೀರಿನ ಯೋಜನೆಯಲ್ಲಿ ಈ ಪ್ರದೇಶವನ್ನು ಸೇರಿಸಿ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಮತ್ತು ಬಳ್ಳಾರಿ ನಗರದ 2ನೇ ಹಂತದ ಒಳಚರಂಡಿ ಯೋಜನೆಯಲ್ಲಿ ಈ ಪ್ರದೇಶವನ್ನೂ ಸೇರಿಸಬೇಕು. ವಿದ್ಯುತ್ ವ್ಯವಸ್ಥೆ ಸರಿಪಡಿಸಿ, ಅಗತ್ಯಬಿದ್ದರೆ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು. ವಿದ್ಯುತ್ ಸಂಪರ್ಕ ಪಡೆಯದ ಮನೆಗಳಿಗೆ ಬಾಗ ಜ್ಯೋತಿ ಯೋಜನೆಯಡಿ ಸಂಪರ್ಕ ಕಲ್ಪಿಸುವುದು. ಇಲ್ಲಿ ವಾಸಿಸುವ ಎಲ್ಲರಿಗೂ ಹಸಿರು ಕಾರ್ಡ್ ವಿತರಿಸುವುದು, ಶಾಲೆಗೆ ಮತ್ತಿಬ್ಬರು ಶಿಕ್ಷಕರನ್ನು ನೇಮಿಸುವುದು. ಪ್ರಾಥಮಿಕ ಆರೋಗ್ಯ ಕೇಂದ್ರ, ಸಾರ್ವಜನಿಕ ಶೌಚಾಲಯ ಸ್ಥಾಪನೆ ಹೆಚ್ಚಿನ ಬಸ್ ಸೌಲಭ್ಯ, ಸೂಕ್ತ ರಸ್ತೆ ವ್ಯವಸ್ಥೆ,ಬಳ್ಳಾರಿ ನಗರದಿಂದ ಕಸ ತಂದು ಈ ಪ್ರದೇಶದಲ್ಲಿ ಸುರಿಯುವುದನ್ನು ತಡೆಗಟ್ಟುವುದು. ಅನದಿಕೃತವಾಗಿ ನಡೆಯುತ್ತಿರುವ ಕಲ್ಲುಗಣಿ ಕೆಲಸ ಸಲ್ಲಿಸುವುದು. ಮುಂತಾದ ಬೇಡಿಕೆಗಳನ್ನು ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಗಳಿಗೆ ಸಲ್ಲಿಸಲಾಯ್ತು.

ಈಡೇರಿದ ಬೇಡಿಕೆಗಳು

ಕೂಡಲೇ ಈ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸದಿದ್ದಲ್ಲಿ ಚಳುವಳಿಯನ್ನು ಉಗ್ರ ಸ್ವರೂಪದಲ್ಲಿ ನಡೆಸುವುದಾಗಿ ಘೋಷಿಸಲಾಯಿತು. ಕೊನೆಗೆ ಕಿವಿಗೊಟ್ಟ ಆಡಳಿತವು ಮತದಾನ ಹಕ್ಕು, ವಿದ್ಯುತ್, ನೀರು ಪೂರೈಕೆ ವ್ಯವಸ್ಥೆಯನ್ನು ಕಲ್ಪಿಸಿ ಕೊಡಲು ಮುಂದಾಗಿದೆ. ಈ ನಡುವೆ 'ವರ್ಲ್ಡ್ ವಿಷನ್' ಎಂಬ ವಿದೇಶಿ ಹಣಕಾಸಿನ ನೆರವಿನ ಸ್ವಯಂಸೇವಾ ಸಂಸ್ಥೆಯೊಂದು ತಾನು ಮಣ್ಣು ತಂದು ಸುರಿದು ರಸ್ತೆ ನಿರ್ಮಿಸ ತೊಡಗಿದೆ. ಜನ ಚಳುವಳಿಗಳುವಳಿ ಮಾಡಬಾರದೆಂದು ಉಪದೇಶಿಸುತ್ತಿದೆ.

– ಸಿದ್ದಯ್ಯ, ರಘು



ಸ್ವಾತಂತ್ರ್ಯ ಸಮರದಲ್ಲಿ ಅರಳಿದ ಹೂವು

ಅಗಲಿದ ಕ್ರಾಂತಿಕಾರಿ ಯೋಧ ಕಾಮ್ರೇಡ್ ಎನ್.ಕೆ.ಉಪಾಧ್ಯಾಯರು

ಈ ಎರಡೇ ವರುಷಗಳಲ್ಲಿ ಮತ್ತೇ ಬರಸಿಡಿಲು ಬಡಿದ ಸುದ್ದಿ. ಎನ್.ಕೆ.ಯವರ ನಿಧನ. (9.12.2001 ಮಧ್ಯಾಹ್ನ 12 ಗಂಟೆಗೆ ವಿಜಾಪುರದ ಆಸ್ಪತ್ರೆಯಲ್ಲಿ) ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರಲ್ಲೊಬ್ಬರಾಗಿದ್ದ, ಏಕೀಕರಣಗೊಂಡ ಕರ್ನಾಟಕದ ಉದಯಕ್ಕಾಗಿ, ಗೋವಾ ವಿಮೋಚನೆಗಾಗಿ ಫ್ಯಾಸಿಸ್ಟ್ ಹಿಟ್ಲರ್ ಕೂಟದ ಸೋಲಿಗಾಗಿ, ಭಾರತದ ಸ್ವಾತಂತ್ರ್ಯಕ್ಕಾಗಿ ನಂತರದಲ್ಲಿ ನಾಡಿನ ದುಡಿವ ಜನರ ವಿಮೋಚನೆ-ಸಮಗ್ರ ಅಭಿವೃದ್ಧಿ, ನಾಡಿನ ಸಮಗ್ರತೆಗಾಗಿ ಅಹೋರಾತವಾಗಿ ಸೆಣಸಿದ ಹಿರಿಯ ಕ್ರಾಂತಿಕಾರಿ ಸೇನಾನಿ ಎನ್.ಕೆ.ಅವರ ಅಗಲಿಕೆ, ಅಂತಿಮ ಯಾತ್ರೆ ಹಾಗೂ ಮಿಡಿದ ಕಂಬನಿಗಳು ಇಲ್ಲಿ.

ಪ್ರಿಯ ಸಂಗಾತಿ ಎನ್.ಕೆ.ಯವರೇ

'ಐಕ್ಯರಂಗ' ಕ್ಕೆ ಇನ್ನೂ ಒಂದಿಷ್ಟು ಹಣ ಕೂಡಿಸೋಣ; ನಾನು ವಿಜಾಪುರಕ್ಕೆ ಹೋಗಿ ನಾಲ್ಕು ದಿನಗಳಿದ್ದು ಬರುತ್ತೇನೆ' ಎಂದು ಮೂರು ಜನರ ಹೆಸರು ಹೇಳಿಹೋದವರು ಮತ್ತೇ ಬರಲಿಲ್ಲ.

ನಿಮಗೆ ಗೊತ್ತಿತ್ತು. ಕಳೆದೆರಡು ವರುಷಗಳಿಂದ ನಿಮ್ಮ ಆರೋಗ್ಯ ಮೊದಲಿನಂತೆ ಇರಲಿಲ್ಲ ಎಂದು. ಅದರಲ್ಲಿಯೂ ಎರಡು ಬಾರಿ ತೀವ್ರ ಸ್ವರೂಪದ ಹೃದಯಾಘಾತಕ್ಕೆ ಒಳಗಾಗಿ, ನಂತರ ಸಿಹಿಮೂತ್ರದ ಸಮಸ್ಯೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ 'ದೇಹಕ್ಕೆ ವಯಸ್ಸಾಯಿತೆಂದು' ಏನೋ ನಿರ್ಧಾರಕ್ಕೆ ಬಂದವರಂತೆ ಹೇಳಿದಿರಿ. ಆರೋಗ್ಯ ಕೈಕೊಡುತ್ತಿದ್ದದ್ದು 'ಚಟುವಟಿಕೆಗಳಿಂದ ಕಟ್ಟಿ ಹಾಕಿಬಿಡುತ್ತದೆ' ಒಬ್ಬ ಕಮ್ಯುನಿಸ್ಟ್ ಜನತೆಯಿಂದ ದೂರ ಇರೋದು ಅಂದ್ರೆ, ಮೀನನ್ನು ನೀರಿನಿಂದ ಹೊರ ಹಾಕಿದಂತೆ ಎಂದೇ ಆತಂಕಿಸಿದಿರಿ. ಹಾಗೆ ನೋಡಿದರೆ 'ಸಣ್ಣಪುಟ್ಟ' ಎಂದು ನೀವೇ ಭಾವಿಸಿದ ರೋಗಗಳಿಗೆ ಸಾಧಾರಣ ಔಷಧಿ ತಗೊಂಡವರಲ್ಲ. ರತನಮಹಲ್‌ನ ರೂಂ. 4 ನಲ್ಲಿ ನೀವು, ಸಿ.ನಂಜುಂಡಪ್ಪನವರು ನಿವಾಸಿಗಳಾಗಿದ್ದಾಗ ಸಿಎನ್ ನಗಡಿಗ, ತಲೆನೋವಿಗೆ ಔಷಧಿ ತಗೊಳ್ಳುವಾಗ ಛೇಡಿಸಿ, ಝಾಡಿಸಿ ಮಾತನಾಡುತ್ತಿದ್ದಿರಲ್ಲಾ....

ಚಿರನಿದ್ರೆಗೆ....

ನಿಮ್ಮ ಆರೋಗ್ಯ ಹದಗೆಟ್ಟ ನಂತರವೂ ಸುಮ್ಮನೇ ಕೂಡಲಿಲ್ಲ, ವಿಶ್ರಾಂತಿಗಾಗಿ ಹೇಳಿದಂತೆ ಮಾಡಲಿಲ್ಲ. ಇರುವಷ್ಟು ಕಾಲ ಕೆಲಸ ಮಾಡಿಯೇ ಬಿಡಬೇಕು ಎಂದು ನಿರ್ಧರಿಸಿ ಬೀದಿಗೆ ಇಳಿದಿರಲ್ಲ. ಮೊನ್ನೆ ನೀವು ವಿಜಾಪುರದ ಕಛೇರಿಯಲ್ಲಿ ಪಕ್ಷದ ಜಿಲ್ಲಾ ಸಮ್ಮೇಳನಕ್ಕೆ ಕರಡು ವರದಿಯನ್ನು ಸಮಾರು 32 ಪುಟಗಳಷ್ಟು ಸಿದ್ಧಗೊಳಿಸಿ, ನೀರು ಕುಡಿಯುವಾಗ ನೆಲಕ್ಕೆ ಕುಸಿದಿರಲ್ಲಾ.... ಪಕ್ಷದ ಕೆಲಸ ಮಾಡುತ್ತಲೇ ನೆಲಕ್ಕೆ, ಚಿರನಿದ್ರೆಗೆ ಸರಿದೇಬಿಟ್ಟಿರಲ್ಲಾ. ಹಾಗೆ ಪಕ್ಷದ ಕಛೇರಿಯಲ್ಲೇ ಮಲಗಿದವರು ಆಸ್ಪತ್ರೆ ಸೇರಿದರೂ ಎಚ್ಚರವಾಗಲೇ ಇಲ್ಲ. ನಿಮಗೆ ಅನಾರೋಗ್ಯವೆನಿಸಿದರೆ, ವಿಜಾಪುರಕ್ಕೆ ಹೋಗಬೇಕು. ಅಲ್ಲೇ ಇರಬೇಕು. ಜನರನ್ನು ನೋಡಬೇಕು' ಎಂದೇ ಹೇಳುತ್ತಿದ್ದ ನೀವು....... ಬಯಸಿದಂತೆಯೇ ಆಯಿತೇ? ವಕೀಲರ ಸಂಘದ ಚುನಾವಣಾ ಫಲಿತಾಂಶ ಏನಾಯ್ತೆಂದು ವಿಚಾರಿಸಲು ತರುಣ ವಕೀಲ ಸಂಗಾತಿ ಶ್ರೀಧರ ಕುಲಕರ್ಣಿಯನ್ನು ಭೇಟಿ ಮಾಡಲು ಆ ಬೆಳಗಿನ ಜಾವವೇ ಮನೆಯಿಂದ ಹೊರನಡೆದವರು ಮತ್ತೆ ಮನೆ ಸೇರಿದುದು ಹತ್ತು ದಿನಗಳ ನಂತರ. ಅಂತಿಮಯಾತ್ರೆಗೆ ಸಿದ್ದಗೊಳ್ಳಲೆಂದೇ.

ಪ್ರಿಯ ಕಾಮ್ರೇಡ್, ನೀವು ಶಿಸ್ತಿನ ಸಿಪಾಯಿ, ಯೋಧನ ಎದೆಗಾರಿಕೆ, ಮುನ್ನುಗ್ಗುವ ಛಲ, ಸರಳತೆ, ಪ್ರಾಮಾಣಿಕತೆ, ತಾನೇ ತಾನಾಗಿ ಗೋಚರವಾಗುವ ಅಂಶಗಳು. ಹೌದು ನೀವು ಕ್ರಾಂತಿಕಾರಿ ಯೋಧರೇ. ನಿಮ್ಮ ಮನೆಗೆ ನಾನು ಮೊದಲ ಬಾರಿ ಬಂದಾಗ 'ಸಿಪಾಯಿ ಯೂನಿಫಾರಂ'ನ ಫೋಟೋ ನೋಡಿದೆ. ಅದು ಯುವಕರಾಗಿದ್ದಾಗ, ಸ್ವಯಂ ಸೇವಕರಾಗಿದ್ದಾಗ ತೆಗೆದಿದ್ದು ಎಂದಿರಿ.

ಓ ಯುವ ಕಮಾಂಡರ್!

ಹೌದಲ್ಲ! 1939 ರಲ್ಲಿ ಉದ್ಯೋಗಕ್ಕೆಂದೇನೋ ಬಾಂಬೆಗೆ ಹೋದಿರಿ. ಉದ್ಯೋಗವನ್ನೇನೋ ಅಂಗೀಕರಿಸಿದಿರಿ. ಆದರೆ ಹೊಟ್ಟೆ ಹೊರೆಯುವುದನ್ನಲ್ಲ! ಆಗಲೇ ಅಲ್ಲಿದ್ದ ಹಿರಿಯ ಸಹೋದರನಾದ ದಿ. ಸಂಗಾತಿ ಎನ್.ಎಲ್.ರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದಿರಿ.ಬ್ರಿಟೀಶ್ ಸುಲಿಗೆಗಾರರನ್ನು ದೇಶದಿಂದ ಒದ್ದೋಡಿಸಿ, ಸ್ವಾತಂತ್ರ್ಯ ಗಳಿಸುವ ಶಪಥದೊಂದಿಗೆ ಪೂರ್ಣಾವಧಿಯಾಗಿ ತೊಡಗಿಸಿಕೊಂಡಿರಿ. ಆಗಲೇ ಅಲ್ಲವೇ ನೀವು 'ನ್ಯಾಷನಲ್ ಗಾರ್ಡ್' ಎಂಬ ಯುವ ಸಂಘಟನೆಯ ಡೆಪ್ಯುಟಿ ಕಮಾಂಡರ್ ಆಗಿದ್ದು. ಆಗಲೇ ಅಲ್ಲವೇ ನಿಮ್ಮನ್ನು ಬಂಧಿಸಿ ಬ್ರಿಟಿಷರು ಜೈಲಿಗೆ ತಳ್ಳಿದ್ದು. ಆಗಲೇ ತಾನೇ ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದು ಪಕ್ಷಕ್ಕೆ 1941 ರಲ್ಲಿ ಸದಸ್ಯರಾದದ್ದು. ಹೀಗೆ ಒಬ್ಬ ದೇಶಭಿಮಾನಿ ಯುವ ಹೋರಾಟಗಾರನಾಗಿ, ಭಾರತದ ವಿಮೋಚನೆಯ ಹೋರಾಟದಲ್ಲಿ ಧುಮುಕಿ, ಅದೇ ಕಣದಲ್ಲೇ ಇಡೀ ದುಡಿವ ವರ್ಗದ ಕ್ರಾಂತಿಕಾರಿ ಯೋಧನಾಗಿ ಇಡೀ ಜೀವನವನ್ನೇ ಸಮರ್ಪಿಸಿದ್ದು.



ಶಿಸ್ತಿನ ಸಿಪಾಯಿ ಎನ್ಕೆ

ಕ್ರಾಂತಿಕಾರಿಗೆ ಯಾವ ಗಡಿ?

ಆ ಸುಮಾರಿನಲ್ಲೇ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ನಿಮ್ಮನ್ನು ಹಾಗೂ ಕಾಂ. ಎನ್.ಎಲ್. ರನ್ನು 'ಕನ್ನಡ ಭಾಷೆ' ಮಾತನಾಡುವ ಈ ಪ್ರದೇಶದಲ್ಲಿ ಪಕ್ಷವನ್ನು ಸಂಘಟಿಸಲು ಕಳುಹಿಸಿದ್ದು. ಹುಟ್ಟಿದ್ದು ಮಂಗಳೂರಿನ ಬಳಿಯ ನಂದಿಕೂರು ಆದರೂ ಎನ್.ಎಲ್.ರವರು ಬೆಂಗಳೂರಿನತ್ತ, ನೀವು ಹುಬ್ಬಳ್ಳಿಗೆ. ಪಕ್ಷದ ಆದೇಶವನ್ನು ಸ್ಫೂರ್ತಿಯಿಂದ ಸ್ವೀಕರಿಸಿದಿರಿ, ಕ್ರಾಂತಿಕಾರಿಗೆ ಯಾವ ಊರು, ದೇಶ, ಗಡಿಗಳ ಮಿತಿಯಿಲ್ಲ. ವೈಯುಕ್ತಿಕ ಆಯ್ಕೆಗಳೂ ಇಲ್ಲವೆಂದು ಹಾಗೇ ನಡೆದುಬಂದ ನೀವು 1943 ರಲ್ಲಿ ಹುಬ್ಬಳ್ಳಿ ಪ್ರದೇಶದಲ್ಲಿ ಜನ ಚಳುವಳಿಗೆ ಮುಂದಾದಿರಿ. ನಿಮ್ಮನ್ನು ಅಲ್ಲಿಂದಲೇ ಬ್ರಿಟಿಷ್ ಆಡಳಿತ ಗಡಿಪಾರು ಮಾಡಿತೆಂದ ಮೇಲೆ ಚಟುವಟಿಕೆಗಳ ಸ್ವರೂಪ ಹೇಗಿರಬಹುದು ಎಂದು ಊಹಿಸಬಹುದು. 1943 ರಲ್ಲಿ ಪಕ್ಷ ಸೂಚಿಸಿದಂತೆ ಮತ್ತೆ ಬಗಲಿಗೆ ಚೀಲ ನೇತುಹಾಕಿಕೊಂಡು ನೀವು ನಡೆದಿದ್ದು ಬಿಜಾಪುರದತ್ತ. ಅಲ್ಲಿಯೂ ವಿದ್ಯಾರ್ಥಿ, ಮುನ್ಸಿಪಲ್ ನೌಕರರು, ರೈಲ್ವೆ, ಪವರ್ ಲೂಂ, ಕೈಮಗ್ಗ, ಕೈಗಾರಿಕಾ ಕಾರ್ಮಿಕರು, ರೈತರ ನಡುವೆ ಕ್ರಾಂತಿಕಾರಿ ಚಟುವಟಿಕೆಗಳಿಗೆ ಗಮನ ನೀಡಿದಿರಿ. ಇದರಿಂದ ಕಮ್ಯುನಿಸ್ಟ್ ಪಕ್ಷದ ನೆಲೆ ಆಳಗೊಂಡು ವಿಸ್ತರಣೆಗೂ ಸಾಧ್ಯವಾಯಿತು.

ಫ್ಯಾಸಿಸ್ಟರ ವಿರುದ್ಧ

ಈ ನಡುವೆ ಕಮ್ಯುನಿಸ್ಟ್ ಪಕ್ಷಕ್ಕಿದ್ದ ನಿಷೇಧವನ್ನು ಹಿಂತೆಗೆದು ನಂತರ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ನಾಜಿಗಳನ್ನು ಸೋಲಿಸಲು ಜನರ ನಡುವೆ 'ಜನತಾ ಯುದ್ಧಕ್ಕೆ ಬೆಂಬಲ ಗಳಿಸಲು ಶ್ರಮಿಸಬೇಕೆಂದಾಗ ನೀವು ಅದರಲ್ಲಿ ಹಿಂದೆ ಉಳಿಯಲಿಲ್ಲ. ಮಾತ್ರವಲ್ಲ ಫ್ಯಾಸಿಸ್ಟರ ಕೂಟ ಭಾರತದ ಮೇಲೆ ಆಕ್ರಮಣ ಮಾಡಿದರೆ, ಅದರಲ್ಲಿಯೂ ದಕ್ಷಿಣ ಭಾರತದ ಕಡೆ ನುಗ್ಗಿದಾಗ ಹಿಮ್ಮೆಟ್ಟಿಸಿ ಹೋರಾಡಲು 'ಗೆರಿಲ್ಲಾ ಯುದ್ಧ ತಂತ್ರದ ತರಬೇತಿಯನ್ನು ಜನತೆಗೆ ನೀಡಲು ಪಕ್ಷವು ಮುಂದಾದಾಗ, ನೀವು ತರಬೇತಿ ಪಡೆದಿರಿ, ಇತರೆ ಕಾರ್ಯಕರ್ತರನ್ನು ತರಬೇತಿಗೊಳಿಸಿ ಅದರಲ್ಲಿ ತೊಡಗಿದಿರಿ.

ಸ್ವಾತಂತ್ರ್ಯಕ್ಕಾಗಿ

ಸ್ವಾತಂತ್ರ್ಯ ಬಂದ ನಂತರವೂ ನೀವು ಸುಮ್ಮನೇ ಕೂಡಲಿಲ್ಲ. ಗಳಿಸಿದ ಈ ಸ್ವಾತಂತ್ರ್ಯ ಜನಸಾಮಾನ್ಯರಿಗೆ ದಕ್ಕಬೇಕೆಂದು, ಪೂರ್ಣ ಪ್ರಮಾಣದಲ್ಲಿ ದೇಶೀಯ ಸುಲಿಗೆಗಾರರಿಂದಲೂ ಮುಕ್ತರಾಗಬೇಕೆಂದೂ ಜನತೆಯ ಪ್ರಜಾಸತ್ತಾತ್ಮಕ ಸಮರದ ಮುನ್ನಡೆಯಲ್ಲಿ ತಾವೂ ಸಹ ಮತ್ತೇ ಸಕ್ರಿಯವಾಗಿ ತೊಡಗಿದಿರಿ. ಒಂದೆಡೆ ಅದಕ್ಕಾಗಿ ಜನಚಳುವಳಿ, ಸಂಘಟನೆ, ಪಕ್ಷದ ನೇತೃತ್ವ. ಇದೇ ಹೊತ್ತಿನಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಆರಂಭಗೊಂಡಿದ್ದ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ಧುಮುಕಿತು. ಕರ್ನಾಟಕದ ಏಕೀಕರಣಕ್ಕಾಗಿ ತಾವೂ ಸಹ ಮುಂಚೂಣಿಯಲ್ಲಿ ನಿಂತು ಹೋರಾಟ ಕಟ್ಟಿ ಬೆಳೆಸಿದಿರಿ. ಕಮ್ಯುನಿಸ್ಟ್ ಪಕ್ಷದ ಪಾಲ್ಗೊಳ್ಳುವಿಕೆಯಿಂದ ಇದು ಜನತೆಯ ಚಳುವಳಿಯಾಗಿ ವಿಸ್ತೃತವಾಯಿತು. ಅದಕ್ಕೊಂದು ಮೊನಚು ತಂದಿತು. ಹಲವು ತ್ಯಾಗ ಬಲಿದಾನಗಳಿಂದ ಏಕೀಕೃತ ರಾಜ್ಯ ನಿರ್ಮಾಣವಾಯಿತು. ಈಗ ಎಷ್ಟು ಜನ ಇಂದಿನ ನವೆಂಬರ್ ನಾಯಕರಿಗೆ ಈ ಸಂಗತಿ ತಿಳಿದಿದೆ? ಗೌರವವಿದೆ?

ಗುಂಡೇಟಿಗೆ ಅಳುಕದ....

ಹಾಗೆಯೇ ಗೋವಾವನ್ನು ಪೋರ್ಚುಗೀಸರ ಆಡಳಿತದಿಂದ ಬಿಡುಗಡೆಗೊಳಿಸಲು ನಡೆದ ಹೋರಾಟದಲ್ಲಿಯೂ ಮುಂಚೂಣಿಯಾಗಿ ನಿಂತಿರಿ. 'ಮುಂದಡಿ ಇಟ್ಟವಂಗೆ ಗುಂಡೇಟು ಖಾಯಂ' ಎಂದು ಗೊತ್ತಿದ್ದರೂ ಹೆದರದೇ ಮುನ್ನುಗ್ಗಿದ ಘಟನೆ ನೆನೆದರೆ ರೋಮಾಂಚನವಾಗುತ್ತದೆ. ನಿಮ್ಮೊಳಗಿದ್ದ ಕ್ರಾಂತಿಕಾರಿ ಗೆರಿಲ್ಲಾ ತಂತ್ರವೇ ನಿಮ್ಮನ್ನು ಒಮ್ಮೆ ಗುಂಡೇಟಿನಿಂದ ಬಚಾವು ಮಾಡಿತು ಎಂಬುದು ಇನ್ನೂ ನಮ್ಮಲ್ಲಿ ನಿರಾಳ ಮತ್ತು ಹೆಮ್ಮೆಯ ಭಾವನೆಗಳನ್ನು ಉಕ್ಕಿಸುತ್ತದೆ. ಅದರ ತುಂಬೆಲ್ಲಾ ಕೆಂಬಾವುಟದ ಹಾರಾಟ.

ಅಂತಹ ಸನ್ನಿವೇಶಗಳಲ್ಲಿ ನಿಮ್ಮದು ಗಟ್ಟಿ ನಿರ್ಧಾರ, ಕಠಿಣ ಹೃದಯ. ನಿಜ ಆದರೆ ಒಡನೆಯೇ ಕಾಣುವುದು ನಿಮ್ಮ ಹೆಂಗರುಳು. ಹಿರಿಯ ಸಂಗಾತಿ ಎನ್.ಎಲ್.ಅವರ ದೇಹವನ್ನು ಬೆಂಕಿ ನಾಲಿಗೆ ಆವರಿಸುತ್ತಿರುವಾಗ ಅದೆಷ್ಟು ಬಿಕ್ಕಿ ಬಿಕ್ಕಿ ಅತ್ತಿರಿ. ಕೊನೆಗೆ ಕಾಂ. ವಿ.ಜೆ.ಕೆ. ನಿಮಗೆ ಕೊಂಚ ಗದರಿಸಿ ಹೇಳಬೇಕಾಯಿತು. ಅವರು ಕಟ್ಟಿದ ಪಕ್ಷ,

→



ಸಂಗಾತಿ ಎನ್ಕೆಯವರೇ ನಿಮಗಿದೋ ಅಂತಿಮ ನಮನ

ಸದಾ ಲವಲವಿಕೆಯಿಂದ ಓಡಾಡುತ್ತಿದ್ದ 87 ರ ಹರೆಯದ ಹಿರಿಯ ಸಂಗಾತಿ ಎನ್.ಕೆ.ಉಪಾಧ್ಯಾಯರು ಇನ್ನಿಲ್ಲ. ತಿರುಗಿಬರುತ್ತೇನೆಂದವರು ವಾಪಸಾಗಲಿಲ್ಲ. ಅವರು ಪಕ್ಷದ ಜಿಲ್ಲಾ ಸಮ್ಮೇಳನದ ವರದಿ ತಯಾರಿಯಲ್ಲಿರುವಾಗಲೇ ಮೆದುಳಿನಲ್ಲಿ ರಕ್ತಸ್ರಾವವಾಗಿ ನವೆಂಬರ್ 29 ರಂದು ಆಸ್ಪತ್ರೆ ಸೇರಿದರು. ನೀಡಿದ ಎಲ್ಲಾ ಚಿಕಿತ್ಸೆಗಳೂ ವಿಫಲವಾದವು. ಅಂತಿಮವಾಗಿ ಅವರು ಡಿಸೆಂಬರ್ 9 ರಂದು ಮಧ್ಯಾಹ್ನ ವಿಜಾಪುರದ ಅಂಜುಮಾನ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಕಾಂ. ಎನ್.ಕೆ.ಯವರ ಅಗಲಿಕೆಯಿಂದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಕೊಂಡಿಯೊಂದನ್ನು, ದುಡಿರ್ವವರ್ಗದ ಪ್ರಾಣಮಿತ್ರನನ್ನು ಕಳೆದುಕೊಂಡಂತಾಗಿದೆ. ಅವರ ಸಾವಿನ ಸುದ್ದಿ ಕೇಳಿ ಮಿಡಿಯದವರಿಲ್ಲ. ಅಂತಿಮ ಯಾತ್ರೆಯಲ್ಲಿ ಸೇರಿದ್ದ ವಿವಿಧ ಜನವಿಭಾಗಗಳು ಅವರು ಗಳಿಸಿದ್ದ ಜನಪ್ರೀತಿಗೆ ಸಾಕ್ಷಿಯಾಗಿತ್ತು. ಅವರ ಬದುಕಿನ ಕೆಲ ವಿವರಗಳು, ನೆನಪುಗಳು, ಅಂತಿಮಯಾತ್ರೆಯ ವರದಿ ಹಾಗೂ ಸಂತಾಪಸೂಚಕ ಸಂದೇಶಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಡಿಸೆಂಬರ್ 10 ರ ಮಧ್ಯಾಹ್ನ 12 ಗಂಟೆಗೆ ಅಲಂಕೃತ ವಾಹನದಲ್ಲಿ ಆರಂಭಗೊಂಡ ಅಂತಿಮ ಯಾತ್ರೆಗೆ ಮೊದಲು ಸಾವಿರಾರು ಜನರು ಅವರ ಅಂತಿಮದರ್ಶನ ಪಡೆದರು. ನೊಂದವರೆಲ್ಲರ ಉಪಾಧ್ಯಾಯರಾಗಿದ್ದ ಎನ್.ಕೆ. ಅವರನ್ನೇ ನಂಬಿದ್ದ ಸಾವಿರಾರು ಜನರು, ರೈತರು, ಕೂಲಿಕಾರರು, ಮಹಿಳೆಯರು, ಕಾರ್ಮಿಕರನ್ನು ಬಿಟ್ಟು ಅಗಲಿದ್ದರು. ಎನ್.ಕೆಯವರು ನಮ್ಮನ್ನಗಲಿದ್ದಾರೆ. ಅವರ ಬೋಧನೆ, ಸರಳತೆ ನಮ್ಮನಡುವೆ ಇವೆ. ಅವನ್ನು ಮತ್ತಷ್ಟು ಶ್ರೀಮಂತಗೊಳಿಸಿ, ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇವೆ ಎಂಬುದು ಅವರೊಡನಿದ್ದು ಕೆಲಸ ಮಾಡಿದ ಸಂಗಾತಿಗಳ ಅಭಿಪ್ರಾಯವಾಗಿತ್ತು.

‘ಸಿದ್ಧಾಂತದ ನಿಷ್ಠೆಯಿಂದ ವಿಚಲಿತನಾಗದ ನಾಯಕ’ ಕಾಂ. ಸೂರಿ ಶೋಕ

ತುಂಡು ತುಂಡಾಗಿ ವಿವಿಧ ಪ್ರಾಂತಗಳಲ್ಲಿ ಸೇರಿಹೋಗಿದ್ದ ಅಂದಿನ ಮೈಸೂರು, ಇಂದಿನ ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವುದು ಸುಲಭವಾಗಿರಲಿಲ್ಲ. ಪ್ರಜಾಪ್ರಭುತ್ವ ಚಳುವಳಿಯೂ ಬಲಶಾಲಿಯಾಗಿರಲಿಲ್ಲ. ಕಮ್ಯುನಿಸ್ಟರ ವಿರುದ್ಧ ತೀವ್ರ ಅಪಪ್ರಚಾರ ನಡೆಯುತ್ತಿದ್ದ ಕಾಲವದು. ಅಂತಹ ಸಂದರ್ಭದಲ್ಲಿ ಮಂಗಳೂರು ತಾಲೂಕಿನ ನಂದಿಕೂರಿನಲ್ಲಿ ಹುಟ್ಟಿ ಮುಂಬೈಗೆ ನೌಕರಿಗಾಗಿ ಹೋದ ಉಪಾಧ್ಯಾಯ ಸಹೋದರರು ಪಕ್ಷದ ಅಣತಿಯ ಮೇರೆಗೆ ಪರಿಚಯವಿಲ್ಲದ ಸ್ಥಳಕ್ಕೆ ಬಂದು ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದುದು ನಿಜಕ್ಕೂ ಸುತ್ಯಾರ್ಹ.

ಮುಂಬೈಯಿಂದ ಹುಬ್ಬಳ್ಳಿಗೆ ಬಂದಾಗ ಕಾಂ. ಎನ್.ಕೆ.ಉಪಾಧ್ಯಾಯ ಅವರಿಗೆ ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತವಲ್ಲದೆ ಬೇರೆ ಯಾವುದೇ ನೆಲೆ ಇರಲಿಲ್ಲ. ಆದರೆ ಅವರಿಗೆ ಆ ಸಿದ್ಧಾಂತದ ಮೇಲೆ ಅಚಲವಾದ ನಂಬಿಕೆ ಇತ್ತು. ಅಂತೆಯೇ ಹುಬ್ಬಳ್ಳಿ ಬಂದ ಕೂಡಲೇ ತನಗೆ ಅನುಭವ ಇಲ್ಲದಿದ್ದರೂ ರೈಲ್ವೆ ನೌಕರರನ್ನು ಸಂಘಟಿಸಲು ತೊಡಗಿಕೊಂಡರು

ಗೋವಾ ವಿಮೋಚನಾ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಗಮನಾರ್ಹ ಪಾತ್ರ ವಹಿಸಿದ ಎನ್.ಕೆ.ಯವರು ಅಂದಿನ ಸಿಪಿಐ ಪಕ್ಷವು ಕಾಂಗ್ರೆಸ್ಸಿನೊಂದಿಗೆ ಕೈ ಜೋಡಿಸಿದಾಗ ಪಕ್ಷದೊಳಗಿನ ಆಂತರಿಕ ಸಂಘರ್ಷದಲ್ಲಿ ಪಕ್ಷ ಇಬ್ಭಾಗವಾದಾಗ ಸಿಪಿಐ(ಎಂ) ನೊಂದಿಗೆ ನಿಂತರು. ನಂತರವೂ ಪಕ್ಷವಿರೋಧಿ ಶಕ್ತಿಗಳು ಎಡ ಸಾಹಸವಾದ, ಉದಾರವಾದ ನೀತಿಗಳನ್ನು ಅನುಸರಿಸಿದ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ -ಲೆನಿನ್ ವಾದಿ ಪಕ್ಷದ ಧೋರಣೆಯನ್ನು ಎತ್ತಿ ಹಿಡಿದರು.

ಕಮ್ಯುನಿಸ್ಟನಾದರೂ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಮಿತ್ರತ್ವದಿಂದ ಬೆರೆಯುವ ಎನ್ಕೆಯವರು ಬಿಜಾಪುರದ ಜನಪರ ಹೋರಾಟಗಳಲ್ಲೆಲ್ಲಾ ಪಾಲ್ಗೊಂಡರು. ಕೋಮುವಾದಿ ರಾಜಕೀಯ ಪಕ್ಷ ಮತ್ತು ಸಂಘಟನೆಗಳನ್ನು ಜನರಿಂದ ದೂರೀಕರಿಸಲು ಸರ್ವ ಪ್ರಯತ್ನ ಮಾಡಿದ ಅವರು ಜಾತ್ಯಾತೀತತೆಯನ್ನು ದೃಢವಾಗಿ ಎತ್ತಿಹಿಡಿದರು. ಇಂತಹ ನಾಯಕನ ಸಿದ್ಧಾಂತವು ಕೈಗೂಡುವಂತೆ ಮಾಡುವುದೇ ಅವರಿಗೆ ಸಲ್ಲುವ ನಿಜವಾದ ಶ್ರದ್ಧಾಂಜಲಿಯೆಂದು ಸಿಪಿಐ(ಎಂ) ರಾಜ್ಯ ಸಮಿತಿ ಸ್ಮರಿಸಿದೆ

ಮಧ್ಯಾಹ್ನ ಎಸ್.ಕೆ.ಯವರ ಮನೆಯಿಂದ ಆರಂಭಗೊಂಡ ಅಂತಿಮ ಯಾತ್ರೆಯಲ್ಲಿ ಸಾವಿರಾರು ಜನರು ಪಾಲ್ಗೊಂಡು, ಎನ್.ಕೆ. ಅವರು ಅಮರರಾಗಲಿ ಎಂದು ಗದ್ಗದಿತ ಕಂಠಗಳ ಧ್ವನಿಯಾಗಿಸಿತು. ಮುಖ್ಯರಸ್ತೆಗಳಲ್ಲಿ ಹಾದು ಹೋದ ಯಾತ್ರೆ ಪಕ್ಷದ ಕಛೇರಿಯನ್ನು ತಲುಪಿ ಪಕ್ಷದ ಧ್ವಜವನ್ನು ಕಾಂ. ಸೂರಿ ಅರ್ಧಕ್ಕೆ ಇಳಿಸುವುದರ ಮೂಲಕ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ನಗರ ಸಭೆಯ ಪರವಾಗಿ ನಗರಪಾಲಿಕೆ ಕಮಿಷನರ್, ಪದಾಧಿಕಾರಿಗಳು ಪುಷ್ಪಮಾಲೆ ಅರ್ಪಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಸಾವಿರಾರು ಜನ ಎನ್.ಕೆ.ಯನ್ನು ಬಲ್ಲವರೆಲ್ಲರೂ ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಅಂತಿಮ ಯಾತ್ರೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಸೂರಿ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ನಿತ್ಯಾನಂದ ಸ್ವಾಮಿ, ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ಸಿಪಿಐ(ಎಂ) ಬೆಳಗಾಂ ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಹಾಗೂ ಸಂಗಾತಿಗಳ ತಂಡ, ಬಳ್ಳಾರಿಯ ಕಾರ್ಯದರ್ಶಿ ಯು. ಬಸವರಾಜ್, ಪ್ರಸನ್ನಕುಮಾರ್, ಗುಲ್ಬರ್ಗಾದ ಕೆ.ನೀಲಾ, ರಾಯಚೂರು ಕಾರ್ಯದರ್ಶಿ ಬಿ.ಲಿಂಗಪ್ಪ, ಆರ್.ಕೆ.ದೇಸಾಯಿ ಹೀಗೆ ಅನೇಕ ಜಿಲ್ಲೆಗಳಿಂದ ಸಂಗಾತಿಗಳು ಹಾಜರಿದ್ದರು. ಶಾಸಕ ಶಿವಾನಂದ ಪಾಟೀಲ್, ವಿಧಾನಪರಿಷತ್ ಸದಸ್ಯರಾದ ಕರ್ಪೂರಿ ಮಠ್, ಕಾಂಗ್ರೆಸ್, ಎರಡೂ ಜನತಾದಳ ಮುಖಂಡರು ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಎನ್.ಕೆ.ಯವರ ಬಗ್ಗೆ ಬಲ್ಲವರ ನುಡಿ ನಮನ



ಶವಯಾತ್ರೆ, ಅಂತ್ಯ ಸಂಸ್ಕಾರದ ನಂತರ ಪಕ್ಷದ ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿಯುವರ ಅಧ್ಯಕ್ಷತೆಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ

ಸೂರಿಯವರು ಮಾತನಾಡಿ ಪಕ್ಷಕ್ಕೆ ತುಂಬಲಾರದ ನಷ್ಟ. ಎನ್.ಕೆ. ಹಳೆಯ ಪೀಳಿಗೆಯವರು. ದುಡಿಯುವ ವರ್ಗಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಸ್ವಾತಂತ್ರ್ಯ ಹೋರಾಟ, ಗೋವಾ ವಿಮೋಚನೆ, ಕರ್ನಾಟಕ ಏಕೀಕರಣದಲ್ಲಿ ಪಾಲ್ಗೊಂಡ ಧೀಮಂತ ಹೋರಾಟಗಾರರು. ಎನ್.ಕೆಯವರಿಲ್ಲದ ಯಾವುದೇ ಹೋರಾಟ ಬಿಜಾಪುರದಲ್ಲಿ ನಡೆದಿಲ್ಲ. ಅವರೊಬ್ಬ ಬರಹಗಾರರು, ಕೋಮುವಾದಿಗಳಲ್ಲದ ಎಲ್ಲರ ಆತ್ಮೀಯರು. ಮಂಗಳೂರಿನಲ್ಲಿ ಹುಟ್ಟಿದರೂ ಬಿಜಾಪುರ ಅವರ ಕಾರ್ಯಕ್ಷೇತ್ರವಾಗಿತ್ತು. ಅಧಿಕಾರ ಎಂದೂ ಅವರ ವ್ಯಾಮೋಹವಾಗಿರಲಿಲ್ಲ. ಉಪಾಧ್ಯಾಯರ ಆದರ್ಶಗಳಿಗೆ ಕೆಲಸ ಮಾಡುವುದೇ ನಿಜವಾದ ಶ್ರದ್ಧಾಂಜಲಿ ಎಂದರು.

ಎಸ್.ಪಿ.ಕರ್ಪೂರಿ ಮಠ್ (ಎಂಎಲ್‌ಸಿ): ಎನ್.ಕೆ. ಜಾತ್ಯಾತೀತರು, ಜನರಿಗಾಗಿ, ಬಿಜಾಪುರ ಜಿಲ್ಲೆಗಾಗಿ ಭೂಗತರಾದವರು. ಜೈಲಿಗೆ ಹೋದವರು. ಅವರು ಮಂಗಳೂರಿನಲ್ಲಿ ಹುಟ್ಟಿದ್ದರೂ ಬಿಜಾಪುರದವರೇ ಆಗಿಹೋಗಿದ್ದರು. ಅನ್ಯಾಯದ ವಿರುದ್ಧ ರಾಜಿಯಿಲ್ಲದ ಧ್ವನಿಯಾಗಿದ್ದರು. ಅಧಿಕಾರಕ್ಕಾಗಿ ಹಾತೊರೆದವರಲ್ಲ. ನಮಗೆಲ್ಲ ಸ್ಫೂರ್ತಿಯಾಗಿದ್ದರು. ಕೊನೆಯುವರೆಗೂ ಕಮ್ಯುನಿಸ್ಟ್ ಪಕ್ಷಕ್ಕೆತ್ಯಾಗ ಮಾಡಿದವರು. ಅವರೊಬ್ಬ ತ್ಯಾಗಜೀವಿ.

ಸ್ವಾತಂತ್ರ್ಯ ಹೋರಾಟಗಾರರಾದ ಪುಕಾಳೆ: ಹೋರಾಟದ ರೂಪುರೇಷೆಗಳ ರೂಪಕ, ಅಧಿಕಾರದ ಆಸೆಯಿಲ್ಲದವರು, ಹೋರಾಟಗಳು

ಪುಟ 10 ಕ್ಕೆ

→

ಚಳುವಳಿ ಇದೆ. ಅವರೆಲ್ಲೂ ಹೋಗಿಲ್ಲ... ಎಂದದ್ದು. ಹಾಗೇ ಮಾಸ್ತು ಅಗಲಿದಾಗಲೂ ಅಂಥದ್ದೇ ಸಂದರ್ಭ. ಅಲ್ಲದೇ ನೀವು ಮಮ್ಮಲ ಮರುಗಿದ ಸಂದರ್ಭಗಳು ಅನೇಕ.

ಬರದ ಭೂಮಿಗೆ ನೀರು ಹನಿ.....

ಸಂಗಾತಿ, ಈಗಲೂ ಬಿಜಾಪುರದ - ಕರ್ನಾಟಕದ ಜನತೆ ನಿಮ್ಮನ್ನು ನೆನೆಸಿಕೊಳ್ಳುವುದು ನೀವು ತೊಡಗಿದ ನೀರಾವರಿ ಹೋರಾಟಗಳಿಂದ. ಕೇವಲ ಕರ್ನಾಟಕ ರಾಜ್ಯವೊಂದು ಭೌಗೋಳಿಕವಾಗಿ ನಿರ್ಮಾಣವಾದರೆ ಸಾಲದು, ಸಮಗ್ರ ಅಭಿವೃದ್ಧಿ ಸಾಧಿಸಲು ಕೈಗಾರಿಕೆ-ನೀರಾವರಿ ಅಭಿವೃದ್ಧಿ ಅತ್ಯಗತ್ಯವೆಂದು ಬಗೆದು ಕೃಷ್ಣಾ-ಆಲಮಟ್ಟಿ ನೀರಿನ ಬಳಕೆಗಾಗಿ ವೈಚಾರಿಕವಾಗಿ ಹಾಗೂ ಜನ ಚಳುವಳಿಯನ್ನು ಸಂಘಟಿಸಿದವರು ನೀವು. ಐದು ನದಿಗಳು ಹರಿದೂ ಬರದ ಬೀಡಾಗಿರುವ ವಿಜಾಪುರಕ್ಕೆ ಜಿಲ್ಲೆಗೆ ನೀರು ದಕ್ಕುತ್ತಿರುವಾಗ ಸಂತೋಷ, ತಕ್ಷಣವೇ ಮುಳುಗಡೆಯಾಗುವ ಬಾಗಲಕೋಟೆ ಜನರ ಬಗ್ಗೆ ನಿಮ್ಮ ಗಮನ ಹೋಯಿತು. ಈಗಲೂ ವಿಜಾಪುರ ಜಿಲ್ಲೆಯಲ್ಲಿ ನಡೆದ ಬಹುತೇಕ ಹೋರಾಟಗಳಲ್ಲಿ ನೀವಿಲ್ಲದೇ ನಡೆದವುಗಳು ವಿರಳ ಎಂದೇ ಗುರುತಿಸುತ್ತಾರೆ. ಹಾಗೆ ನಿಮ್ಮ ಸ್ನೇಹದ ಬಳ್ಳಿಯೂ ವಿಶಾಲ-ವೈವಿಧ್ಯ.

ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಚಳುವಳಿಯ ಸಂಸ್ಥಾಪಕ ನಾಯಕರಲ್ಲಿ ಮೊದಲಿಗರಾಗಿರುವ ನೀವು, ದೇಶದಲ್ಲೇ 1964 ರಲ್ಲಿ ಪಕ್ಷವು ಹಲವು ದಶಕಗಳ ತೀವ್ರ ಸೈದ್ಧಾಂತಿಕ ರಾಜಕೀಯ ಸಂಘರ್ಷದಲ್ಲಿ ಕಂಡುಕೊಂಡ ಭಾರತದ ಕ್ರಾಂತಿಯ ಹಾದಿಯಲ್ಲಿ ಮುನ್ನಡೆಯಬೇಕೆಂದರೆ ಪರಿಷ್ಕರಣವಾದವನ್ನು ತ್ಯಜಿಸದೇ ಅನ್ಯಮಾರ್ಗವೇ ಇಲ್ಲವೆಂದಾಗ, ನೀವು ಕ್ರಾಂತಿಯ ಹಾದಿಯ ಯೋಧರೊಂದಿಗೆ ನಿಂತದ್ದು ಉಲ್ಲೇಖನೀಯ. ಹೀಗೆ ಸಿಪಿಐ(ಎಂ)ನ ರಾಜ್ಯ ನಾಯಕರಾಗಿಯೂ ಕರ್ತವ್ಯವನ್ನು ನಿಭಾಯಿಸಿದಿರಿ.

ನೀವೊಬ್ಬ ಬರಹಗಾರರು, ಯುವಜನರಿಗೆ ಸ್ಫೂರ್ತಿದಾಯಕರು. ಹಿಂದೆ ‘ಜನಶಕ್ತಿ’ ಆರಂಭದಲ್ಲಿ ಪ್ರಮುಖರಾಗಿ ನಂತರ ಹಲವು ದಶಕಗಳು ಐಕ್ಯರಂಗ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿ ಬಳಿಕವೂ ಪತ್ರಿಕೆಯ ಬೆಳವಣಿಗೆಯ ಬಗ್ಗೆ ಸದಾ ಹಿತಚಿಂತನೆ, ನೀಡಿದ ಸಹಕಾರ ನಮ್ಮೆದುರಿಗಿದೆ. ನೀವು ನಮ್ಮೆಲ್ಲರನ್ನು ಅಗಲಿದ್ದೀರಿ ಎಂಬುದನ್ನೇ ಇನ್ನು ಯಾರ ಮನಸ್ಸು ಸ್ವೀಕರಿಸುತ್ತಿಲ್ಲ. “.... ಎನ್ ನಡದದಾ... ಪಕ್ಷ ಬೆಳೀಬೇಕಪ್ಪಾ. ಪತ್ರಿಕೆ ಪ್ರಸಾರ ಹೆಚ್ಚಬೇಕಲ್ಲಾ....” ಎಂಬ ಮಾತುಗಳು ನಮ್ಮ ಕಿವಿಯಲ್ಲಿ ರಿಂಗುಣಿಸುತ್ತಿವೆ. ನಡೆವ ಹೆಜ್ಜೆ, ಸಾಗುವ ಹೋರಾಟದಲ್ಲಿ ನಿಮ್ಮ ನೆನಪು, ಅನುಭವ, ಸ್ಫೂರ್ತಿ ಸದಾ ನಮ್ಮೊಂದಿಗೆ ಇರುತ್ತದೆ.

ನೀವು ಕಟ್ಟಿ ಬೆಳೆಸಿದ ದುಡಿವ ವರ್ಗದ ಕ್ರಾಂತಿಕಾರಿ ರಾಜಕೀಯ ಚಳುವಳಿ - ಪಕ್ಷ ಈ ಬುನಾದಿಯ ಮೇಲೆ ಹೆಮ್ಮರವಾಗಿ ಬೆಳೆಯುತ್ತದೆ. ಆ **ಆಶಯಗಳ ಸಾಧನೆಯ ಸಂಕಲ್ಪದಿಂದ ಬೆಳೆಯುವ ಭರವಸೆಯೊಂದಿಗೆ ಐಕ್ಯರಂಗ ಶ್ರದ್ಧಾಂಜಲಿ ಸಲ್ಲಿಸುತ್ತದೆ.**

ಕೇವಲ ಎರಡೇ ವರುಷಗಳ ಅವಧಿಯಲ್ಲಿ ಐಕ್ಯರಂಗವು ಪ್ರೀತಿಯ ಮಾಸ್ತು, ಕಾಂ. ಪಿ.ಆರ್., ಕಾಂ. ಎನ್.ಕೆ.ಯಂತಹ ಇಬ್ಬರು ಹಿರಿಯ ಚೇತನಗಳನ್ನು ಕಳೆದುಕೊಂಡ ದುಃಖದಲ್ಲಿದೆ. ತಮಗೆ ನಮ್ಮೆಲ್ಲರ ಅಶ್ರುತರ್ಪಣದ, ಗೌರವದ ಶ್ರದ್ಧಾಂಜಲಿ.

- ಎಸ್.ವೈ.ಗುರುಶಾಂತ್

ಎನ್.ಕೆ.ಕುರಿತ ವಿಶೇಷ ಪುರವಣಿ

ಸಂಗಾತಿ ಎನ್.ಕೆ.ಯವರಿಗೆ ಐಕ್ಯರಂಗ ವಿಶಿಷ್ಟವಾದ ರೀತಿಯಲ್ಲಿ ತನ್ನ ಶ್ರದ್ಧಾಂಜಲಿ ಸಲ್ಲಿಸಲು ನಿರ್ಧರಿಸಿದೆ. ಅದರ ಬದುಕು, ಚಳುವಳಿಗೆ ಕೊಡುಗೆ, ನೆನಪುಗಳು ಒಳಗೊಂಡ ಒಂದು ವಿಶೇಷ ಪುರವಣಿಯನ್ನು ಪ್ರಕಟಿಸಲಾಗುವುದು. ನಿಮ್ಮಲ್ಲಿರುವ ಅಮೂಲ್ಯ ಪ್ರತಿನಿಧಿಗಳು, ಅವರು ಹೇಳಿದ ವಿಶೇಷ ಅನುಭವಗಳು, ಒಡನಾಟದ ನೆನಪುಗಳನ್ನು ಬರೆದು ತಪ್ಪದೇ ಕಳಿಸಿ. ಅವೆಲ್ಲ ಡಿಸೆಂಬರ್ 30 ರೊಳಗೆ ತಲುಪುವಂತಿರಲಿ.

- ಸಂ.

ಜಗತ್ತಿನ ಕುಖ್ಯಾತ ವಿದ್ಯುತ್ ಶಕ್ತಿ ವಾಣಿಜ್ಯ ಕಂಪನಿ ಎನ್ರೋನ್ ದಿವಾಳಿಯಾಗಿದೆ. ಎನ್ರೋನ್ ಮಹಾರಾಷ್ಟ್ರದ ದಾಬೋಲ್ ಕಂಪನಿಯ ಪ್ರಮುಖ ಶೇರುದಾರರಾಗಿದ್ದು ವಿವಾದಾಸ್ಪದ ರೀತಿಯಲ್ಲಿ ನಮ್ಮ ದೇಶದಲ್ಲಿ ವಿದ್ಯುತ್ ಶಕ್ತಿ ಉತ್ಪಾದನೆ ಖಾಸಗೀಕರಣದ ಹರಿಕಾರನಾಗಿತ್ತು. ಮಹಾರಾಷ್ಟ್ರ ವಿದ್ಯುತ್ ಬೋರ್ಡನ್ನು ದಿವಾಳಿಯಾಗಿಸಿದ ಎನ್ರೋನ್, ಧಾಬೋಲ್ ಕಂಪನಿಯ ತನ್ನ ಬಂಡವಾಳವನ್ನು ಹಿಂತೆಗೆದುಕೊಳ್ಳುವ (ಅದರ ಶೇರುಗಳನ್ನು ಮಾರಾಟ) ಸನ್ನಾಹದಲ್ಲಿತ್ತು. ಅದೂ ವಿವಾದಾಸ್ಪದವಾಗಿತ್ತು. ಕಳೆದ ೧೫ ವರ್ಷಗಳಲ್ಲಿ ರಭಸದಲ್ಲಿ ಬೆಳೆದು ಕೆಲವೇ ವಾರಗಳಲ್ಲಿ ಬಿದ್ದುಹೋಗಿ ದಿವಾಳಿಯಾದ ಎನ್ರೋನ್ ಪ್ರಕರಣದಿಂದ ಹಲವು ಪಾಠಗಳನ್ನು ಕಲಿಯಬೇಕಾಗಿದೆ. ಗ್ಯಾಸ್, ನೀರು, ವಿದ್ಯುತ್, ತೈಲ, ದೂರಸಂಪರ್ಕದಂತಹ ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸಿ ಶೇರು ಮಾರುಕಟ್ಟೆಯಂತಹ ವ್ಯಾಪಾರಕ್ಕೆ ಒಳಪಡಿಸಬೇಕು ಎಂಬ ನೀತಿಯಿಂದ ಹೊರತು ಅದನ್ನು ಎನ್ರೋನ್ ತನ್ನ ಭಾರಿ ರಾಜಕೀಯ ಪ್ರಭಾವದಿಂದ ಜಾರಿಗೆ ತಂದಿತ್ತು. ಈಗ ಎನ್ರೋನ್‌ನ ದಿವಾಳಿ ಇಂತಹ ನೀತಿಯ ದಿವಾಳಿತನವನ್ನು ಪ್ರದರ್ಶಿಸಿದೆ.

ದಗಲ್‌ಬಾಜಿ ಎನ್ರಾನ್ ದಿವಾಳಿ

ಗೋಲ್‌ಮಾಲ್ ವ್ಯವಹಾರಗಳು

ಶರತ್‌ಚಂದ್ರ

ಎನ್ರೋನ್ ದೀವಾಳಿಯಾಗಿದೆ. ಕಳೆದ 15 ವರ್ಷಗಳಲ್ಲಿ ರಭಸದಿಂದ ಬೆಳೆದು ಅತ್ಯಂತ ಪ್ರಭಾವಶಾಲಿಯಾದ ಕಂಪನಿ ಹಲವು ರೆಕಾರ್ಡುಗಳನ್ನು ಸ್ಥಾಪಿಸಿತ್ತು. ದಿವಾಳಿ ಯಾಗುವುದರಲ್ಲೂ ಎನ್ರೋನ್ ಒಂದು ರೆಕಾರ್ಡು ಸ್ಥಾಪಿಸಿದೆ. ಸೆಪ್ಟೆಂಬರ್‌ನಲ್ಲಿ ಸುಮಾರು 60 ಶತಕೋಟಿ ಡಾಲರು ಆಸ್ತಿ-ಪಾಸ್ತಿ ಹೊಂದಿದ್ದ ಎನ್ರೋನ್‌ದ್ದು ಚರಿತ್ರೆಯಲ್ಲಿ ಅತ್ಯಂತ ದೊಡ್ಡ ದಿವಾಳಿ! ಶೇರು ಮಾರುಕಟ್ಟೆಯಲ್ಲಿ ಕೆಲವೇ ತಿಂಗಳುಗಳ ಹಿಂದೆ ಎನ್ರೋನ್ ಶೇರುಗಳು 'ಚಿನ್ನ'ವೆಂದು ಪರಿಗಣಿಸಲ್ಪಡುತ್ತಿತ್ತು. ಅದರ ಶೇರು ಬೆಲೆ 90 ಡಾಲರಿನವರೆಗೆ ಹೋಗಿದ್ದು (ಒಂದು ಡಾಲರು ಶೇರು ಬೆಲೆ) ಅದರ ಬೆಲೆ ಎರಡುವಾರಗಳ ಹಿಂದೆ ಶೇಕಡಾ 85 ರಷ್ಟು ಒಂದೇ ದಿನದಲ್ಲಿ ಕುಸಿಯಿತು.

> **ಇದು ವಿದ್ಯುತ್ ಖಾಸಗೀಕರಣದ ದಿವಾಳಿ!**

ಕಳೆದ ವರ್ಷ ಸುಮಾರು 110 ಶತಕೋಟಿ ಡಾಲರು ವಹಿವಾಟು ಮಾಡಿತು. 90 ರ ದಶಕದ ಆರಂಭದಲ್ಲಿ ಎನ್ರೋನ್ ಅಮೆರಿಕಾ ಟೆಕ್ಸಾಸ್ ಪ್ರಾಂತ್ಯದಲ್ಲಿ ಪ್ರಾಕೃತಿಕ ಗ್ಯಾಸ್ ಪೈಪ್‌ಲೈನ್ ಕಂಪನಿಯಾಗಿತ್ತು. ಗ್ಯಾಸ್ ಪೂರೈಕೆ ಸೇವೆಯನ್ನು ನಿಬಂಧನೆಗಳಿಂದ ಮುಕ್ತಗೊಳಿಸಿದ ಮೇಲೆ, ಗ್ಯಾಸ್‌ನ ಬೆಲೆ ಶೇರು ಬೆಲೆಗಳಂತೆ ಸಟ್ಟಾ ವ್ಯಾಪಾರವಾಯಿತು. ಗ್ಯಾಸ್‌ನ ಬೆಲೆಯ ಜೂಜಿನಲ್ಲಿ ಎನ್ರೋನ್ ಭಾರಿ ಹಣ ಗಳಿಸಿತು. ಗ್ಯಾಸ್ ಪೂರೈಕೆ ಕೈಗಾರಿಕೆಯನ್ನು ನಿಬಂಧನೆ - ಮುಕ್ತ (ನಿಬಂಧನೆ ಎಂದರೆ ಪೂರೈಕೆ ಬೆಲೆ ಸರ್ಕಾರ ವಿಧಿಸುತ್ತದೆ) ಗೊಳಿಸುವಲ್ಲಿ ಎನ್ರೋನ್ ತನ್ನ ಧನ-ಬಲ ಬಳಸಿತ್ತು ಎನ್ನಲಾಗಿದೆ. ಈಗಿನ ಅಧ್ಯಕ್ಷ ಬುಶ್ ಟೆಕ್ಸಾಸ್‌ನ ಗವರ್ನರ್ ಆಗಿದ್ದಾಗ ಇದು ನಡೆಯಿತು. ಎನ್ರೋನ್ ಇದೇ ರೀತಿ ಇತರ ಸಾರ್ವಜನಿಕ ಸೇವೆಗಳಾದ ವಿದ್ಯುತ್, ತೈಲ ಪೂರೈಕೆಯನ್ನು ನಿಬಂಧನೆ-ಮುಕ್ತಗೊಳಿಸಬೇಕು ಎಂಬ ನೀತಿ ತರಲು ತನ್ನ ಧನ ಬಳಸಿ ಶ್ರಮಿಸಿತು. ಇದರ ಫಲವಾಗಿ ಅಮೆರಿಕದ ಹಲವುರಾಜ್ಯಗಳಲ್ಲಿ ವಿದ್ಯುತ್ ಪೂರೈಕೆ ಖಾಸಗೀಕರಣ (ಅಥವಾ ನಿಬಂಧನೆ-ಮುಕ್ತಗೊಳಿಸುವ) ನೀತಿ ಜಾರಿಗೆ ಬಂತು. ಎನ್ರೋನ್ ಇದರಲ್ಲಿ ಭಾರಿ ಹಣ ಮಾಡಿತು. ಅಮೆರಿಕದ ರಾಜ್ಯಗಳೊಂದಾದ ಕ್ಯಾಲಿಫೋರ್ನಿಯಾದಲ್ಲಿ ಈ ವಿದ್ಯುತ್ ಖಾಸಗೀಕರಣ ಭಾರಿ ವಿದ್ಯುತ್ ಪೂರೈಕೆ ಬಿಕ್ಕಟ್ಟಿಗೆ ಹಾದಿ ಮಾಡಿಕೊಟ್ಟಿತ್ತು. ಈಗ ಕ್ಯಾಲಿಫೋರ್ನಿ ಯಾದ ಅಟಾರ್ನಿ ಜನರಲ್ ಎನ್ರೋನ್ ಯಾವ ರೀತಿಯ ವಹಿವಾಟು ನಡೆಸಿದೆಯೆಂದರೆ ಅದರ ಅಧ್ಯಕ್ಷ ಕೆನ್ನೆತ್ ಲೇಯನ್ನ್ ಜೈಲಿಗೆ ಹಾಕಬಹುದು ಎಂದು ಸಿಟ್ಟಿನಿಂದ ಟೀಕೆ ಮಾಡಿದ್ದ.

ಎಲ್ಲವೂ ವ್ಯಾಪಾರದ ಸರಕು - ಎಲ್ಲವೂ ಗೋಲ್‌ಮಾಲ್

ಇಂತಹ ಶಕ್ತಿ ಪೂರೈಕೆಗಳ ಖಾಸಗೀಕರಣದ ನೀತಿಯನ್ನು ಎನ್ರೋನ್ ತನ್ನ ಧನ ಬಲದಿಂದ ಜಗತ್ತಿನ ಎಲ್ಲೆಡೆ ಜಾರಿಗೆ ತರಲು ಒತ್ತಡ ಹಾಕುತ್ತಿತ್ತು. ಯುರೋಪಿನಲ್ಲಿ ಅದರಲ್ಲೂ ಬ್ರಿಟನ್‌ನಲ್ಲಿ ಅದಕ್ಕೆ ಬಹಳ ಯಶಸ್ಸು ಸಿಕ್ಕಿತ್ತು. ಭಾರತದಲ್ಲೂ ಕೆಲವು ಆಳುವ ಪಕ್ಷದ ರಾಜಕಾರಣಿಗಳನ್ನು ಬಳಸಿ ಧಾಬೋಲ್ ಪವರ್ ಕಂಪನಿ ಮಹಾರಾಷ್ಟ್ರ ವಿದ್ಯುತ್ ಬೋರ್ಡು ವಿದ್ಯುತ್ ಖರೀದಿ ಒಪ್ಪಂದ ಆಗುವಂತೆ ಮಾಡಿ, ವಿದ್ಯುತ್ ಶಕ್ತಿ ಉತ್ಪಾದನೆ ಖಾಸಗೀಕರಣಕ್ಕೆ ನಾಂದಿ ಹಾಡಿತ್ತು. ಒಟ್ಟಾರೆಯಾಗಿ ಎಲ್ಲಾ ಶಕ್ತಿ ಸಂಪನ್ಮೂಲಗಳ (ತೈಲ, ವಿದ್ಯುತ್, ಗ್ಯಾಸ್) ಪೂರೈಕೆಯ ವ್ಯಾಪಾರದಲ್ಲಿ ಜಗತ್ತಿನ ಅತಿದೊಡ್ಡ ಕಂಪನಿಯಾಗಿ ಎನ್ರೋನ್ ಕಳೆದ ವರ್ಷ ಹೊಮ್ಮಿತ್ತು. ಇಂತಹ ಜಾಗತಿಕ ವ್ಯಾಪಾರದ ಕಾಲು ಭಾಗ ಎನ್ರೋನ್ ಸದ್ದಾಗಿತ್ತು. ವಿಶ್ವವಾಣಿಜ್ಯ ಸಂಘಟನೆಯ ಮೂಲಕ ಎನ್ರೋನ್ ಎಲ್ಲಾ ರೀತಿಯ ಸಾರ್ವಜನಿಕ ಸೇವೆ (ಶಕ್ತಿ ಪೂರೈಕೆ, ನೀರು, ಸಾಗಾಣಿಕೆ, ಶಿಕ್ಷಣ, ವೈದ್ಯಕೀಯ) ಗಳನ್ನು ಖಾಸಗೀಕರಿಸುವ ನೀತಿಗೆ ಪ್ರಯತ್ನಿಸಿ, ಈ ಬಗ್ಗೆ ಹಲವು ಅಂಶಗಳನ್ನು ಗ್ಯಾಟ್ ಒಪ್ಪಂದದಲ್ಲಿ ಸೇರಿಸುವುದರಲ್ಲಿ ಸಫಲವಾಗಿತ್ತು.

ರಾಜಕೀಯ ಕನೆಕ್ಷನ್

ಇದೆಲ್ಲವೂ ಎನ್ರೋನ್‌ಗೆ ಸಾಧ್ಯವಾದದ್ದು ಅವರ ರಾಜಕೀಯ ಕನೆಕ್ಷನ್‌ನಿಂದ. ಅಧ್ಯಕ್ಷ ಬುಶ್ ಅಧ್ಯಕ್ಷೀಯ ಚುನಾವಣಾ ನಿಧಿಗೆ, ಹಣ ಕೊಟ್ಟವರಲ್ಲಿ ಎನ್ರೋನ್‌ದ್ದು ಅತ್ಯಂತ ಹೆಚ್ಚಿನ ಕಾಣಿಕೆ. ಸೆನೆಟ್ ಬ್ಯಾಂಕಿಂಗ್ ಕಮಿಟಿಯ ಪ್ರಬಲ ಸದಸ್ಯ ಫಿಲ್ ಗ್ರಾಮ್ ಹಾಗೂ ಆತನ ಹೆಂಡತಿ ವೆಂಡಿ ಇಬ್ಬರು ಎನ್ರೋನ್ ಜತೆ ಗರಿಷ್ಟ ಸಂಬಂಧವಿದ್ದವರು. ವೆಂಡಿ ಅಮೆರಿಕದ ಸರಕು ವ್ಯವಹಾರ ಕಮಿಷನ್‌ನ ಅಧ್ಯಕ್ಷೆಯಾಗಿ 5 ವರ್ಷವಿದ್ದನಂತರ ಎನ್ರೋನ್ ಬೋರ್ಡ್ ಸದಸ್ಯಳಾಗಿ ಸೇರಿದಳು. ಆಕೆ ಕಮಿಷನ್‌ನ ಅಧ್ಯಕ್ಷೆಯಾಗಿದ್ದಾಗ ಎನ್ರೋನ್‌ಗೆ ಅನುಕೂಲಕರವಾದ ಹಲವು ನೀತಿಗಳನ್ನು ಜಾರಿಗೆ ತಂದಿದ್ದಳು. ಎನ್ರೋನ್ ಅಧ್ಯಕ್ಷ ಕೆನೆತ್ ಲೇ ಅಧ್ಯಕ್ಷ ಬುಶ್‌ರ ಶಕ್ತಿ ಯೋಜನೆಗೆ ಪ್ರಮುಖ ಸಲಹಕಾರ.

ಎನ್ರೋನ್ ಇತ್ತೀಚಿಗೆ ಇಂಟರ್‌ನೆಟ್ ಮೇಲೆ ಶಕ್ತಿಪೂರೈಕೆ, ಸರಕುಗಳ ವ್ಯಾಪಾರದ ವಹಿವಾಟಿನಲ್ಲಿ ತೊಡಗಿತ್ತು. ಅದು ಜಗತ್ತಿನ ಅತ್ಯಂತದೊಡ್ಡ ಇಲೆಕ್ಟ್ರಾನಿಕ್ ವ್ಯಾಪಾರದ ವೆಬ್‌ಸೈಟು ಹೊಂದಿತ್ತು. ಎನ್ರೋನ್ ಇವೆಲ್ಲದರಿಂದ ಭಾರಿ ಲಾಭ ಗಳಿಸಲಾರಂಭಿಸಿತು. ಆದ್ದರಿಂದಲೇ ಅದರ ಜನಪ್ರಿಯತೆ ಶೇರು ಮಾರುಕಟ್ಟೆಯಲ್ಲಿ ಮತ್ತೆ ತುದಿಗೇರಿತ್ತು. ಕೆಲವು ತಿಂಗಳುಗಳ ಹಿಂದಿನವರೆಗೆ 'ಹೊಸ' ಮತ್ತು 'ಹಳೆ' ಆರ್ಥಿಕತೆಗಳೆರಡನ್ನು ಅಳವಡಿಸಿದ ಹೊಸ ರೀತಿಯ ಕಂಪನಿ ಎಂಬ 'ಹೆಗ್ಗಳಿಕೆ' ಸ್ಥಾಪಿಸಿತ್ತು.

ಕುಸಿತ ಏಕೆ?

ಇಂತಹ ಕಂಪನಿ ಕೆಲವೇ ವಾರಗಳಲ್ಲಿ ಕುಸಿದದ್ದು ಹೇಗೆ? ಪ್ರಮುಖವಾಗಿ ಎನ್ರೋನ್ ಲಾಭ-ವಹಿವಾಟು ಶಕ್ತಿ (ಗ್ಯಾಸ್, ವಿದ್ಯುತ್, ತೈಲ) ಪೂರೈಕೆಯಲ್ಲಿ ವ್ಯಾಪಾರದಿಂದ ಬರುತ್ತಿತ್ತು. ಅದರ ಪ್ರಮುಖ ಲಾಭ ಕ್ಯಾಲಿಫೋರ್ನಿಯದಿಂದ ಬಂದಿತ್ತು. ಕಳೆದ ವರ್ಷ ಕ್ಯಾಲಿಫೋರ್ನಿಯಾ ಕತ್ತಲು' ಎಂದು ಕರೆಯಲಾದ ವಿದ್ಯುತ್ ಬಿಕ್ಕಟ್ಟಿನಲ್ಲಿ ಎನ್ರೋನ್ 37 ಕೋಟಿ ಲಾಭ ಮಾಡಿತ್ತು. ಆದರೆ ಈ ಬಿಕ್ಕಟ್ಟು ವಿದ್ಯುತ್ ಖಾಸಗೀಕರಣದ ಮೇಲೆ ಅಲ್ಲಿನ ಪ್ರಾಂತೀಯ ಸರ್ಕಾರ 'ಬ್ರೇಕ್' ಹಾಡುವಂತೆ ಮಾಡಿತ್ತು. ಈಗ ವಿದ್ಯುತ್ ಪೂರೈಕೆ ಮೇಲೆ ಹಲವು ನಿಬಂಧನೆಗಳನ್ನು ಹೊರಿಸಲಾಗಿದೆ - ಸಾರ್ವಜನಿಕ ಹಿತದೃಷ್ಟಿಯಿಂದ. ಇದು ಎನ್ರೋನ್‌ನ ಲಾಭ ಗಳಿಕೆಗೆ ಪ್ರಮುಖ ಏಟು ಹಾಕಿತ್ತು. ಕ್ಯಾಲಿಫೋರ್ನಿಯಾದ ಕೆಟ್ಟ ಅನುಭವದಿಂದ ಇತರ ರಾಜ್ಯಗಳ ವಿದ್ಯುತ್ ಖಾಸಗೀಕರಣ ಮಂದಗತಿಯಲ್ಲಿದೆ. ಇದು ಎನ್ರೋನ್‌ಗೆ ಇನ್ನಷ್ಟು ಏಟುಹಾಕಿತ್ತು. ಇದಲ್ಲದೆ ಕ್ಯಾಲಿಫೋರ್ನಿಯಾ ಬಿಕ್ಕಟ್ಟು ಎನ್ರೋನ್‌ನಂತಹ ಕಂಪನಿಗಳ ಹಣಕಾಸು ವ್ಯವಹಾರಗಳ ಬಗ್ಗೆ ಹೆಚ್ಚಿನ ನಿಗಾ ಇಡಲು ಆರಂಭಿಸಿತ್ತು. ಇಂತಹ ಕ್ರಮಗಳಲ್ಲಿ ಎನ್ರೋನ್‌ನ ವ್ಯವಹಾರಗಳಲ್ಲಿ ಹಲವು ಅಕ್ರಮಗಳು ಹೊರಬಂದವು. ಎನ್ರೋನ್ ಹಲವು ಡೈರೆಕ್ಟರುಗಳು, ಹಿರಿಯ ಅಧಿಕಾರಿಗಳು ದೊಡ್ಡ ಪ್ರಮಾಣದಲ್ಲಿ ಬೇರೆ ಖಾಸಗಿ ಕಂಪನಿಗಳಿಗೆ ಹಣ ವರ್ಗಾಯಿಸಿದ್ದು (ಎನ್ರೋನ್ ಅಕೌಂಟ್‌ನಲ್ಲಿ ತೋರಿಸದೆ) ಬೆಳಕಿಗೆ ಬಂತು. ಇದಲ್ಲದೆ ಕಂಪನಿಯ ಹಲವು ಸಾಲಗಳನ್ನು ತೋರಿಸದೆ ಇತರ ಪಾರ್ಟನರ್ ಕಂಪನಿಗಳ ಲೆಕ್ಕದಲ್ಲಿ ತೋರಿಸುತ್ತಿತ್ತು. ಇಂತಹ ತನಿಖೆ ಫಲವಾಗಿ ಎನ್ರೋನ್ ಬಂಡವಾಳ ಲೆಕ್ಕ-ಪತ್ರಗಳಲ್ಲಿ ತೋರಿಸಿದ್ದಕ್ಕಿಂತ 120 ಕೋಟಿ ಡಾಲರಷ್ಟು ಕಡಿಮೆಇದೆ. ಲಾಭ 60 ಕೋಟಿ ಕಡಿಮೆಯಿದೆ ಎಂಬುದು ಬೆಳಕಿಗೆ ಬಂತು. ಈ ತನಿಖೆಯಿಂದ ಎನ್ರೋನ್‌ನ ನಿಜವಾದ ಲಾಭ ಹಲವು ಅಕ್ರಮಗಳ ಮೇಲೆ ಆಧಾರಿತವಾಗಿತ್ತು ಎಂದು ಬೆಳಕಿಗೆ ಬಂತು. ಇದು ಇನ್ನಷ್ಟು ತನಿಖೆಗಳಿಗೆ ದಾರಿ ಮಾಡಿಕೊಟ್ಟಿತ್ತು. ಇದು ಬಯಲಾದಂತೆ ಶೇರುದಾರರ ವಿಶ್ವಾಸ ಕುಸಿಯಿತು. ಎನ್ರೋನ್ ಶೇರು ಬೆಲೆ ಒಂದೇ ದಿನದಲ್ಲಿ ಶೇಕಡಾ 85 ರಷ್ಟು ಕುಸಿಯಿತು. ಎನ್ರೋನ್ ಜತೆ ಹಲವು ವ್ಯವಹಾರಗಳಲ್ಲಿ ತೊಡಗಿದ್ದವರು ವ್ಯಾಪಾರ ನಿಲ್ಲಿಸಿದರು - ತಮ್ಮ ಹಣ ವಾಪಾಸು ಬರಲಿಕ್ಕಿಲ್ಲ ಎಂದು ಭಯದಿಂದ ಇದು ಎನ್ರೋನ್‌ನ ಪ್ರೈಪೋಟಿದಾರರಿಗೆ ಸುಗ್ಗಿಯಾಯಿತು. ಎನ್ರೋನ್‌ನ ವ್ಯವಹಾರ ಇದರಿಂದ ಇನ್ನಷ್ಟು ಕುಗ್ಗಿತು. ಎನ್ರೋನ್ ಶೇರು ಬೆಲೆ (1 ಡಾಲರಿಗೆ) ಕೇವಲ 35 ಸೆಂಟ್ಸ್‌ಗೆ ಇಳಿಯಿತು. ಎನ್ರೋನ್‌ಗೆ ಸಾಲ ಕೊಡುವವರು, ವ್ಯವಹಾರ ಮಾಡುವವರು ಇಲ್ಲವಾದರು. ಇದು ಎನ್ರೋನ್‌ನ್ನು ದೀವಾಳಿಯ ಅಂಚಿಗೆ ನಿಲ್ಲಿಸಿತ್ತು. ಈ ಸಂದರ್ಭ ಬಳಸಿ ಎನ್ರೋನ್‌ನ ಪೈಪೋಟಿದಾರ ಕಂಪನಿಗಳಲ್ಲೊಂದಾದ ಡೈನಿಜಿ ಎನ್ರೋನ್ ಕಂಪನಿಯನ್ನು ಕೊಂಡುಕೊಳ್ಳಲು ಮುಂದಾಯಿತು. ಅದು ಕೆಲವೇ ತಿಂಗಳುಗಳ ಹಿಂದೆ 90 ಶತಕೋಟಿ ಡಾಲರು ಮಾರುಕಟ್ಟೆ ಬೆಲೆ ಇದ್ದ ಎನ್ರೋನ್‌ಗೆ 9 ಶತಕೋಟಿ ಡಾಲರು ಬೆಲೆಯ ಖರೀದಿಗೆ ಒಪ್ಪಂದ ಮಾಡಿಕೊಂಡಿತು. ಆದರೆ ಎನ್ರೋನ್ ಹೆಚ್ಚೆಚ್ಚು ಅಕ್ರಮಗಳ, ಗುಪ್ತ ಸಾಲಗಳು ಬೆಳಕಿಗೆ ಬಂದಂತೆ ಡೈನಿಜಿಗೆ ಭಯವಾಯಿತು. ಡೈನಿಜಿ ಹಿಂದೇಟು ಹೊಡೆಯಿತು. ಇದರಿಂದ ಎನ್ರೋನ್‌ಗೆ ದಿವಾಳಿ ಯೆಂದು ಅಧಿಕೃತವಾಗಿ ಘೋಷಿಸುವುದು ಬಿಟ್ಟು ಬೇರೆದಾರಿ ಇಲ್ಲವಾಗಿದೆ. ಅಮೆರಿಕದಲ್ಲಿ 'ಕಲಮು' ಎಂದು ಕರೆಯಲಾಗುವ ಕಾನೂನು ಪ್ರಕಾರ ಎನ್ರೋನ್ 'ದಿವಾಳಿ'ಗೆ ಅರ್ಜಿ ಗುಜರಾಯಿಸಿದೆ.

ಮುಂದೇನು?

ಮಾರುಕಟ್ಟೆ ಶಕ್ತಿಗಳ ಮೇಲೆ ಪೂರ್ಣವಿಶ್ವಾಸ, ಖಾಸಗೀಕರಣ ಎಲ್ಲಾ ಕ್ಷೇತ್ರಗಳಲ್ಲೂ ದಕ್ಷತೆ ಹೆಚ್ಚಿಸುತ್ತದೆ - ಎಂಬ ನಮ್ಮ ಆಳುವವರ ಅಂಧ ವಿಶ್ವಾಸವನ್ನು ಎನ್ರೋನ್ ದಿವಾಳಿ ಸ್ವಲ್ಪವಾದರೂ ಕಡಿಮೆ ಮಾಡಬಹುದೆ? ಎನ್ರೋನ್ ದೀವಾಳಿ ಅಮೆರಿಕದಲ್ಲೇ ಈ ಬಗ್ಗೆ ಹೊಸ ವಾದ-ವಿವಾದ ಹುಟ್ಟುಹಾಕಿದೆ. ಎಲ್ಲವನ್ನೂ (ವಿದ್ಯುತ್, ನೀರು, ತೈಲ, ಸಾಗಾಣಿಕೆಯಂತಹ ಮುಖ್ಯ ಸಾರ್ವಜನಿಕ ಸೇವೆಗಳನ್ನು) ಸರಕಿನಂತೆ ಕಂಡು, ವ್ಯಾಪಾರಕ್ಕೆ ಮುಕ್ತ ಮಾರುಕಟ್ಟೆಗೆ ಒಳಪಡಿಸುವುದು ಸರಿಯಲ್ಲ. ಮಾತ್ರವಲ್ಲ ಇಂತಹ ವ್ಯವಸ್ಥೆ ಕೆಲಸವೇ ಮಾಡುವುದಿಲ್ಲ ಎಂಬುದನ್ನು ಎನ್ರೋನ್ ಪ್ರಕರಣ ತೋರಿಸಿಕೊಟ್ಟಿದೆ. ಎನ್ರೋನ್ ಪ್ರಕರಣದ ಉದಾಹರಣೆ ಬಳಸಿ ಖಾಸಗೀಕರಣ- ಜಾಗತೀಕರಣದ ಸರ್ಕಾರದ ನೀತಿಗಳನ್ನು ಬದಲಾಯಿಸಲು ಒತ್ತಡ ಹೆಚ್ಚಿಸಬೇಕು. ದೀವಾಳಿ ಯಾದ ಎನ್ರೋನ್ ದಾಬೋಲ್ ಕಂಪನಿಯ ಭಾರತೀಯ ಕಂಪನಿಗಳಿಂದ, ಸಾರ್ವಜನಿಕ ಸಂಸ್ಥೆಗಳು ಹಣ ದೋಚದಂತೆ ಜಾಗ್ರತೆ ವಹಿಸಬೇಕು

ದಿವಾಳಿ ತಂದ ಅಲ್ಲೋಲ ಕಲ್ಲೋಲ

ಎನ್ರೋನ್ ಈ ದೀವಾಳಿಯ ಪರಿಣಾಮ ವ್ಯಾಪಕವಾಗಿರುತ್ತದೆ. ಎನ್ರೋನ್‌ಗೆ ಸಾಲ ಕೊಟ್ಟು, ಅದರಲ್ಲಿ ಬಂಡವಾಳ ಹೂಡಿದ ಸಿಟಿ ಬ್ಯಾಂಕ್, ಜೆಸಿ ಮೋರ್ಗನ್, ಚೆಸ್ ಬ್ಯಾಂಕುಗಳಿಗೆ ನಡುಕ ಆರಂಭವಾಗಿದೆ. ಇದಲ್ಲದೆ ವಿದ್ಯುತ್, ಗ್ಯಾಸ್, ತೈಲ ಪೂರೈಕೆ ವ್ಯವಹಾರದಲ್ಲಿ ಭಾರಿ ಏರುಪೇರು ಆಗಲಿದೆ. ಇದರಲ್ಲಿ ವ್ಯವಹಾರ ಮಾಡುವ ಎಲ್ಲಾ ಕಂಪನಿಗಳ ತನಿಖೆಗೆ ಒತ್ತಾಯ ಬರುತ್ತಿದೆ. ಎನ್ರೋನ್‌ನ ಗ್ರಾಹಕರಾದ ಕೈಗಾರಿಕೆ, ಕಂಪನಿಗಳು ಮತ್ತು ಸಾರ್ವಜನಿಕ ಬಳಕೆದಾರರು ಚಿಂತೆಗೊಳಗಾಗಿದ್ದಾರೆ. ಅವರ ವಿದ್ಯುತ್, ಗ್ಯಾಸ್ ಪೂರೈಕೆಯ ಭವಿಷ್ಯ ಮುಂದೇನು ಅಂತ.

ಭಾರತದಲ್ಲೂ ಈಗಾಗಲೇ ವಿವಾದಾಸ್ಪದ ದಾಬೋಲ್ ಪವರ್ ಕಂಪನಿಯ ಭವಿಷ್ಯ ಇನ್ನಷ್ಟು ಮಂಕಾಗಿದೆ. ಎನ್ರೋನ್ ದಾಬೋಲ್ ಕಂಪನಿಯು ತನ್ನ ಬಂಡವಾಳವನ್ನು ಮೊದಲು ಹೊರಟಿದ್ದು ಅದರ ಬೆಲೆಗೆ ಹೆಣಗಾಡುತ್ತಿತ್ತು. ಟಾಟಾ, ಬಿಎಸ್‌ಇಎಸ್‌ನಂತಹ ಕಂಪನಿಗಳು ಅದನ್ನು ಖರೀದಿಸಲು ಮುಂದಾಗಿದ್ದು ಅದರ ನಿಜವಾದ ಬೆಲೆ 1500 ಕೋಟಿ ರೂ. ಎಂದು ಹೇಳಿದರೆ, ಎನ್ರೋನ್ ಅದು 4000 ಕೋಟಿ ಎಂದು ಸಾಧಿಸುತ್ತಿದೆ. ಮಹಾರಾಷ್ಟ್ರ ಸರ್ಕಾರ, ವಿದ್ಯುತ್ ಬೋರ್ಡ್ ಜತೆ ಕೋರ್ಟು-ವ್ಯಾಜ್ಯದಲ್ಲಿ ತೊಡಗಿರುವ ಎನ್ರೋನ್ ಈಗ ಇನ್ನಷ್ಟು ದುರ್ಬಲ ಸ್ಥಿತಿಗೆ ಬಂದಿದೆ. ದಿವಾಳಿ ಯಾಗಿರುವ ಎನ್ರೋನ್ ಜತೆ ವ್ಯವಹಾರ ಮಾಡುವುದು ಹೇಗೆ ಎಂದು ಎಲ್ಲರೂ ಚಿಂತೆಗೊಳಗಾಗಿದ್ದಾರೆ. ಎನ್ರೋನ್ ಐಡಿಬಿಐ, ಸ್ಟೇಟ್ ಬ್ಯಾಂಕ್, ಐಸಿಐಸಿಐ ಸುಮಾರು 6000 ಕೋಟಿ ಸಾಲ ಕೊಟ್ಟದ್ದು ಅಥವಾ ಹಣ ತೊಡಗಿಸಿದ್ದು ಇದೆ. ಇದನ್ನು ವಸೂಲಿ ಮಾಡುವುದು ಹೇಗೆ ಎಂದು ತಲೆ ತುರಿಸಿ ಕೊಳ್ಳುತ್ತಿದ್ದಾರೆ. ಇದೆಲ್ಲವನ್ನು ತೆರುವುದು ಕೊನೆಗೆ ಬಳಕೆದಾರ ಎಂಬುದರಲ್ಲಿ ಸಂಶಯವಿಲ್ಲ.

ಕಾರ್ಗಿಲ್ ಯೋಧರ ಶವ ಪೆಟ್ಟಿಯಲ್ಲಿ ದುಡ್ಡು ದೋಚಿದ ದೇಶಭಕ್ತರು


ಬಿಜೆಪಿ ಕೂಟದ ಭ್ರಷ್ಟಾಚಾರದ ಹಗರಣಗಳು ಬೆಚ್ಚಿಬೀಳಿಸುತ್ತಿವೆ. ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ದೇಶಪ್ರೇಮದ ಉನ್ಮಾದ ಹಬ್ಬಿಸಿದ ಈ ದುಷ್ಟಕೂಟ, ಯೋಧರ ಶವಪೆಟ್ಟಿಗೆಯಲ್ಲಿಯೂ ಸಾವಿರಾರು ಕೋಟಿ ರೂಪಾಯಿಗಳನ್ನು ಕಬಳಿಸಿದೆ. ಈ ಖೋಟಾ ದೇಶಭಕ್ತರ ನಾಚಿಕೆಗೇಡಿನ ಲೂಟಿಯನ್ನು ಕೇಂದ್ರ ಮಹಾಲೆಕ್ಕ ಪರಿಶೋಧಕರು ಬಯಲುಗೊಳಿಸಿದ್ದಾರೆ.

ಮಹಾ ಕೊಳಕ ಉದ್ಯೋಗಿಯೊಬ್ಬನಿಗೆ ಆತನ ಸಹೋದ್ಯೋಗಿಗಳೆಲ್ಲಾ ಸೇರಿ ಎರಡು ಜೊತೆ ಕಾಲು ಚೀಲ ಕೊಡಿಸಿದರಂತೆ. ಪ್ರತಿ ದಿನ ಕಾಲು ಚೀಲ ಬದಲಿಸಿ ಕಛೇರಿಗೆ ಬರಲಿ ಎಂದು. ಗುಂಡನ ಕಾಲು ಚೀಲ ಸೂಸುವ ದುರ್ಗಂಧದೊಂದಿಗೆ ಹೆಣಗಬೇಕಾದವರು ಸಹೋದ್ಯೋಗಿಗಳೇ ತಾನೆ ಅದಕ್ಕೆ.

ಹೊಸ ಕಾಲು ಚೀಲ ಕೊಡಿಸಿದ ಮೂರನೇ ದಿನವೂ ಅದೇ ದುರ್ನಾತ ಮತ್ತೆ ಕಛೇರಿಯೆಲ್ಲಾ ಹರಡಿತಂತೆ. ಸಹೋದ್ಯೋಗಿಗಳೆಲ್ಲಾ ಸಿಟ್ಟಾಗಿ ಗುಂಡನಿಗೆ ಅಮರಿಕೊಂಡು ಹೊಸ ಕಾಲು ಚೀಲ ಏಕೆ ಧರಿಸಿ ಬರಲಿಲ್ಲ ಎಂದು ಕೇಳಿದರು. ಹೊಸ ಕಾಲು ಚೀಲವನ್ನೆ ಧರಿಸಿ ಬಂದಿರುವುದಾಗಿ ಗುಂಡ ಗಡದ್ದಾಗಿ ಉತ್ತರಿಸಿದ. ಮತ್ಯಾಕೆ ಕಾಲು ಚೀಲದ ಗಬ್ಬು ವಾಸನೆ ಇನ್ನೂ ಹೊಡಿತಿದೆ ಎಂದು ಕೇಳಲಾಗಿ ಗುಂಡ ತಣ್ಣಗೆ ಉತ್ತರಿಸಿದನಂತೆ. ಹಳೇ ಕಾಲು ಚೀಲ ಬಿಸಾಡಲು ಮನಸ್ಸಾಗಲಿಲ್ಲ ಅದಕ್ಕೆ ಪ್ಯಾಂಟಿನ ಜೇಬಿನಲ್ಲಿಟ್ಟುಕೊಂಡು ಬಂದಿದ್ದೇನೆ!!! ಅಂತ.

ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್‌ರನ್ನು ಸಚಿವ ಸಂಪುಟದಿಂದ ಕೈಬಿಟ್ಟಿದ್ದು, ತಮ್ಮ ಜೇಬಿನಲ್ಲಿಟ್ಟುಕೊಂಡು ಮತ್ತೆ ಅವರನ್ನೆ ರಕ್ಷಣಾ ಮಂತ್ರಿಯನ್ನಾಗಿ ಮಾಡಿರುವುದು ಈ ಕಥೆಗಿಂತ ಭಿನ್ನವಾಗೇನೂ ಇಲ್ಲ.

1999ರಲ್ಲಿ ಕಾರ್ಗಿಲ್‌ನಲ್ಲಿ ನುಸುಳು ಕೋರರ ವಿರುದ್ಧ ನಡೆದ ವಿಜಯ ಕಾರ್ಯಾಚರಣೆಯ ಸಂದರ್ಭದಲ್ಲಿ ನಡೆದ ಯುದ್ಧೋಪಕರಣಗಳ ಖರೀದಿಯಲ್ಲಿ ನಡೆದ ವ್ಯಾಪಕ ಭ್ರಷ್ಟಾಚಾರ ಕುರಿತು ಕೇಂದ್ರ ಎನ್.ಡಿ.ಎ ಸರ್ಕಾರದ ಮುಖಕ್ಕೆ ಛೀಮಾರಿ ಹಾಕುವಂತಹ ಹಗರಣವೊಂದನ್ನು ಸಿ.ಎ.ಜಿ. (ಲೆಕ್ಕ ಮಹಾ ಪರಿಶೋಧಕ) ವರದಿ ಹೊರ ಹಾಕಿದೆ. ತೆಹಲ್ಕಾ ಟೇಪು ಹೊರಕ್ಕೆಳೆದ ರಕ್ಷಣಾ ಇಲಾಖೆಯ ಮಹಾ ಭ್ರಷ್ಟ ಹಗರಣಕ್ಕೆ ಸಾಕ್ಷಿ ನುಡಿಯುವಂತಿರುವ ಈ ಪ್ರಕರಣ, ಹುತಾತ್ಮ ಯೋಧರನ್ನು ಸಾಗಿಸುವ ಶವ ಪೆಟ್ಟಿಗೆಯಲ್ಲೂ ನಡೆದಿರುವ ತೀವ್ರ ಭ್ರಷ್ಟಾಚಾರದಿಂದಾಗಿ ದೇಶದ ಪ್ರಜ್ಞಾವಂತರೆಲ್ಲ ತಲೆ ತಗ್ಗಿಸುವಂತೆ ಮಾಡಿದೆ.



ಹುಚ್ಚನ ಮದುವೆಯಲ್ಲಿ ಉಂಡವನೆ ಜಾಣ!!

ಕಾರ್ಗಿಲ್ ಕಾರ್ಯಾಚರಣೆ ತರಾತುರಿಯ ಹೆಸರಿನಲ್ಲಿ ಬಟ್ಟೆಬರೆ, ಮದ್ದು ಗುಂಡು, ಶಸ್ತ್ರಾಸ್ತ್ರ, ಯುದ್ಧ ರಂಗ ವೀಕ್ಷಣಾ ರಡಾರ್, ಬೂಟುಗಳು, ಶವಪೆಟ್ಟಿಗೆ ಇತ್ಯಾದಿಗಳನ್ನು ಖರೀದಿಸಲಾಗಿದೆ. ಒಟ್ಟು 123 ರಕ್ಷಣಾ ಒಪ್ಪಂದಗಳಲ್ಲಿನ 35 ಒಪ್ಪಂದಗಳಲ್ಲಿ 2,163-09 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆದಿದೆ ಎಂದು ಸಿ.ಎ.ಜಿ. ವರದಿ ತಿಳಿಸಿದೆ.

ಇದರಲ್ಲಿ ಯುದ್ಧ ಮುಗಿದ 6 ತಿಂಗಳ ನಂತರ 1,762-21 ಕೋಟಿ ಮೌಲ್ಯದ ವಸ್ತುಗಳು ರಕ್ಷಣಾ ಇಲಾಖೆಗೆ ಬಂದು ತಲುಪಿವೆ. (ಒಪ್ಪಂದದ ಶೇ. 81 ರಷ್ಟು ಉಪಕರಣಗಳು)

ದೇಶ ಪ್ರೇಮ ಅಪ್ಪಟ ಸ್ವದೇಶಿ!
ಶವ ಪೆಟ್ಟಿಗೆ ಮಾತ್ರ ವಿದೇಶಿಯದ್ದು!!

ಯುದ್ಧದಲ್ಲಿ ಮಡಿದ ಹುತಾತ್ಮ ಯೋಧರ ದೇಹಗಳನ್ನು ಸಾಗಿಸಲು ತಲಾ ಶವಪೆಟ್ಟಿಗೆಯೊಂದಕ್ಕೆ 1 ಲಕ್ಷ 9 ಸಾವಿರ ರೂಗಳನ್ನು ಅಂದರೆ 2500 ಅಮೇರಿಕನ್ ಡಾಲರ್ ನೀಡಿ ಖರೀದಿಸಲಾಗಿದೆ.

ಇದೇ ರೀತಿಯ ಶವಪೆಟ್ಟಿಗೆಗೆ 1994ರಲ್ಲಿ ಕೇವಲ 172 ಅಮೇರಿಕನ್ ಡಾಲರ್ ಕೊಟ್ಟು ಖರೀದಿಸಲಾಗಿದೆ. ಮಾತ್ರವಲ್ಲ ಈಗಿನವು ನಂತರ ನಡೆದ ವಿಚಾರಣೆಯಲ್ಲಿ, ಶವಪೆಟ್ಟಿಗೆಗಳು ಅತಿ ತೂಕ, ಅಸಮರ್ಪಕ ಗುಣಮಟ್ಟದ ಆಧಾರದಲ್ಲಿ ಸಂಪೂರ್ಣವಾಗಿ ತಿರಸ್ಕೃತಗೊಂಡಿವೆ.

ದೇಶ ಪ್ರೇಮದ ಹೆಸರಿನಲ್ಲಿ ಕಾರ್ಗಿಲ್ ಕಾರ್ಯಾಚರಣೆ ಸಮಯದಲ್ಲಿ, ಯುದ್ಧೋನ್ಮಾದ ಸೃಷ್ಟಿಸಲು ಯತ್ನಿಸಲಾಯಿತು. ಕೋಮು ಉನ್ಮಾದ ಹುಟ್ಟುಹಾಕಲು ತಂತ್ರ ಹೂಡಲಾಯಿತು. ಒಂದೆಡೆ ದೇಶದ ರಕ್ಷಣೆಗಾಗಿ ಪ್ರಾಣ ಕೊಟ್ಟ ವೀರ ಯೋಧರ ಕುಟುಂಬಕ್ಕಾಗಿ, ಗಾಯಗೊಂಡವರ ಬದುಕಿಗಾಗಿ ದೇಶಾದ್ಯಂತ ನೌಕರರು ಕಾರ್ಮಿಕರು ತಮ್ಮ ಒಂದು ದಿನದ ಸಂಬಳ, ರೈತರು-ಮಹಿಳೆಯರು ಹಲವಾರು ಜನರು ತಮ್ಮ ಕುಟುಂಬ, ಜೀವನದ ಅಮೂಲ್ಯ ಉಳಿತಾಯವನ್ನು ಪರಿಹಾರ ನಿಧಿಗಾಗಿ ಕೊಟ್ಟರು. ಶಾಲೆಯ ಮಕ್ಕಳು ತಮ್ಮ ಚಾಕಲೇಟ್, ಸೀಬೆಹಣ್ಣಿನ ಹಣವನ್ನು ಪರಿಹಾರ ನಿಧಿಗಾಗಿ ಕೊಡುವಾಗ ಇಲ್ಲಿ ಯುದ್ಧಾಸ್ತ್ರ ಖರೀದಿಯಲ್ಲಿ ಶವಪೆಟ್ಟಿಗೆ ಖರೀದಿಯಲ್ಲಿ ಲಂಚ ಮುಕ್ಕುವುದು ನಡೆಯುತ್ತಿತ್ತು.

ಸಾರ್ವಜನಿಕರು ನೀಡಿದ ಪರಿಹಾರ ನಿಧಿ ಸಹ ಸಮರ್ಪಕವಾಗಿ ಯೋಧರ ಕುಟುಂಬಗಳಿಗೆ ತಲುಪಿಲ್ಲ ಎಂಬ ದೂರು ಅಲ್ಲಲ್ಲೇ ಇದೆ.

ಖರೀದಿಸಲಾದ 3,438 ಜೊತೆ ಬೂಟುಗಳು ವ್ಯರ್ಥವಾಗಿವೆ. ಏಕೆಂದರೆ ಅವುಗಳ ಅಳತೆ 5 ಮತ್ತು 6 ನಂಬರಿನವು. ವಯಸ್ಕ ಯೋಧರು ಇವುಗಳನ್ನು ಬಳಸಲಾಗದು.

ಇಂತಹ ನೀಚ ಭ್ರಷ್ಟಾಚಾರ ಹಗರಣಗಳ ಮೇಲೆ ತಿಪ್ಪೆ ಸಾರಿಸಿ ವಾಜಪೇಯಿಯವರು ಜಾರ್ಜ್ ಫರ್ನಾಂಡಿಸ್‌ರನ್ನು ಮತ್ತೆ ಸಂಪುಟಕ್ಕೆ ತೆಗೆದುಕೊಂಡಿರುವುದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ.

ಮಡಿದ ಯೋಧರ ದೇಹಗಳನ್ನು ಗೌರವಪೂರ್ವಕವಾಗಿ ಹೊತ್ತೊಯ್ಯುವಂತಹ ಶವಪೆಟ್ಟಿಗೆಗಳನ್ನು ತಯಾರಿಸುವ ತಂತ್ರಜ್ಞಾನವೂ ನಮ್ಮಲ್ಲಿಲ್ಲವೇ? ಶವ ಪೆಟ್ಟಿಗೆಗಳು ಅಮೇರಿಕಾದಿಂದಲೇ ಬರಬೇಕೇ? ಉತ್ತಮ ಶವಪೆಟ್ಟಿಗೆ ಪೂರೈಸುವ ಸಂಸ್ಥೆಗಳು ನಮ್ಮಲ್ಲೇ ಖಂಡಿತ ಇವೆ. ಆದರೆ ಯುದ್ಧೋಪಕರಣ ಶಸ್ತ್ರಾಸ್ತ್ರಗಳನ್ನು ಅಮೇರಿಕಾದಿಂದ ಖರೀದಿಸುವುದು ಎಂದರೆ ಕಮೀಷನ್ ಹಣವಲ್ಲದೇ ಮತ್ತೇನು? ಲೆಕ್ಕವಿಲ್ಲದ ಲಂಚದ ಸುಗ್ಗಿಯ ಅವಕಾಶವನ್ನೇ ಅಮೇರಿಕಾ ಸೈನ್ಯದ ಜೊತೆ ಭಾರತ ಸೈನ್ಯ ಜಂಟಿ ಕಾರ್ಯಾಚರಣೆಯನ್ನು ಉನ್ನತ [illegible]ರಿಸುವುದು ಎಂದು ಇಡೀ ಸರ್ಕಾರ ಗ್ರಹಿಸಿ-ಭಾವಿಸಿದ.

ತೆಹಲ್ಕಾ ಹಗರಣದ ಬಗೆಗಿನ ವೆಂಕಟಸ್ವಾಮಿ ಆಯೋಗದ ವಿಚಾರಣೆ ಇನ್ನು ಮುಗಿದಿಲ್ಲ. ಜಾರ್ಜ್ ಮತ್ತೆ ರಕ್ಷಣಾ ಮಂತ್ರಿ. ಅಷ್ಟು ಮಾತ್ರವೇ ಅಲ್ಲ. ರಕ್ಷಣಾ ಖರೀದಿ ವ್ಯವಹಾರಗಳಲ್ಲಿ ಮಧ್ಯವರ್ತಿಗಳ ಪುನರಾಗಮನಕ್ಕೂ ಕೇಂದ್ರ ಸರ್ಕಾರ ಅವಕಾಶ ನೀಡಿದೆ.

ಇಸ್ರೇಲ್ ದೇಶದಿಂದ ಯುದ್ಧೋಪಕರಣವನ್ನು ಖರೀದಿಸಲಾಗಿದೆಯೇ ಎಂದು ಕೇಳಲಾದ ಪ್ರಶ್ನೆಗೆ ದೇಶದ ರಕ್ಷಣೆಯ ದೃಷ್ಟಿಯಿಂದ ಈ ಪ್ರಶ್ನೆಗೆ ಉತ್ತರಿಸಲಾಗದು ಎಂದು ಜಾರ್ಜ್ ನಿರಾಕರಿಸಿದ್ದಾರೆ. ಇಂತಹ ಒಪ್ಪಂದಗಳ ಗುಪ್ತತೆಯೊಳಗೆ ಇರಬಹುದಾದ ತೆಹಲ್ಕಾ ಶವಪೆಟ್ಟಿಗೆ ಹಗರಣಗಳನ್ನೆಲ್ಲಾ ಬಯಲಿಗೆಳೆಯುವಂತಹ ಪಾರದರ್ಶಕ ವ್ಯವಹಾರಕ್ಕೆ ದೇಶದ ಜನತೆ ಆಗ್ರಹಿಸುತ್ತಿದ್ದಾರೆ.

ಸಿ.ಎ.ಜಿ. ವರದಿ ಬಹಿರಂಗಗೊಂಡಂತೆ ದೇಶಾದ್ಯಂತ ಜನರು ಬೆಚ್ಚಿಬಿದ್ದರು. ಶವಪೆಟ್ಟಿಗೆಯಲ್ಲಿ ಲಂಚತಿನ್ನುವ ರಕ್ಷಣಾ ಮಂತ್ರಿ ತೊಲಗಬೇಕೆಂಬ ಆಗ್ರಹ ಸಂಸತ್ತನ್ನು ಕಂಪಿಸಿತು. ಇನ್ನೇನು ಆಗಲಿತ್ತೋ. ದೇಶದ ಪಾರ್ಲಿಮೆಂಟಿಗೇ ನುಗ್ಗುವ ಭಯೋತ್ಪಾದಕರ ಉಗ್ರ ಧಾಳಿಯ ಆಘಾತ ದೇಶವನ್ನು ತಟ್ಟಿದೆ. ಈ ಆಘಾತದ ತೆರೆ ಮರೆಯಲ್ಲಿ ಶವಪೆಟ್ಟಿಗೆ ಹಗರಣವನ್ನು ಹೂತುಬಿಡಲು ಇವರು ಸಂಚು ಹೂಡಬಲ್ಲರು. ಇವರ ಭಂಡತನಕ್ಕೆ ಮಿತಿಯೇ ಇಲ್ಲ. ಕಾದು ನೋಡೋಣ ಮುಂದೆ ಏನಾಗಲಿದೆ ಎಂದು.

- ಆರ್.ರಾಮಕೃಷ್ಣ

ಪಾರ್ಲಿಮೆಂಟ್ ಮೇಲೆ ಉಗ್ರರ ಧಾಳಿ ಭದ್ರತಾ ಲೋಪ...

ದೇಶದ ಪ್ರಜಾಪ್ರಭುತ್ವದ ಅಡಿಗಲ್ಲಾದ ಸಂಸತ್ ಭವನದ ಮೇಲೆ ಡಿಸೆಂಬರ್ 13 ರಂದು ಭಯೋತ್ಪಾದಕರು ನಡೆಸಿದ ಧಾಳಿ ಅತ್ಯಂತ ಖಂಡನಾರ್ಹ ಮತ್ತು ಅಘಾತಕಾರಿ. ಭದ್ರತಾ ಸಿಬ್ಬಂದಿಯ ಜಾಗೃತಿ ಮತ್ತು ಕರ್ತವ್ಯ ನಿಷ್ಠೆಯು ಸಂಭವಿಸಬಹುದಾಗಿದ್ದ ಭಾರೀ ಅನಾಹುತವನ್ನು ತಪ್ಪಿಸಿದೆ. ಭಯೋತ್ಪಾದಕರ ಸಂಚನ್ನು ವಿಫಲಗೊಳಿಸುವ ಯತ್ನದಲ್ಲಿ ನಡೆದ ಮುಖಾ ಮುಖಿ ಹೋರಾಟದಲ್ಲಿ ಸುಮಾರು 7 ಜನ ರಕ್ಷಣಾ ಸಿಬ್ಬಂದಿ ಬಲಿಯಾಗಿರುವುದು ಅತ್ಯಂತ ದುಃಖದ ಸಂಗತಿ, ದೇಶದ ರಕ್ಷಣೆಯ ಕಾರ್ಯದಲ್ಲಿ ತಮ್ಮನ್ನು ಸಮರ್ಪಿಸಿಕೊಂಡ ಅವರೆಲ್ಲರಿಗೂ ಶ್ರದ್ಧಾಂಜಲಿ ಸಲ್ಲಿಸುವುದು ಎಲ್ಲರ ಕರ್ತವ್ಯ.

ಆದರೆ ಪ್ರಜಾಪ್ರಭುತ್ವ ಬುನಾದಿಯ ಮೇಲೆ ನಡೆದ ಈ ಆತ್ಮಹತ್ಯಾದಳದ ಉಗ್ರಗಾಮಿಗಳ ಧಾಳಿಯು ತಮ್ಮ ದೇಶದ ಇಡೀ ಭದ್ರತೆ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಅದರಲ್ಲೂ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವು ದೇಶದ ಆಂತರಿಕ ಭದ್ರತೆಯನ್ನು ಕಾಪಾಡಲು ಸಂಪೂರ್ಣ ವಿಫಲರಾಗಿರುವುದು ಇದರಿಂದ ಸ್ಪಷ್ಟಗೊಂಡಿದೆ ಯಾಕೆಂದರೆ: ಸೆಪ್ಟೆಂಬರ್ 11ರ ನ್ಯೂಯಾರ್ಕ್ ಧಾಳಿಯ ನಂತರದಲ್ಲಿ ನಮ್ಮ ದೇಶದ ಪ್ರಮುಖ ಸ್ಥಳಗಳ ಮೇಲೆ ಈ ರೀತಿಯ ಧಾಳಿಗಳನ್ನು ಭಯೋತ್ಪಾದಕರು ನಡೆಸಬಹುದೆಂಬ ಮುನ್ಸೂಚನೆಗಳಿದ್ದರೂ ಅದನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ.

'ಆತ್ಮಹತ್ಯಾದಳದ' ಈ ಉಗ್ರರು ಕೇಂದ್ರ ಗೃಹ ಇಲಾಖೆಯ ಕಛೇರಿಯ ಪಾಸ್‌ಗಳನ್ನು ಬಳಸಿಕೊಂಡಿರುವ ಇನ್ನೂ ಆತಂಕದ ವಿಷಯ. ಇದು ಹೇಗೆ ಸಾಧ್ಯವಾಯಿತು ಎಂಬುದನ್ನು ಕೇಂದ್ರ ಸರ್ಕಾರ ಬಯಲುಗೊಳಿಸಬೇಕು.

ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆ ಕಟ್ಟಡಕ್ಕೆ ಉಗ್ರರು ನಡೆಸಿದ ಬಾಂಬ್ ಧಾಳಿಯ ಸಂದರ್ಭದಲ್ಲಿಯೇ ಗೃಹಮಂತ್ರಿ ಅಡ್ವಾಣಿಯವರು ಈ ರೀತಿಯ ದಾಳಿ ಸಂಸತ್‌ಗೂ ಬಂದೆರಗಬಹುದೆಂಬ ಎಚ್ಚರಿಕೆಯನ್ನು ನೀಡಿದ್ದರು. ಈ ಧಾಳಿಯ ಹಿಂದಿನ ದಿನ ಬಾಂಬೆಯಲ್ಲಿ ಪ್ರಧಾನಿಗಳು ಸಹ ತಿಳಿಸಿದ್ದರು. ಆದಾಗ್ಯೂ ಅವರು ಸೂಕ್ತ ಭದ್ರತಾ ವ್ಯವಸ್ಥೆಯನ್ನು ನಿಯೋಜಿಸುವಲ್ಲಿ ವಿಫಲರಾಗಿರುವುದು ಈ ಧಾಳಿಯಿಂದ ಸ್ಪಷ್ಟಗೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಸಂಸತ್ತಿಗೆ ಮತ್ತು ದೇಶದ ಜನತೆಗೆ ಉತ್ತರಿಸಬೇಕಾದುದ್ದು ಅಗತ್ಯವಿದೆ.

ಆದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆಯೇ ನಡೆದ ಘೋರ ಧಾಳಿ ಕುರಿತು ವಿರೋಧ ಪಕ್ಷಗಳ ಜೊತೆ ಯಾವುದೇ ಮಾತುಕತೆಯನ್ನು ಇದುವರೆಗೂ ನಡೆಸದಿರುವುದು ಅತ್ಯಂತ ಖಂಡನಾರ್ಹ. ಸಂಸದೀಯ ಪ್ರಜಾಸತ್ತೆ ಬಗ್ಗೆ ಮಾತನಾಡುವ ಪ್ರಧಾನಮಂತ್ರಿ ವಾಜಪೇಯಿಯವರು ಇಂತಹ ಗಂಭೀರ ಘಟನೆ ಕುರಿತಂತೆ ವಿರೋಧ ಪಕ್ಷಗಳನ್ನು ನಿರ್ಲಕ್ಷಿಸಿದ್ದಾರೆ. ಅಲ್ಲದೇ ಸಂಸತ್ ಭವನವನ್ನೇ ತಮ್ಮ ಗುರಿಯನ್ನಾಗಿಸಿಕೊಂಡ ಉಗ್ರರ ವಿರುದ್ಧ ತಕ್ಷಣದ ಕ್ರಮ ಕೈಗೊಳ್ಳುವ ಕುರಿತು ವಿರೋಧ ಪಕ್ಷಗಳ ಜೊತೆ ಚರ್ಚಿಸಬೇಕಾದ ಸೂಕ್ಷ್ಮ ವಿಚಾರ ಕೂಡ ಇದಾಗಿದೆ.

POTO ದೊಂದಿಗೆ ತಳುಕು

ಕೇಂದ್ರ ಸರ್ಕಾರ ಉಗ್ರಗಾಮಿಗಳ ಗುಂಡಿನ ಧಾಳಿಗೆ ಸೂಕ್ತ ಪ್ರತ್ಯುತ್ತರ ನೀಡುವ ಬದಲು ಭಯೋತ್ಪಾದನೆ ನಿಗ್ರಹ ಮಸೂದೆ (POTO)ಯೇ ಇದಕ್ಕೆ ಪರ್ಯಾಯ ಮಾರ್ಗವೆಂದು ಪ್ರತಿಬಿಂಬಿಸಲು ಹೆಣಗಾಡುತ್ತಿರುವುದು ಮತ್ತು ಪ್ರಸ್ತುತ ಘಟನೆಯನ್ನು ಪೋಟೋದೊಂದಿಗೆ ಸೇರಿಸಲು ಹೊರಟಿರುವುದು ವಿಪರ್ಯಾಸ. ಭದ್ರತಾ ವ್ಯವಸ್ಥೆ ಮತ್ತು ಬೇಹುಗಾರಿಕೆ ಜಾಲಗಳನ್ನು ಬಲಪಡಿಸಲು ಹಾಗೂ ಭಯೋತ್ಪಾದನೆ ನಿಗ್ರಹಕ್ಕೂ ಈಗಿರುವ ಕಾನೂನುಗಳೇ ಸಾಕಷ್ಟು ಅವಕಾಶಗಳನ್ನು ನೀಡಿದೆ. ಹೀಗಿದ್ದಾಗ್ಯೂ ಸಂಸತ್ ಭವನದ ಮೇಲಿನ ಧಾಳಿಯ ನೆಪದಲ್ಲಿ ಪೋಟೋ ಜಾರಿಮಾಡಲೊರಟರೆ ಅದು ಜನರ ಹಕ್ಕುಗಳನ್ನು ಮೊಟಕುಗೊಳಿಸುವ ಇನ್ನೊಂದು ಪ್ರಜಾಪ್ರಭುತ್ವ ವಿರೋಧಿ ಕ್ರಮವಷ್ಟೆ.!

- ಕೆ.ಮಹಾಂತೇಶ್



ಸಕ್ಕರೆ ನಾಡಿನಲ್ಲಿ ಹೆಚ್ಚಿದ ಆತಂಕ
ಪರ್ಯಾಯ ನಿರೀಕ್ಷೆಯಲ್ಲಿ ದುಡಿವ ಜನ



ಜಾಗತೀಕರಣ, ಉದಾರೀಕರಣದ ಪರಿಣಾಮಗಳು ಸಾಮಾಜಿಕ-ರಾಜಕೀಯ ಸನ್ನಿವೇಶಗಳು ಕುರಿತು ವಿಶ್ಲೇಷಣೆ ಈಗಾಗಲೇ ಕಳೆದ ಸಂಚಿಕೆಗಳಿಂದ ಆರಂಭಿಸಲಾಗಿದೆ. ಆ ಸರಣಿಯಲ್ಲೀಗ ಮಂಡ್ಯ-ಕೊಡಗು ಜಿಲ್ಲಾ ಸಿಪಿಐ(ಎಂ) ಸಮ್ಮೇಳನಗಳ ವರದಿ ಇಲ್ಲಿದೆ.

ಮಂಡ್ಯ ಜಿಲ್ಲೆಯೆಂದೊಡನೆ ತಟ್ಟನೆ ಇದೊಂದು ಶ್ರೀಮಂತ ಜಿಲ್ಲೆ ಎಂದು ಭಾವಿಸಲಾಗುತ್ತದೆ. ಆದರೆ ಕರ್ನಾಟಕದ 28 ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯು 13-14ನೇ ಸ್ಥಾನದಲ್ಲಿದೆ. ಮಂಡ್ಯ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವವರು ಶೇ. 30ರಷ್ಟು ಜನರಿದ್ದರೆ, ಸಾಕ್ಷರತೆ ಶೇ.60 ಮಾತ್ರ. ಸುರಕ್ಷಿತ ಕುಡಿಯುವ ನೀರಿಲ್ಲದವರ ಪ್ರಮಾಣ ಶೇ. 90ರಷ್ಟಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯವಿಲ್ಲದವರು ಶೇ. 94ರಷ್ಟು ಎನ್ನುವುದೇ ಮಂಡ್ಯ ಜಿಲ್ಲೆಯ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಹೆಚ್ಚಿದ ಕೃಷಿ ಬಿಕ್ಕಟ್ಟು

1991ರಿಂದ ಕೇಂದ್ರ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಸಂಪೂರ್ಣವಾಗಿ ಬಡಜನ ವಿರೋಧಿಯಾಗಿದ್ದು, ಈ ನೀತಿಗಳನ್ನು ಜಿಲ್ಲೆಯ ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ಮತ್ತಷ್ಟು ಅಸ್ತವ್ಯಸ್ತಗೊಳಿಸಿವೆ. ಮಂಡ್ಯ ಜಿಲ್ಲೆಯ ಆರ್ಥಿಕತೆ ಪ್ರಧಾನವಾಗಿ ಕೃಷಿ-ಕ್ಷೇತ್ರದ ಮೇಲೆ ಅವಲಂಬಿಸಿದ್ದು ಶೇ. 53 ರಷ್ಟು ಜನರು ರೈತರು, ಶೇ. 25 ಕೃಷಿ ಕೂಲಿಕಾರರು ಕೃಷಿಕ್ಷೇತ್ರದ ಮೇಲೆ ಅವಲಂಬಿತರಾಗಿದ್ದಾರೆ. ರಾಜ್ಯಮಟ್ಟದಂತೆಯೇ ಸರಿಸುಮಾರು ಕೃಷಿ

ಆರ್ಥಿಕ - ಸಾಮಾಜಿಕ ಪರಿಸ್ಥಿತಿ

ಉತ್ಪಾದನೆ ಸ್ಥಗಿತತೆಯಲ್ಲಿದೆ. ಆಹಾರ ಬೆಳೆಗಳಿಂದ ಜನರು ದೂರಸರಿಯುತ್ತಿದ್ದಾರೆ. ಸಾಧ್ಯವಾದಷ್ಟು ವಾಣಿಜ್ಯ ಬೆಳೆಗಳ ಕಡೆ ಮುಖಮಾಡುತ್ತಿರುವುದನ್ನು ಕಾಣಬಹುದಾಗಿದೆ. ವಾಣಿಜ್ಯ ಬೆಳೆಗಳ ಕಡೆ ಗಮನಹರಿಸುತ್ತಿದ್ದರೂ ಮಂಡ್ಯ ಜಿಲ್ಲೆಯ ಕೃಷಿ ಪ್ರಧಾನವಾಗಿ ಕಬ್ಬು ಭತ್ತ, ರಾಗಿ, ಶೇಂಗಾ, ರೇಷ್ಮೆ ಮತ್ತು ತೆಂಗಿನ ಮೇಲೆ ಕೇಂದ್ರೀಕರಣಗೊಂಡಿದೆ ಕಬ್ಬು ಬೆಳೆಯುವ ಪ್ರದೇಶದ ವ್ಯಾಪ್ತಿ ದಿನವೂ ವಿಸ್ತರಿಸುತ್ತಿದೆ. ಇದರ ಪರಿಣಾಮವಾಗಿ ಹಾಲಿ ಇರುವ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯಲು ಸಾಧ್ಯವಾಗದೆ ಪ್ರತಿ ಎರಡು ವರ್ಷಕ್ಕೊಮ್ಮೆ ರೈತರು ಬಿಕ್ಕಟ್ಟಿಗೆ ಸಿಲುಕುತ್ತಾರೆ. ಬೆಲ್ಲಕ್ಕೆ ಕುಸಿದಿರುವ ಬೆಲೆ ಮತ್ತು ಕಬ್ಬಿನ ಗಾಣಗಳು ಶ್ರೀಮಂತ ರೈತರ ಹಿಡಿತದಲ್ಲಿರುವುದರಿಂದ ಬಿಕ್ಕಟ್ಟಿನ ಸಂದರ್ಭಗಳು ಬಂದಾಗ ಸಣ್ಣ ಹಿಡುವಳಿದಾರ ರೈತರೇ ಹೆಚ್ಚು ಕಷ್ಟ ಅನುಭವಿಸುತ್ತಾರೆ. ಕೃಷಿ ಉಪಕರಣಗಳು, ರಸಗೊಬ್ಬರ ಬೆಲೆಯಲ್ಲಿ ನಿರಂತರ ಹೆಚ್ಚಳದಿಂದಾಗಿ ಕಬ್ಬುಕೃಷಿ ಇಂದು ಲಾಭದಾಯಕವಾಗಿ ಉಳಿದಿಲ್ಲ. ಹೆಚ್ಚಿನ ಇಳುವರಿ ತೆಗೆದಾಗ ಸ್ವಲ್ಪ ಪ್ರಯೋಜನವಾಗಬಹುದಾದರೂ ಕಬ್ಬಿನ ಕಾರ್ಖಾನೆಗಳು ತಮ್ಮ ಅನುಕೂಲಕ್ಕಾಗಿ ಇಳುವರಿಯ ಮೇಲೂ ನಿರ್ಬಂಧ ಹೇರಿ ರೈತರನ್ನು ಹಿಂಸಿಸುತ್ತಾರೆ. ಈಗಾಗಲೇ ಸಂಕಷ್ಟದಲ್ಲಿರುವ ರೈತರು, ಕೇಂದ್ರ ಸರ್ಕಾರದ ಉದಾರೀಕರಣ ನೀತಿಯ ಪರಿಣಾಮವಾಗಿ ವಿಪರೀತವಾಗಿ ಆಮದುಗೊಳ್ಳುತ್ತಿರುವ ಸಕ್ಕರೆಯಿಂದ ಸಕ್ಕರೆಗೆ ಬೇಡಿಕೆ ಕುಸಿದಿದೆ. ಇದರಿಂದಾಗಿ ಸಕ್ಕರೆ ಕೈಗಾರಿಕೆಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ, ಪರಿಣಾಮವಾಗಿ ಅವುಗಳು ರೈತರಿಗೆ ಕೋಟ್ಯಾಂತರ ರೂ. ಬಾಕಿ ಕೊಡಬೇಕಾಗಿದೆ. ಇದರಿಂದ ಜಿಲ್ಲೆಯ ಆರ್ಥಿಕವಾಗಿ ಚಲನಶೀಲವಾಗಿಲ್ಲ. ಇದರ ಕುರಿತು ಮತ್ತಷ್ಟು ಅಧ್ಯಯನ ಅಗತ್ಯವಿತ್ತು.



ಮತ್ತೊಂದು ವಾಣಿಜ್ಯ ಬೆಳೆಯಾದ ತೆಂಗು ಅತ್ಯಂತ ಬಿಕ್ಕಟ್ಟಿನಲ್ಲಿದೆ. ಒಂದು ಕಡೆ ವ್ಯಾಪಕ ನುಸಿರೋಗ ತಗುಲಿ ಮರಗಳು ಹಾಳಾಗುತ್ತಿದ್ದರೆ. ಬೆಳೆದ ಬೆಲೆಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ವಿದೇಶಗಳಿಂದ ತೆಂಗು ಉತ್ಪನ್ನಗಳು ಮುಕ್ತವಾಗಿ ಆಮದಾಗುತ್ತಿರುವುದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ.

ಆಹಾರ ಬೆಳೆಗಳೂ ಒಂದು ಹಂತದವರೆಗೆ ವಾಣಿಜ್ಯ ಬೆಳೆಗಳೂ ಆಗಿದ್ದ ಭತ್ತ ಮತ್ತು ಕಡಲೆಕಾಯಿ ಕೂಡ ಬಿಕ್ಕಟ್ಟಿನಲ್ಲಿವೆ. ಒಂದು ಕಡೆ ಭತ್ತದ ಬೆಳೆಗೆ ಏರುತ್ತಿರುವ ವೆಚ್ಚ ಮತ್ತೊಂದೆಡೆ ರೋಗ ಮತ್ತು ಬೆಲೆ ಇಳಿಕೆ ರೈತರು ಭತ್ತದ ಬೆಳೆಯಿಂದ ದೂರ ಸರಿಯುವಂತೆ ಮಾಡಿದೆ. ರಾಜ್ಯ ಮತ್ತು ದೇಶದಲ್ಲಿ ಬರುತ್ತಿರುವ ಆಹಾರ ಬಿಕ್ಕಟ್ಟಿಗೆ ಇದು ಮತ್ತಷ್ಟು ಕಾಣಿಕೆ ನೀಡಲಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ಕೃಷಿ ನೀತಿಗಳಿಂದ ರೈತರು ನಿರಂತರವಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಅಣೆಕಟ್ಟೆ ನೀರಾವರಿಯನ್ನು ಹೆಚ್ಚಿನ ರೈತರು ಅವಲಂಬಿಸಿದ್ದರೂ ಜಿಲ್ಲೆಯ ಲಕ್ಷಾಂತರ ರೈತರು ಕೃಷಿಗೆ ಕೊಳವೆ ಬಾವಿಗಳನ್ನು ಪೂರ್ಣ ಅಥವಾ ಭಾಗಶಃ ಅವಲಂಬಿಸಿದ್ದಾರೆ. ಈಗಾಗಲೇ ಅನಿಯಮಿತ ವಿದ್ಯುತ್ ಸರಬರಾಜಿನಿಂದ ನರಳುತ್ತಿರುವ ರೈತರಿಗೆ ಈಗ ರಾಜ್ಯ ಸರ್ಕಾರ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ನಿರ್ದೇಶನದಂತೆ. ಕೃಷಿ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸಿ, ಶುಲ್ಕ ವಿಧಿಸಲು ತೀರ್ಮಾನಿಸಿರುವುದು ಮತ್ತಷ್ಟು ಸಮಸ್ಯೆಗೆ ಕಾರಣವಾಗಲಿದೆ.


ರೈತಕೂಲಿಕಾರರು

ರೈತರು ಮತ್ತು ಸಣ್ಣ ರೈತರಿಗೆ ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳಿಂದ ಒಂದು ಹಂತದವರೆಗೆ ಸಾಲ ಸೌಲಭ್ಯಗಳು ಸಿಗುತ್ತಿದ್ದರೂ ಈಗಲೂ ಹೆಚ್ಚಿನ ಜನ ಗ್ರಾಮೀಣ ಲೇವಾದೇವಿಗಾರರು ಮತ್ತು ಗಿರವಿ ಅಂಗಡಿಗಳ ಸಾಲದ ಮೇಲೆಯೇ ಅವಲಂಬಿತರಾಗಿದ್ದಾರೆ. ಆದ್ದರಿಂದ ಅವರು ದುಬಾರಿ ಬಡ್ಡಿ (ಶೇ. 10ರವರೆಗೆ) ಬಿಟ್ಟಿ ದುಡಿಮೆ ಹಾಗೂ ರಾಜಕೀಯ ದಾಳಕ್ಕೆ ಬಲಿಯಾಗುತ್ತಿದ್ದಾರೆ. ಸಹಕಾರಿ ಸಂಘಗಳಿಂದ ಮತ್ತು ಬ್ಯಾಂಕುಗಳಿಂದ ಇನ್ನಷ್ಟು ಸಾಲಸೌಲಭ್ಯ ಬಡವರು ಮತ್ತು ಸಣ್ಣ ರೈತರಿಗೆ ಸುಲಭವಾಗಿ ಸಿಗಬೇಕಾಗಿದೆ.

ಜಿಲ್ಲೆಯಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ಜನಸಂಖ್ಯೆಯ ಶೇ. 25ರಷ್ಟಿದೆ. ಈ ಕೂಲಿಕಾರರು ಸಾಮಾನ್ಯವಾಗಿ ಕಬ್ಬು ಕಂಟಾವು, ಆಲೆಮನೆಗಳು ಇತರೆ ಅನಿಯಮಿತ ಕೆಲಸಗಳನ್ನು ಅವಲಂಬಿಸಿದ್ದಾರೆ. ಇವರ ಸ್ಥಿತಿಯಲ್ಲಿ ಉತ್ತರ ಕರ್ನಾಟಕದಷ್ಟು ಬೀಕರತೆಯಿಲ್ಲದಿದ್ದರೂ. ಕಷ್ಟದ ಪರಿಸ್ಥಿತಿಯಿದೆ. ಕೂಲಿಕಾರರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಭೂರಹಿತ, ಭೂಸಹಿತ ಕೂಲಿಕಾರರಾಗಿರುವ ಇವರಿಗೆ ಕೂಲಿಯಲ್ಲಿ ನಿಯಮಿತತೆಯಿಲ್ಲ. ಈಗ ಒಕ್ಕಣೆ ಕೆಲಸ ಮತ್ತು ಕಬ್ಬು ಕಟಾವಿಗೆ ಯಂತ್ರಗಳನ್ನು ಅಳವಡಿಸುತ್ತಿರುವುದರಿಂದ ಅವರ ಬದುಕಿಗೆ ಮತ್ತಷ್ಟು ಲೇವಾದೇವಿಗಾರರು ಇವರನ್ನು ಮತ್ತಷ್ಟು ತೊಂದರೆಗೆ ತಳ್ಳಲಿದ್ದಾರೆ. ಕುಸಿಯುತ್ತಿರುವ ಪಡಿತರ ವ್ಯವಸ್ಥೆಗೆ ಮತ್ತು ಖಾಸಗಿ ಕಷ್ಟಕ್ಕೆ ನೂಕುತ್ತಾರೆ.

ಕುಸಿದ ಕೈಗಾರಿಕೆ

ಕೈಗಾರಿಕ ವಲಯದಲ್ಲಿ ಮಂಡ್ಯ ಜಿಲ್ಲೆಯು ಮಹತ್ವದ ಸ್ಥಾನಮಾನವನ್ನೇನೂ ಪಡೆದಿಲ್ಲ. ಇರುವ ಕೈಗಾರಿಕೆಗಳು ಉದಾರೀಕರಣ-ಜಾಗತೀಕರಣ ನೀತಿಗಳಿಂದ ತತ್ತರಿಸುತ್ತಿವೆ. ಜಿಲ್ಲೆಯ ದೊಡ್ಡ ಕೈಗಾರಿಕೆಗಳಾಗಿದ್ದ ಮೈಸೂರು ಅಸಿಟೇಟ್ ಉತ್ಪಾದನೆಗೆ ಬೇಡಿಕೆಯಿಲ್ಲದೆ. ಮುಚ್ಚಿಹೋಗಿದೆ. ಸಾರ್ವಜನಿಕ ವಲಯದ ಇದರಲ್ಲಿ ಕೆಲಸಮಾಡುತ್ತಿದ್ದ ಸಾವಿರಾರು ಕುಟುಂಬಗಳು ಬೀದಿಪಾಲಾಗಿವೆ. ಮತ್ತೊಂದು ಸಾರ್ವಜನಿಕ ವಲಯದ ಬೆಳಗೋಳ ಕಾಗದ ಕಾರ್ಖಾನೆ ಮುಚ್ಚುವ ಹಂತದಲ್ಲಿದೆ. ಮೈಸೂರು ಸಕ್ಕರೆ ಕಂಪನಿ ಕಷ್ಟದಲ್ಲಿ ನಷ್ಟದಲ್ಲಿ ನಡೆಯುತ್ತಿದೆ. 3 ಕೈಗಾರಿಕಾ



ಸಿಹಿಯಾಗದ ಬದುಕು

ಪ್ರದೇಶಗಳಲ್ಲಿರುವ ಸಣ್ಣ ಕೈಗಾರಿಕೆಗಳಲ್ಲಿ ಹಲವು ಮುಚ್ಚಿ ಕೆಲವು ಕಷ್ಟದಲ್ಲೇ ನಡೆಯುತ್ತಿವೆ. ಈ ಎಲ್ಲಾ ಕೈಗಾರಿಕೆಗಳ ಮೇಲೆ ಕೇಂದ್ರ ರಾಜ್ಯ ಸರ್ಕಾರದ ನೀತಿಗಳು ಮಾರಕ ಪರಿಣಾಮ ಬೀರುತ್ತಿವೆ. ಪ್ರಬಲ ಕಾರ್ಮಿಕ ಚಳುವಳಿಯಿಲ್ಲದಿರುವುದು ಅಲ್ಲಿರುವ ಸಾವಿರಾರು ಕಾರ್ಮಿಕರು ಅಭದ್ರತೆಯಲ್ಲಿ ಕೆಲಸಮಾಡುವಂತಹ ಸನ್ನಿವೇಶ ಸೃಷ್ಟಿಸಿದೆ.

ವ್ಯಾಪಾರ ವಲಯವು ವಿಸ್ತರಿಸಲು ಕೂಡ ಮಂಡ್ಯ ಜಿಲ್ಲೆಗೆ ಕೆಲವು ಮಿತಿಗಳಿವೆ. ಹೆಚ್ಚಿನ ಜನತೆ ಕೃಷಿಯ ಮೇಲೆ ಅವಲಂಬಿತರಾಗಿರುವುದು, ಕೈಗಾರೀಕರಣವಾಗದೆ ಜನರ ಆದಾಯ ಕೆಳಮಟ್ಟದಲ್ಲಿರುವುದು ಪ್ರಮುಖ ವಾಣಿಜ್ಯ ನಗರಗಳಾದ ಮೈಸೂರು ಬೆಂಗಳೂರು ಸಮೀಪದಲ್ಲಿರುವುದು ಮಂಡ್ಯ ಜಿಲ್ಲೆಯಲ್ಲಿ ವ್ಯಾಪಾರ ವಿಸ್ತರಣೆಯಾಗಲು ಮಿತಿ ಹಾಕಿವೆ. ಸಾಮಾಜಿಕವಾಗಿಯೂ ಜಿಲ್ಲೆಯ ಮಟ್ಟಿಗೆ ಮಹತ್ವದ ಬದಲಾವಣೆಯೇನೂ ಆಗಿಲ್ಲ. ಸಾಕ್ಷರತೆ ಶೇ. 60ರ ಆಸುಪಾಸಿನಲ್ಲೇ ಇದೆ. ಈಗಲೂ ಪಾಳೇಗಾರಿಕೆ ಮೌಲ್ಯಗಳು ಸಮಾಜದಲ್ಲಿ ಪ್ರಧಾನ ಪಾತ್ರವಹಿಸುತ್ತಿವೆ. ಪ್ರಮುಖ ಜಾತಿಗಳಲ್ಲಿಯೂ ಹಲವಾರು ಉಪಪಂಗಡಗಳಲ್ಲಿ ವಿಂಗಡಣೆಯಾಗಿದ್ದು ಆ ಪಂಗಡಗಳನ್ನು ಜಾತಿಯ ಮುಖಂಡರು ನಿಯಂತ್ರಿಸುತ್ತಾರೆ. ಈ ಮುಖಂಡರು ಸಾಮಾನ್ಯವಾಗಿ ಬಂಡವಾಳಶಾಹಿ ಪಕ್ಷಗಳ ಮುಖಂಡರು, ಹಿಂಬಾಲಕರಾಗಿರುವುದು ಜಾತಿ ರಾಜಕೀಯವೇ ಜಿಲ್ಲೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಂತೆ ಮಾಡಿದೆ.

ದಲಿತರಲ್ಲಿ ಜಾಗೃತಿ

ದಲಿತರಲ್ಲಿ ಬಹುಸಂಖ್ಯಾತರು ಈಗಲೂ ಭೂರಹಿತ ಕೃಷಿ ಕೂಲಿಕಾರರೇ ಆಗಿದ್ದಾರೆ. ಅವರ ಪ್ರಜ್ಞೆಯಲ್ಲಿ ಜಾಗೃತಿ ಹೆಚ್ಚಾಗುತ್ತಿದ್ದು ಹೋರಾಟಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆಯ ಆಚರಣೆಗಳಿವೆ. ಹೋಟಲುಗಳಲ್ಲಿ ಎರಡು ಲೋಟ ಪದ್ಧತಿಯೇ ಪ್ರಧಾನವಾಗಿದೆ. ದಲಿತರಲ್ಲಿ ಹೆಚ್ಚುತ್ತಿರುವ ಪ್ರಜ್ಞೆ ಹೋರಾಟ ಇತ್ತೀಚಿಗೆ ಮೇಲ್ಜಾತಿಯ ಜನಗಳಲ್ಲಿ ಅಶಾಂತಿಗೆ ಕಾರಣವಾಗಿ ಸಣ್ಣಪುಟ್ಟ ಸಂಘರ್ಷಗಳಿಗೆ ಎಡೆಮಾಡಿಕೊಡುತ್ತಿದೆ.

ಮಹಿಳೆಯರು

ಮಹಿಳೆಯರ ಸ್ಥಿತಿಯಲ್ಲಿ ಸುಧಾರಣೆ ಕಂಡು ಬರುತ್ತಿದ್ದರೂ ಈಗಲೂ ಗ್ರಾಮೀಣ ಪ್ರದೇಶದಲ್ಲಿ ಪಾಳೇಗಾರಿ ಮೌಲ್ಯಗಳೇ ತುಂಬಿವೆ. ಆದ್ದರಿಂದ ಮಹಿಳೆಯರು ದುಡಿಮೆಯಲ್ಲಿ ವ್ಯಾಪಕವಾಗಿ ಭಾಗವಹಿಸುತ್ತಿದ್ದರು ಪುರುಷರೇ ಅಧಿಪತ್ಯ ಯಜಮಾನಿಕೆ ಹೊಂದಿದ್ದಾರೆ. ಈಗಲೂ ಶೇ. 90ರಷ್ಟು ಕುಟುಂಬಗಳಲ್ಲಿ ಶೌಚಾಲಯಗಳಿಲ್ಲದಿರುವುದು ಮತ್ತು ಮನೆಗೆಲಸ, ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಾಗಿರುವುದು ಅವರನ್ನು ಅರಷ್ಟದಲ್ಲೇ ಬದುಕುವಂತೆ ಮಾಡಿದೆ.

ಮಂಡ್ಯ ಜಿಲ್ಲೆಯ ರಾಜಕೀಯ ಪರಿಸ್ಥಿತಿ

ಮಂಡ್ಯ ಜಿಲ್ಲೆಯು 7 ತಾಲ್ಲೂಕುಗಳನ್ನು ಒಳಗೊಂಡಿದ್ದು 9 ವಿಧಾನ ಸಭಾ ಕ್ಷೇತ್ರಗಳನ್ನು ಹೊಂದಿದೆ. ಜಿಲ್ಲೆಯ 8 ವಿಧಾನ ಸಭಾ ಕ್ಷೇತ್ರಗಳು ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಸೇರಿದ್ದರೆ ಮಳವಳ್ಳಿ ಮೀಸಲು ಕ್ಷೇತ್ರವು ಕನಕಪುರ ಲೋಕಸಭಾ ಕ್ಷೇತ್ರಕ್ಕೆ ಸೇರಿರುತ್ತದೆ. ಕಳೆದ ಸಮ್ಮೇಳನದ ಸಮಯದಲ್ಲಿ ಪಾಂಡವಪುರ ವಿಧಾನ ಸಭಾ ಕ್ಷೇತ್ರವನ್ನು ಹೊರತುಪಡಿಸಿ ಉಳಿದ 8 ಕ್ಷೇತ್ರಗಳನ್ನು ಅವಿಭಜಿತ ಜನತಾ ದಳದ ಶಾಸಕರು ಪ್ರತಿನಿಧಿಸುತ್ತಿದ್ದರು. ಕಳೆದ ಚುನಾವಣೆಯಲ್ಲಿ ನಾಗಮಂಗಲದಿಂದ ಜಾತ್ಯಾತೀತ ದಳ, ಮಳವಳ್ಳಿಯಿಂದ ಸಂಯುಕ್ತ ಜನತಾದಳ, ಕೆರೆಕೋಡಿನಿಂದ ಸ್ವತಂತ್ರ ಶಾಸಕರು ಆರಿಸಿ ಬಂದಿದ್ದಾರೆ. ಉಳಿದ 6 ಕ್ಷೇತ್ರಗಳಲ್ಲಿ

ಪುಟ 10 ಕ್ಕೆ

ಕಿತ್ತಾಟದಲ್ಲಿ ಕಾಂಗ್ರೆಸ್ ಮಗ್ನ, ಹೂಂಕರಿಸುತ್ತಿರುವ ಸಂಘ ಪರಿವಾರ

ಕೊಡಗು ಜಿಲ್ಲಾ ಸಿಪಿಐ(ಎಂ) 2ನೇ ಸಮ್ಮೇಳನ

ಕೊಡಗು ಜಿಲ್ಲೆಯಲ್ಲಿ ಒಟ್ಟಾರೆಯಾಗಿ ರಾಜಕೀಯ ಬೆಳವಣಿಗೆ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ರಾಜ್ಯದಲ್ಲಿ ಅಧಿಕಾರ ನಡೆಸುವವರು ಕಿತ್ತಾಟದಿಂದ ಒಳ ಜಗಳದಿಂದ ಹೊರಬರಲು ಸಾಧ್ಯವೇ ಇಲ್ಲದ ಪರಿಸ್ಥಿತಿ, ಜಿಲ್ಲಾ ಪಂಚಾಯ್ತಿ ಹಾವು ಮುಂಗುಸಿ ಆಟ, ಮಂತ್ರಿಯ ಕೆಲವು ಬೆಂಬಲಿಗರ ಗುಂಪು ಮಂತ್ರಿ ಹೇಳಿದ್ದೇ ವೇದವ್ಯಾಕ್ಯ. ಅಬಿವೃದ್ದಿಯಲ್ಲಿ ಶೂನ್ಯ.

ಕಾಫಿ ಬೆಳೆಗಾರರ ಸಮಸ್ಯೆಗಳು :

ಮುಕ್ತ ಮಾರುಕಟ್ಟೆಯಿಂದ ಸ್ವರ್ಗ ಸಿಕ್ಕುತ್ತೆ ಎಂಬ ಬಾವನೆಯನ್ನು ಶ್ರೀಮಂತ ಬೆಳೆಗಾರರ ಬೇಡಿಕೆ ಅಂದು ಮಾದ್ಯಮ ಸಣ್ಣ ಬೆಳೆಗಾರರಿಗೆ ಕೂಡ ಒಂದು ಉತ್ತಮ ಬೇಡಿಕೆಯಾಗಿ ಕಂಡರೂ ಈಗ ಅದು ಅವರ ಪಾಲಿಗೆ ಒಂದು ದೊಡ್ಡ ಶಾಪವಾಗಿ ಪರಿಣಮಿಸಿದೆ.

ಮುಕ್ತ ಮಾರುಕಟ್ಟೆ ಎಂಬುದು ಬೆಂಕಿಯಿಂದ ಬಾಣಲೆಗೆ ಎಂದು ಈಗ ನಿಜವಾಗಿದೆ. ಕಾಫಿಬೆಳೆಗಾರರು ಸಣ್ಣ ಮತ್ತು ಮದ್ಯಮ ವರ್ಗದ ಬೆಳೆಗಾರರು ಮುಂದೆ ಕೇಂದ್ರ ಸರಕಾರದ ನೀತಿಗಳ ವಿರುದ್ದ ಸಂಘಟಿತರಾಗುವಂತೆ ಈಗಿನ ವ್ಯವಸ್ಥೆ ಅವರಿಗೆ ಹೋರಾಟಕ್ಕೆ ಪೂರಕವಾಗಿದೆ.

ಭಾಜಪದವರಿಗೆ ಜನರ ಸಮಸ್ಯೆಗಳ ಬಗ್ಗೆ ಗಮನವಿಲ್ಲ. ಕೇಂದ್ರ ಸರಕಾರದ ಜನವಿರೋಧಿ ಆರ್ಥಿಕ ನೀತಿಯ ಫಲವಾಗಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪ್ರಭಾವ, ವಿಶ್ವವಾಣಿಜ್ಯ ಒಕ್ಕೂಟದ ಒಪ್ಪಂದದ ಪರಿಣಾಮದ ಬಿಸಿ ಕೊಡಗಿನ ಬೆಳೆಗಾರರಿಗೆ ಮುಟ್ಟಲಾರಂಬಿಸಿದೆ. ಯಾವ ಕಾಫಿ ಬೆಳೆಗಾರರು ಬಿಜೆಪಿ ಅಧಿಕಾರಕ್ಕೆ ಬಂದರೆ, ರೈತರಿಗೆ ಸ್ವರ್ಗ ಸಿಕ್ಕುತ್ತೆ ಎಂಬ ಬಾವನೆಯಲ್ಲಿ ಅಂದು ಬಿಜೆಪಿಗೆ ಮತನೀಡಿದರೋ ಅದೇ ಕಾಫಿ ಬೆಳೆಗಾರರು ಇಂದು ಕೇಂದ್ರ ಸರಕಾರದ ನೀತಿಗಳ ವಿರುದ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ವಾಜಪೇಯಿಯವರನ್ನು ಹಿಗ್ಗಾಮುಗ್ಗ ಬಯ್ಯಲು ಪ್ರಾರಂಭಿಸಿದ್ದಾರೆ. ಬಿಜೆಪಿ ಕೊಡಗಿನಲ್ಲಿ ತನ್ನ ಅಸ್ತಿತ್ವವನ್ನು ಸಂಪೂರ್ಣ ಕಳೆದುಕೊಳ್ಳುವ ಸ್ಥಿತಿಯಲ್ಲಿದೆ. ಕೇಂದ್ರದ ನೀತಿಗಳನ್ನು ಮರೆಮಾಚಲು ಜನರ ಹೋರಾಟದ ದಿಕ್ಕನ್ನು ಬದಲಾಯಿಸಲು ಬಿಜೆಪಿ ಒಳಗೊಂಡ ಆರ್.ಎಸ್.ಎಸ್., ಹಿಂದೂಜಾಗರಣ ವೇದಿಕೆ, ಭಜರಂಗದಳ (ಸಂಘಪರಿವಾರ) ಹಿಂದುತ್ವದ ಹೆಸರಿನಲ್ಲಿ ಜಿಲ್ಲೆಯಲ್ಲಿ 'ಹಿಂದೂ ಸಮಾಜೋತ್ಸವ', ಹಿಂದೂ ಭಾತೃತ್ವ ಸಮ್ಮೇಳನ, ರಾಷ್ಟ್ರಗೀತೆ ಪ್ರಕರಣವನ್ನು ಇಡೀ ಸಮಾಜದ ಸಮಸ್ಯೆಯಂತೆ ಪ್ರತಿಬಿಂಬಿಸಿ ಇವರ ನಿಜ ಸ್ವರೂಪವನ್ನು ಮರೆಮಾಚಲು ಪ್ರಯತ್ನಿಸುತ್ತಿವೆ.

ಆರ್ಥಿಕವಾಗಿ ಸಮಾಜಿಕವಾಗಿ, ರಾಜಕೀಯವಾಗಿ ಜನಸಾಮಾನ್ಯರಿಗೆ ಸಲ್ಲಬೇಕಾದ ಅವಶ್ಯಕತೆಗಾಗಿ ಹೋರಾಟ ಮಾಡಬೇಕಾದ ಜನಸಾಮಾನ್ಯರನ್ನು ಸಂಘಪರಿವಾರ ಜಿಲ್ಲೆಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಬಲಿಕೊಡುತ್ತಿದೆ.


ರಾಷ್ಟ್ರಗೀತೆ ಪ್ರಕರಣ : ಮಡಿಕೇರಿಯ ಬ್ಲಾಸಂ ಶಾಲೆಯ ಮೂರುವಿದ್ಯಾರ್ಥಿಗಳು ರಾಷ್ಟ್ರಗೀತೆ ಹಾಡಿಲ್ಲ ಎಂಬ ಕಾರಣವೊಂದನ್ನು ಮುಂದೆ ಇಟ್ಟು, ಜಿಲ್ಲೆಯ ಪತ್ರಿಕೆಯೊಂದು ಹಿಂದೂ ಭಾತೃತ್ವ ಸಮ್ಮೇಳನದ ಬೆನ್ನಹಿಂದೆಯೇ ಇದನ್ನು ಕೆದಕಿಹಾಕಿತ್ತು. ಇದರ ಪರಿಣಾಮ ರಾಷ್ಟ್ರದ ಸಂವಿಧಾನವನ್ನೆ ಬದಲಾಯಿಸಿ ಕೇಸರೀಕರಣ ಮಾಡಲು ಹೊರಟ ಸಂಘಪರಿವಾರಕ್ಕೆ ರಾಷ್ಟ್ರಗೀತೆಯ ಬಗ್ಗೆ ಬರಲಾರಂಭಿಸಿತ್ತು ಪ್ರೇಮ. ತಮ್ಮ ಬಾಯಿನಲ್ಲಿ ಒಂದೇ ಒಂದು ಸಲ ಜನಗಣಮನ ಹಾಡದ ವ್ಯಕ್ತಿಗಳು, ಯಾವತ್ತೂ ಒಂದೇ ಮಾತರಂ, ಭಾರತ್ ಮಾತಾಕಿ ಜೈ ಎನ್ನುವ ಚಡ್ಡಿಗಳು, 3 ಮಕ್ಕಳು ರಾಷ್ಟ್ರಗೀತೆ ಹಾಡಿಲ್ಲವೆಂಬ ಕಾರಣಕ್ಕೆ ಇಡೀ ಜಿಲ್ಲೆಯಲ್ಲಿ ಒಂದು ಕಲಹಕ್ಕೆ ಎಡೆ ಮಾಡಿಕೊಡುವಷ್ಟು ಪ್ರಚೋದನೆ ಮಾಡಿದರು. ಬ್ಲಾಸಂ ಶಾಲೆಯಲ್ಲಿ 3 ಜನ ವಿದ್ಯಾರ್ಥಿಗಳು ಯಹೋವನ ಸಾಕ್ಷಿಗಳು ಎಂಬ ವಿಭಾಗಕ್ಕೆ ಸೇರಿದವರು. ಇಡೀ ವಿಶ್ವದಲ್ಲೇ ಇವರ ಪಂಗಡ ಇದೆ, ಅಮೇರಿಕ, ಬ್ರಿಟನ್, ಆಸ್ಟ್ರೇಲಿಯ ಇನ್ನಿತರ ದೇಶದಲ್ಲಿ ಇವರ ಪಂಗಡಗಳಿವೆ. ಇವರು ಎಲ್ಲಿಯೂ ಕೂಡ ಆಯಾ ದೇಶದ ರಾಷ್ಟ್ರಗೀತೆಯನ್ನು ಹಾಡುವುದಿಲ್ಲ, ಅಪಮಾನ ಮಾಡುದಿಲ್ಲ. ಇಂತಹ ಒಂದು ಪ್ರಕರಣ 1985ರಲ್ಲಿ ಕೇರಳದಲ್ಲಿ ನಡೆದು ವಿಧಾಸಭೆಯಲ್ಲಿ ಇದರ ಬಗ್ಗೆ, ಚರ್ಚೆಯಾಗಿ ಕೇರಳ ಹೈಕೋರ್ಟ್‌ನಲ್ಲಿ ಪೋಷಕರ ತಂದೆ ನ್ಯಾಯದ ಮೊರೆ ಹೊಕ್ಕರು. ಅಲ್ಲಿ ನ್ಯಾಯ ಸಿಗದಾಗ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಸುಪ್ರಿಂ ಕೋರ್ಟ್ ವಿದ್ಯಾರ್ಥಿಗಳ ಪರವಾಗಿ ತೀರ್ಪು ನೀಡಿತು. ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು ನೋಡುವ ಗೋಜಿಗೆ ಹೋಗದೆ ರಾಷ್ಟ್ರಗೌರವ ಸಂರಕ್ಷಣ ಸಮಿತಿ, ಭಜರಂಗದಳ, ಆರ್.ಎಸ್.ಎಸ್. ಸಂಘಟನೆಗಳು ಕೋಮು ಗಲಭೆಗೆ ಪ್ರಚೋದನೆ ನೀಡಿತ್ತಾದರೂ, ಕೊಡಗಿನ ಜನ ಇದಕ್ಕೆ ಕಿವಿಗೊಡಲಿಲ್ಲ.

ಉಪವಾಸ ಸತ್ಯಾಗ್ರಹವೆಂಬ ನಾಟಕ

ಬಿಜೆಪಿಯ ಯುವ ಮೋರ್ಚಾ ಸಂಘಟನೆಯ ಒಬ್ಬ ಗೂಂಡಾ ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಿದ್ದು 24 ಗಂಟೆಯೊಳಗೆ ಉಪವಾಸ ಸತ್ಯಾಗ್ರಹ ಹಿಂತೆಗೆದುಕೊಂಡರು.

ಇದೇ ವಿಷಯ ದಲ್ಲಿ ಶಾಲೆಯ ಮುಖ್ಯೋಪಾದ್ಯಾಯ ಎನಿಸಿ ಕೊಂಡ ಚಡ್ಡಿ, ಸಂಘಪರಿವಾರಕ್ಕೆ ಸೇರಿದವರು ಶಾಲೆಯೊಳಗೆ ನುಗ್ಗಿ ವಿದ್ಯಾರ್ಥಿಗಳ ಮೇಲೆ ಈ ಪರಿವಾರ ಹಲ್ಲೆ ನಡೆಸಿತು. ಆಮೇಲೆ ಹಲ್ಲೆ ನಡೆದೇ ಇಲ್ಲ ಎಂದು ಹೇಳಿದ್ದು ನೋಡಿದಾಗ ಶಾಲಾ ಮುಖ್ಯೋಪಾದ್ಯಯರ ಕೈವಾಡ ಬಹಳಷ್ಟಿದೆ.

ಗೋಹತ್ಯೆ ಮತಾಂತರ, ಭಯೋತ್ಪಾದನೆ, ರಾಮಮಂದಿರದ ಬಗ್ಗೆ ಬೊಗಳೆಬಿಡುವ ಸಂಘಪರಿವಾರ, ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚುವ ಪ್ರಯತ್ನ ಜಿಲ್ಲೆಯಲ್ಲಿ ನಡೆಸುತ್ತಿದೆ.



ನೂತನ ಕಾರ್ಯದರ್ಶಿ ಪೀಟರ್ ಲೋಬೋ

ಜಗದೀಶ್ ಕಾರಂತ್ ಎಂಬ ಕೋಮು ಪ್ರಚೋದಕ ಒಂದು ವರ್ಷದ ನಂತರ ವಿರಾಜಪೇಟೆಗೆ ಭೇಟಿ ನೀಡಿದ್ದು ತನ್ನ ನಾಟಕದ ಭಾಷಣವನ್ನು ಮಾಡಿದ್ದು ನೋಡಿದಾಗ ಜನಬೆಂಬಲ ಇಲ್ಲದೆ ನಿರಾಶೆಯಿಂದ ಬರಿಗೈಯಲ್ಲಿ ವಾಪಸ್ಸಾಗಿದ್ದಾನೆ. ಕಳೆದ ವರ್ಷ ಬಂದು ಸಿದ್ದಪುರ ಭಾಗದಲ್ಲಿ ಮಸೀದಿಗೆ ನುಗ್ಗಲು ಪ್ರಚೋದನೆ ಮಾಡಿ ಕೋಮು ಸಂಘರ್ಷವನ್ನು ಮಾಡಿದ ವ್ಯಕ್ತಿ, ಇವನ ನಿಜಸ್ವರೂಪ ಕೊಡಗಿನ ಜನರಿಗೆ ಅರ್ಥವಾಗಿದೆ, ಇಂತಹ ಶಕ್ತಿಗಳಿಗೆ ವಿರಾಜಪೇಟೆಯಲ್ಲಿ ಸಿಕ್ಕಿದ ಜನರ ಬೆಂಬಲವೇ ಸಾಕ್ಷಿ 15, ಸಾವಿರ ಜನ ಸೇರಿಸುತ್ತೇವೆ ಎಂದು ಬೀಗಿದ ಜನ ಕೇವಲ ಸಾವಿರದಿಂದ 1500ಕ್ಕೆ ಸೀಮಿತವಾಗಿ ಹೋಗಿದೆ. ಒಟ್ಟಾರೆ ಜಿಲ್ಲೆಯಲ್ಲಿ ಒಂದು ವ್ಯವಸ್ಥಿತ ಕೋಮುಗಲಭೆಗೆ ಸಂಘಪರಿವಾರ ಪ್ರಯತ್ನ ಮಾಡುತ್ತಿದೆ. ಅಂದರೆ, ಕೇಂದ್ರ ಸರಕಾರದ ವಿರುದ್ಧ ಎದ್ದೇಳುವ ವಿರೋಧಕ್ಕೆ ಇವರ ತಡೆಯಾಗಿದೆ ಅಷ್ಟೆ ಆದರೆ ಕೇಂದ್ರ ಸರಕಾರದ ವಿರುದ್ಧ ಪ್ರಭಲ ಹೋರಾಟ ಸದ್ಯದಲ್ಲೇ ಕೊಡಗಿನಲ್ಲಿ ರಣರಂಗವಾಗಲಿದೆ. ಆಗ ಸಂಘ ಪರಿವಾರ ಮೂಲೆಗುಂಪಾಗಲಿದೆ ಎಂಬುದು ಸತ್ಯ. ಆದರೆ ಕಾಂಗ್ರೆಸ್ ನಿಷ್ಕ್ರಿಯವಾಗಿ ತನ್ನ ಪಾತ್ರವಹಿಸಲು ನಿರಾಕರಿಸುತ್ತಿದೆ.

ಕೊಡಗಿನಲ್ಲಿ ಸಾಮಾಜಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ, ಹರಿಜನ ಗಿರಿಜನ, ಗೌಡರು, ಕೊಡವ ಜನಾಂಗ ಇದೆ. ಹೆಚ್ಚಿನವರು ಸಣ್ಣ ರೈತರು, ಕೇವಲ ಸೀಮಿತಜನ ಮಾತ್ರ ಶ್ರೀಮಂತರು. ಜಿಲ್ಲೆಗೆ ರಾಜಕೀಯ ಹಿನ್ನಲೆ ಇದೆ. ಈ ಹಿನ್ನಲೆಯಲ್ಲಿ ಕಮ್ಯುನಿಷ್ಟರ ಪಾತ್ರವು ಬಹಳ ಮುಖ್ಯವಾಗಿದೆ. ರಾಜಕೀಯವಾಗಿ ಸಣ್ಣ ಶಕ್ತಿಯಾದರೂ ಅಭಿವೃದ್ಧಿ ವಿಷಯದಲ್ಲಿ ನಿರ್ದಿಷ್ಟ ನಿಲುವುಗಳನ್ನು ತೆಗೆದುಕೊಂಡಿದೆ.

ಈ ಸಿಪಿಐ ಮುನ್ನಡೆ

ಈ ಎಲ್ಲಾ ಏಳುಬೀಳುಗಳ ನಡುವೆ ಸಿಪಿಐ(ಎಂ) ಜಿಲ್ಲೆಯಲ್ಲಿ ತನ್ನನ್ನು ಗುರುತಿಸಿಕೊಂಡು ಕೆಲಸ ಮಾಡಿದೆ. ಹಲವು ಸೈದ್ಧಾಂತಿಕ ಪ್ರಶ್ನೆ ಬಂದಾಗ ಪತ್ರಿಕೆಗಳಲ್ಲಿ ಪ್ರಚಾರ ಕಡಿಮೆಯಾದರೂ ತನ್ನ ತೀರ್ಮಾನವನ್ನು ಜನಸಾಮಾನ್ಯರಲ್ಲಿ ಕೊಂಡೊಯ್ಯಲು ಎಲ್ಲಾ ಪ್ರಯತ್ನ ಮಾಡುತ್ತಿದೆ. ಕಳೆದ 3 ವರ್ಷದಲ್ಲಿ ಜಿಲ್ಲೆಯಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆದಿದೆ. ಅದರ ಫಲವೆ ಜಿಲ್ಲಾ ಪಂಚಾಯ್ತಿ ಸ್ಥಾನ ಮತ್ತೊಂದು ಕಡೆ ತಾಲೂಕು ಪಂಚಾಯ್ತಿಯಲ್ಲಿ ಎರಡನೇ ಸ್ಥಾನ ಬರಲು ಸಾಧ್ಯವಾಗಿದೆ. ಪ್ರತ್ಯೆಕತಾವಾದದ ವಿರುದ್ಧ ನಿರಂತರ ಹೋರಾಟ ಕೋಮುವಾದಿಗಳ ವಿರುದ್ಧ ಸಮರದ ಜಿಲ್ಲೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿರುವುದು ನಿಜವಾಗಲು ಪಕ್ಷದ ಕಾರ್ಯಕರ್ತರಲ್ಲಿ ಧೈರ್ಯ ತುಂಬಿದೆ. ಬೆಳವಣಿಗೆಗೆ ಸಹಾಯಕವಾಗಿದೆ. ಆದರೆ ಸನ್ನಿವೇಶದ ಹೋಣೆಗೆ ಹೋಲಿಸಿದರೆ ಪಕ್ಷದ ಶಕ್ತಿ ಇನ್ನೂ ಬೆಳೆಯ ಬೇಕು.

ಜನ ಚಳುವಳಿ ರೂಪಿಸಲು ನಿರ್ಧಾರ

ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಪಕ್ಷದ ಕೊಡಗು ಜಿಲ್ಲಾ ಸಮ್ಮೇಳನವು ವಿರಾಜಪೇಟೆಯಲ್ಲಿ ನವೆಂಬರ್ 28, 29-2001 ರಂದು ಜರುಗಿತು. ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆ, ಅದಕ್ಕೆ ಬೇಕಾದ ಮಾರ್ಗದರ್ಶನ, ಜನ ಸಮಾನ್ಯರ ಬೇಡಿಕೆಗೆ ಹೋರಾಟ, ಜಿಲ್ಲೆಯ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಉತ್ತಮ ಸಲಹೆ, ಚರ್ಚೆ, ವಿಮರ್ಶೆಗಳನ್ನು ಒಳಗೊಂಡ ಪ್ರತಿನಿಧಿಗಳ ಚರ್ಚೆ ಕಾರ್ಯಕರ್ತರಿಗೆ ಇನ್ನಷ್ಟು ಉತ್ತೇಜನ ನೀಡಿತು. ಸಮ್ಮೇಳನವನ್ನು ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಧ್ವಜಾರೋಹಣವನ್ನು ಐ.ಆರ್.ಪ್ರಮೋದ್ ಮಾಡಿದರು. ನಂತರ ಕರಡು ವರದಿಯನ್ನು ಕಾಳಯ್ಯ ಮಂಡಿಸಿದರು.

ಮುಂದಿನ ಸಾಲಿನ ಹೊಸ ಜಿಲ್ಲಾ ಸಂಘಟನ ಸಮಿತಿ ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಪೀಟರಲೋಬೋ ಆಯ್ಕೆ ಮಾಡಲಾಯಿತು.

ಸಮ್ಮೇಳನದ ನಿರ್ಣಯಗಳು

1. ಕಾಫಿ ಬೆಳೆಗಾರರ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಬೆಳೆಗಾರರನ್ನು ಕಾರ್ಮಿಕರನ್ನು ಸಂರಕ್ಷಿಸಲು ಕಾಫಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರಕಾರ ಘೋಷಿಸಬೇಕು.
2. ಕೊಡಗು ಜಿಲ್ಲೆಗೆ ಮೈಸೂರು-ತಲಚೇರಿ ರೈಲು ಸಂಪರ್ಕವನ್ನು ಕಲ್ಪಿಸಬೇಕೆಂದು ನಿರ್ಣಯ ಕೈಗೊಳ್ಳಲಾಯಿತು.
3. ಕೊಡಗು ಜಿಲ್ಲಾ ಪಂಚಾಯ್ತಿಯಲ್ಲಿ ಕಾಂಗ್ರೆಸ್ ಪಕ್ಷ ಗುಂಪುಗಾರಿಕೆಯಲ್ಲಿ ಅಭಿವೃದ್ಧಿ ಸ್ಥಗಿತಕ್ಕೆ [illegible] ಹಾಗೂ ವ್ಯಾಪಕ ಭ್ರಷ್ಟಾಚಾರದ ಸಮಗ್ರ ತನಿಖೆಗೆ ಸಮ್ಮೇಳನವು ಒತ್ತಾಯಿಸಿದೆ.

ಕೊಡಗು ರಾಜ್ಯ ಕೇಳುತ್ತಿದ್ದವರು ಈಗ ಕೊಡವರಿಗೆ ಮಾತ್ರ ಸೀಮಿತ!

ನಂದಿ ನೆರವಂಡನಾಚಪ್ಪ ಕೊಡಗಿಗೆ ಒಬ್ಬ ಬಿನ್ ಲಾಡನ್ ಆಗಲು ಯತ್ನಿಸುತ್ತಾ ಕೊಡಗನ್ನು ತಾಲಿಬಾನ್ ಮಾಡಲು ಹೊರಟಿದ್ದಾರೆ. ಮೊದಲು ಕೊಡಗು ರಾಜ್ಯಕ್ಕೆ ಎಲ್ಲಾ ಸಹಕಾರ ಕೋರಿದ ನಾಚಪ್ಪ ನಂತರ ಜಿಲ್ಲೆ ಮೂಲನಿವಾಸಿಗಳಿಗೆ ಮಾತ್ರ ಸೀಮಿತವಾದ (ಬ್ಯಾರಿ, ಕುಡಿಯ, ಜಮ್ಮ ಮಾಪ್ಪಿಳ್ಳೆ, ಕೊಡವ, ಗೌಡ ಇತ್ಯಾದಿ) ಈಗ ಬಹಿರಂಗವಾಗಿ ಹೇಳುತ್ತಿದ್ದಾನೆ ಕೊಡವ ಜನಾಂಗದ ಹೋರಾಟವೆಂದು. ಇವನ ಈ ವಾದ ಜಿಲ್ಲೆಯಲ್ಲಿ ಮತ್ತಷ್ಟು ಅಶಾಂತಿಗೆ ಕಾರಣವಾಗಬಹುದು. ಕೊಡಗರು ಹಿಂದುಗಳಲ್ಲವೆಂದು ಬಹಿರಂಗ ಸಭೆಯಲ್ಲಿ ಹೇಳಿದಾಗ ಹಿಂದುತ್ವದ ಬಗ್ಗೆ ಗುತ್ತಿಗೆ ಪಡೆದ ಬಿಜೆಪಿಯ ಕೊಡವ ನಾಯಕರು ಚಪ್ಪಾಳೆ ತಟ್ಟಿ ನಿರ್ಣಯವನ್ನು ಅಂಗೀಕರಿಸಿದ್ದಾರೆ. ಇನ್ನೊಂದು ಕಡೆ ಹಿಂದೂ ಸಮಾಜೋತ್ಸವ, ಹಿಂದು ಭಾತೃತ್ವ ಸಮ್ಮೇಳನದಲ್ಲಿ ಕೊಡವರು ಹಿಂದುಗಳು ಎಂದು ಮಠಾಧಿಪತಿಗಳು ಸಾರಿದರೆ-ಅದೇ ಕೊಡವ ಬಿಜೆಪಿ ಯ ಮುಖಂಡರು ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಾರೆ.

ಪ್ರತ್ಯೇಕತವಾದ ಚಳುವಳಿ ಹಾಗೂ ಸಿಪಿಐ(ಎಂ)

ಜಿಲ್ಲೆಯಲ್ಲಿ ಪ್ರತ್ಯೇಕತಾವಾದ ಚಳುವಳಿಯನ್ನು ಸೈದ್ಧಾಂತಿಕವಾಗಿ ವಿಮರ್ಶೆಮಾಡಿದ ಕೀರ್ತಿ. ಸಿಪಿಐ(ಎಂ) ಪಕ್ಷಕ್ಕೆ ಸಲ್ಲುತ್ತದೆ. ಅದರ ಹುಟ್ಟಿನಿಂದ ಇಲ್ಲಿಯತನಕ ಅವರ ಒಂದೊಂದು ಬೇಡಿಕೆಗಳಿಗೆ ಸ್ಪಷ್ಟನಿಲುವು ತಾಳಿ ಬಹಿರಂಗ ಚರ್ಚೆಗೆ ತನ್ನನ್ನು ತೊಡಗಿಸಿಕೊಂಡಿದ್ದ ರಾಜಕೀಯ ಪಕ್ಷವೆಂದರೆ ಸಿಪಿಐ(ಎಂ). ಇತರ ಯಾವುದೇ ರಾಜಕೀಯ ಪಕ್ಷಗಳು ಇದನ್ನು ವಿರೋಧಿಸುವ ಪ್ರಯತ್ನ ಮಾಡಲಿಲ್ಲ, ಈ ಪ್ರತ್ಯೇಕತಾವಾದವು ಜಿಲ್ಲೆಯಲ್ಲಿ ಸಂಘಪರಿವಾರಕ್ಕೆ, ಬಿಜೆಪಿಗೆ ಸಹಾಯವಾಗುವ ರೀತಿಯಲ್ಲಿದೆ. ಏಕೆಂದರೆ ಕೇಂದ್ರ ಸರಕಾರದ ವಿರುದ್ಧ ಸಿಡಿದೇಳಬೇಕಾದ ರೈತ ವಿಭಾಗ ಕೊಡಗು ರಾಜ್ಯವಾಗುವುದರಿಂದಲೇ ಜಿಲ್ಲೆಯ ರೈತರ ಸಮಸ್ಯೆಗೆ ಮಾರ್ಗ ಎಂದು ಹೇಳುವುದು ಮುರ್ಖತನವಾಗುತ್ತದೆ. ಇದರ ಪ್ರಯೋಜನ ಬಿಜೆಪಿ ಕೇಂದ್ರ ನೀತಿಗಳ ಚರ್ಚೆಗೆ ಅಥವ ವಿರೋಧಕ್ಕೆ ಈ ಸಮೂಹವನ್ನು ಬಿಡುಲು ಸ್ವಯಂ ಘೋಷಿತ ನಾಯಕ ನಾಚಪ್ಪ ಬಿಡುತ್ತಿಲ್ಲ.

ಮೊನ್ನೆ ಮೊನ್ನೆಯಾಗಿ ಮಡಿಕೇರಿಯಲ್ಲಿ ತನ್ನ ಸಂಘಟನೆಯ 10ನೇ ವರ್ಷದ ವಾರ್ಷಿಕೋತ್ಸವ ಸಂದರ್ಭದಲ್ಲಿ ಮಾತನಾಡಿದ ಶೈಲಿಯಲ್ಲಿ ಅರ್ಥವಾಗುತ್ತದೆ. ಇದೊಂದು ಜನಾಂಗೀಯ ಸಂಘಟನೆಯಾಗಿ ಬರುತ್ತಿದೆ. ಈ ರ‍್ಯಾಲಿಗೆ ಜಾರ್ಕಂಡ್ ಮುಕ್ತಿ ಮೋರ್ಚಾದ ನಾಯಕ, ಜೆ.ಎಂ.ಎಂ. ಹಗರಣದ ಹಣ ವ್ಯವಹಾರದ ಪಾಲುದಾರ ಶಿಬುಸೂರೆನ್ ಬಂದಿದ್ದು ಹಲವು ಸಂಶಯಗಳಿಗೆ ಎಡೆಮಾಡಿದೆ.

ವಿಸ್ತರಣೆಗೆ ಒತ್ತು ನೀಡಿದ ಮಂಡ್ಯ ಜಿಲ್ಲಾ ಸಮ್ಮೇಳನ ಕರೆ

ಪಕ್ಷವನ್ನು, ಪಕ್ಷದ ಸಾಮೂಹಿಕ ಸಂಘಟನೆಗಳನ್ನು, ಪಕ್ಷದ ಸಾಮಾಜಿಕ ತಳಹದಿಯನ್ನು ಅಂದರೆ ಮಹಿಳೆಯರ, ಕೂಲಿಕಾರರ ರೈತರ ನಡುವೆ ವಿಸ್ತರಿಸಿ, ಇವು ಮಂಡ್ಯ ಜಿಲ್ಲಾ ಪಕ್ಷದ 3ನೇ ಸಮ್ಮೇಳನದಲ್ಲಿ ಮತ್ತೆ ಮತ್ತೆ ಕೇಳಿಬಂದ ಅಂತರಾಳದ ಅಭಿಪ್ರಾಯಗಳು.

ಸಮ್ಮೇಳನದಲ್ಲಿ ಭಾಗವಹಿಸಿದ್ದವರು ಚರ್ಚೆಯಲ್ಲಿ ಪಾಲ್ಗೊಂಡ ಪ್ರತಿನಿಧಿಗಳು, ರಾಜ್ಯ ಸಮಿತಿಯಿಂದ ಪಾಲ್ಗೊಂಡ ಮುಖಂಡರು ಎಲ್ಲರ ಒಕ್ಕೊರಲಿನ ಧ್ವನಿಯು ಪಕ್ಷವನ್ನು ವಿಸ್ತರಿಸಿ ಎಂಬುದೇ ಆಗಿತ್ತು. ನವೆಂಬರ್ 26-27 ರಂದು ಮಳವಳ್ಳಿ ಪಟ್ಟಣದಲ್ಲಿ ಪಕ್ಷದ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಜರುಗಿತು.

ಎಡ ಚಳುವಳಿಗೆ ಅಷ್ಟೇನೂ ಇತಿಹಾಸವಿರದ ಮಂಡ್ಯ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನವೆಂಬುದು ಜನತೆಗೆ ಆಶ್ಚರ್ಯದ ವಿಷಯವಾಗಿತ್ತು. ಕೊಳೆತು ನಾರುವ ಭೂಮಾಲೀಕ ಬಂಡವಾಳಶಾಹಿ ಪಕ್ಷಗಳ ನಡುವೆ ಬದುಕುತ್ತಿರುವ ಜನತೆಗೆ ಆ ಪಕ್ಷಗಳು ಹೆಂಡಕ್ಕೆ, ಹಣಕ್ಕೆ, ಬಾಡೂಟಕ್ಕೆ ಸೇರಿಸುವ ಜಾತ್ರೆಗಳೇ ಕಾರ್ಯಕ್ರಮಗಳು. ಯಾರೋ ಮುಖಂಡನ ಆದೇಶಗಳೇ ನಿರ್ಣಯಗಳು. ದಿನವೂ ಇದನ್ನೇ ಕಂಡವರಿಗೆ ನಾವು ಸಿಪಿಐ(ಎಂ) ಪಕ್ಷದವರು, ಸಮ್ಮೇಳನ ನಡೆಸುತ್ತೇವೆ, ನಮ್ಮ ದೇಶದ, ರಾಜ್ಯದ ಜಿಲ್ಲೆಯ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸುತ್ತೇವೆ, ಹೋರಾಟ ರೂಪಿಸುತ್ತೇವೆ ಎಂದಾಗ ಆಶ್ಚರ್ಯ ಗೊಂಡರು. ಬಂದವರಿಗೆ ಊಟ ನೀಡಲು, ಇತರೆ ವೆಚ್ಚಗಳಿಗೆ ಹಣ ನೀಡಲು ಸಹಾಯ ಕೇಳಿದರೆ ನಿರಾಕರಿಸಿ ಬಿಟ್ಟವರಾರೂ ಇಲ್ಲ. ಪಕ್ಷದ ಶಾಖೆಗಳಿಂದ ಮನೆ, ಮನೆಯ ಸಂಗ್ರಹ, ಕರಪತ್ರಗಳನ್ನು ಹಂಚಿ, ಸಮ್ಮೇಳನ ಸಂದೇಶವನ್ನು ಮನೆ, ಮನೆಗೆ ಕೊಂಡೊಯ್ದು ಜನರಿಗೆ ಆಹ್ವಾನ, ಮಳವಳ್ಳಿ ಪಟ್ಟಣಗಳಲ್ಲಿ ಅಂಗಡಿ ಅಂಗಡಿಗಳಲ್ಲಿ, ಬೀದಿ ಸಂಗ್ರಹದ ಮೂಲಕ ಸಂಗ್ರಹಿಸಿದ ಹಣವೇ ಮೂರುವರೆ ಸಾವಿರಕ್ಕೂ ಹೆಚ್ಚು. ಯಾರೋ ಕೊಡುವ ನೋಟಿನ ಗಂಟುಗಳಿಗೆ ಅವಲಂಬಿಸದೇ ಎಲ್ಲರೂ ನೀಡಿದ ಪುಡಿಗಾಸು, ಹಾರೈಕೆಗಳಿಂದ ಮಂಡ್ಯ ಜಿಲ್ಲಾ ಸಮ್ಮೇಳನ ಎರಡು ದಿನಗಳು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಬಿಜೆಪಿ ಬೆಳೆಯದು - ಕಾಂಗ್ರೆಸ್ ಉಳಿಯದು

ಮಂಡ್ಯ ಜಿಲ್ಲೆಯ ರಾಜಕೀಯ ಪರಿಸ್ಥಿತಿಯ ಬಗ್ಗೆ ಹೇಳುತ್ತಾ ವರದಿಯು, ಮಂಡ್ಯಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳಿಗೆ ಭದ್ರ ನೆಲೆಯಿಲ್ಲ, ಬೆಳೆಯಲು ಅವಕಾಶಗಳೂ ತೀರಾ ಕಡಿಮೆ, ಕಾಂಗ್ರೆಸ್ ಈಗಲೂ ಜಿಲ್ಲೆಯ ಬಲಿಷ್ಟಶಕ್ತಿಯಾದರೂ ಅದು ಹೆಚ್ಚು ಕಾಲ ಬಾಳದು. ಹಾಗೂ ನಮ್ಮ ಪಕ್ಷವನ್ನು ತುರ್ತಾಗಿ ವಿಸ್ತರಿಸಬೇಕಾದ, ಇತರ ಜಾತ್ಯಾತೀತ ಶಕ್ತಿಗಳೊಡನೆ, ಜಂಟಿ ಹೋರಾಟಗಳಿಗೆ, ಕಾರ್ಯಾಚರಣೆಗೆ ಇಳಿಯಬೇಕಾದ ಅಗತ್ಯದ ಮಹತ್ವವನ್ನು ವರದಿ ಒಳಗೊಂಡಿತ್ತು.

26 ರಂದು ಬೆಳಿಗ್ಗೆ ಬಹಿರಂಗ ಸಭೆಯನ್ನು ಆನಂತರ ಅಧಿವೇಶನದ ಉದ್ಘಾಟನೆಯನ್ನು ನಡೆಸಲಾಯಿತು. ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ರಾಜ್ಯದ ಕಾಂಗ್ರೆಸ್ ಸರ್ಕಾರ ಮತ್ತು ವಾಜಪೇಯಿ ಸರ್ಕಾರ ರಾಜ್ಯ ಮತ್ತು ದೇಶವನ್ನು ಸಾಲದ ಬಲೆಗೆ ಸಿಕ್ಕಿಸುತ್ತಿವೆ, ಐಎಂಎಫ್ ವಿಶ್ವ ಬ್ಯಾಂಕ್‌ಗಳ ಆಣತಿಯ ಮೇರೆಗೆ ಕೆಲಸ ಮಾಡುತ್ತಾ ಜನತೆಯನ್ನು ಸಂಕಷ್ಟಕ್ಕೆ ಗುರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು ಬಯ್ಯಾರೆಡ್ಡಿ. ಪುಟ್ಟಮಾದು ಮಾತನಾಡಿದರು. ಜಿ.ರಾಮಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದ ಮಹತ್ವ, ರಾಜ್ಯದ ರಾಷ್ಟ್ರದ ಪರಿಸ್ಥಿತಿ, ರೈತರು, ದುಡಿಯುವ ಜನತೆ ಎದುರಿಸುತ್ತಿರುವ ಕಷ್ಟಗಳನ್ನು ವಿವರಿಸುತ್ತಾ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ. ಬಯ್ಯಾರೆಡ್ಡಿ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿದರು.



ವರದಿಯನ್ನು ಶ್ರೀಮಂತಗೊಳಿಸಿದ, ಎಲ್ಲರಿಗೂ ಚುರುಕು ಮುಟ್ಟಿಸಿದ ಚರ್ಚೆ

ಮಂಡ್ಯ ಜಿಲ್ಲೆಯ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುವ, ಜಿಲ್ಲೆಯ ಎಲ್ಲಾ ವಲಯಗಳ ಮೇಲೆ ಕೇಂದ್ರ, ರಾಜ್ಯ ಸರ್ಕಾರದ ನೀತಿಗಳು ಉಂಟು ಮಾಡಿರುವ ಪರಿಣಾಮಗಳನ್ನು ವಿವರಿಸುವ ವರದಿಯನ್ನು ಪ್ರತಿನಿಧಿಗಳ ಮುಂದೆ ಚರ್ಚೆಗೆ ಇಡಲಾಗಿತ್ತು.

ಈ ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಎಲ್ಲಾ 9 ಸಂಗಾತಿಗಳು ಉತ್ತಮವಾಗಿ ಪಾಲ್ಗೊಂಡರು. ತಮ್ಮನ್ನು ಒಳಗೊಂಡಂತೆ ಎಲ್ಲರನ್ನೂ ವಿಮರ್ಶೆಗೆ ಒಳಪಡಿಸಿದರು. ಆ ಮೂಲಕ ಪಕ್ಷವನ್ನು, ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸೋಣ, ಅದಕ್ಕೆ ನಾವೆಲ್ಲೂ ಬದ್ಧರಾಗಿದ್ದೇವೆ ಎಂಬುದು ಎಲ್ಲ ಸಂಗಾತಿಗಳ ದೃಢವಾದ ಧ್ವನಿಯಾಗಿತ್ತು.

ಎರಡು ದಿನಗಳ ಕಾಲ ಅರ್ಥಪೂರ್ಣವಾಗಿ, ಅಚ್ಚುಕಟ್ಟಾಗಿ ನಡೆದ ಈ ಸಮ್ಮೇಳನ ಕೊನೆಯಲ್ಲಿ 11 ಜನರ ನೂತ ಜಿಲ್ಲಾ ಸಂಘಟನಾ ಸಮಿತಿಯನ್ನು ಆರಿಸಿತು. ಕಾರ್ಯದರ್ಶಿಯಾಗಿ ಎಂ.ಪುಟ್ಟಮಾದಯ್ಯ ಪುನರಾಯ್ಕೆ ಗೊಂಡರು. ಜಿ.ಎನ್. ನಾಗರಾಜ್, ಬಯ್ಯಾರೆಡ್ಡಿ ಸಮಾರೋಪದ ಮಾತುಗಳನ್ನಾಡಿದರು.

ಗೆಲುವು ನಮ್ಮದು, ಗೆಲುವು ನಮ್ಮದು ಹಾಡಿಗೆ ಎಲ್ಲರ ಧ್ವನಿ, ವಿಸ್ತರಿಸೋಣ, ಪಕ್ಷವನ್ನು ವಿಸ್ತರಿಸೋಣ ಕರೆಗೆ ಎಲ್ಲರೂ ಬದ್ಧ ಎಂಬ ಘೋಷಣೆ ಯೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿದು.

ವರದಿ : **ಕೃಷ್ಣೇಗೌಡ ಟಿ.ಎಲ್.**

ಪರ್ಯಾಯದ ನಿರೀಕ್ಷೆಯಲ್ಲಿ...

ಪುಟ 8 ರಿಂದ

ಕಾಂಗ್ರೆಸ್ ಶಾಸಕರು ಆರಿಸಿ ಬಂದಿದ್ದಾರೆ. ಕರ್ನಾಟಕ ರಾಜ್ಯ ರೈತ ಸಂಘ ಇದ್ದ ಒಂದು ಸ್ಥಾನವನ್ನು ಕಳೆದುಕೊಂಡು 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಮಂಡ್ಯ ಮತ್ತು ಕನಕಪುರ ಎರಡು ಲೋಕಸಭಾ ಕ್ಷೇತ್ರಗಳನ್ನು ಕಾಂಗ್ರೆಸ್ ಸದಸ್ಯರೇ ಪ್ರತಿನಿಧಿಸುತ್ತಿದ್ದಾರೆ.

ಕಳೆದ ಸಮ್ಮೇಳನದ ಸಂದರ್ಭದಲ್ಲಿ ಪ್ರಬಲ ಶಕ್ತಿಯಾಗಿದ್ದ ಜನತಾದಳದ ಒಡಕಿನ ಲಾಭ ಪಡೆದ ಕಾಂಗ್ರೆಸ್ ವಿಧಾನಸಭಾ ಚುನಾವಣೆ ಮತ್ತು ನಂತರ ನಡೆದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿತು. ಜನತಾದಳ ಸರ್ಕಾರದ ನೀತಿಗಳ ವಿರುದ್ಧವಾಗಲಿ, ಜನರ ಜ್ವಲಂತ ಸಮಸ್ಯೆಗಳನ್ನಾಗಲಿ ಎತ್ತಿ ಹೋರಾಟ ಮಾಡದ ಕಾಂಗ್ರೆಸಿಗೆ ಜನತಾ ದಳ ಸರ್ಕಾರದ ವಿರುದ್ಧ ಜನತೆಗಿದ್ದ ಅತೃಪ್ತಿಯೇ ಗೆಲುವಿಗೆ ಸಾಕಾಯಿತು. ಇದನ್ನು ಪರಿಣಾಮಕಾರಿಯಾಗಿ ಬಳಸಿ ತಮ್ಮ ಹಣ, ಹೆಂಡದ ಹೊಳೆ ಹರಿಸಿ ಕಾಂಗ್ರೆಸ್ ಜಯಭೇರಿ ಬಾರಿಸಿತು.

ಕಾಂಗ್ರೆಸ್ ತನ್ನ ಶಕ್ತಿಯನ್ನೆಲ್ಲ ಕ್ರೋಢೀಕರಿಸಿಕೊಂಡಂತೆ ಕಂಡರೂ ಅದರೊಳಗಿನ ಭಿನ್ನಮತ ಶಮನವೇನೂ ಆಗಿಲ್ಲ. ಎಷ್ಟೇ ಭಿನ್ನಮತವಿದ್ದರೂ ಕಾಂಗ್ರೆಸ್ ಈಗಲೂ ಜಿಲ್ಲೆಯ ಪ್ರಧಾನ ರಾಜಕೀಯ ಶಕ್ತಿಯೇ.

ಜಿಲ್ಲೆಯ ಮಟ್ಟದಲ್ಲಿ ಜನತಾದಳದ ಎರಡು ಬಣಗಳ ನಡುವೆ ಒಂದು ಹಂತದ ವರೆಗೆ ಹೊಂದಾಣಿಕೆಯಿದೆ. ಈ ಹೊಂದಾಣಿಕೆಯಿಂದಲೇ ಜಿಲ್ಲಾ ಪಂಚಾಯಿತಿಯಲ್ಲಿ ಎರಡು ಬಣಗಳು ಒಟ್ಟಾಗಿ ವಿರೋದ ಪಕ್ಷವಾಗಿ ಕೆಲಸ ಮಾಡುತ್ತಿವೆ. ಜನತಾದಳ ಈಗಲೂ ಒಂದಾದರೆ ಕಾಂಗ್ರೆಸಿಗೆ ನೀತಿಗಳಲ್ಲದಿದ್ದರೂ ಶಕ್ತಿಯಲ್ಲಾದರೂ ಸಮರ್ಥ ಪರ್ಯಾಯವಾಗಬಹುದು. ಆದರೆ ರಾಜ್ಯಮಟ್ಟದ ನಾಯಕರ ವೈಯಕ್ತಿಕ ಹಿತಾಶಕ್ತಿಗಳಿಂದಾಗಿ ಜನತಾದಳದ ಹೊಂದಾಣಿಕೆ ಮರೀಚಿಕೆಯಾಗಿಯೇ ಉಳಿದಿದೆ. ಕಾಂಗ್ರೆಸ್ ಮತ್ತು ಜನತಾದಳಗಳ ಹಿಂದಿರುವ ಜನತೆ ಈಗಲೂ ಹಳ್ಳಿಗಳಲ್ಲಿರುವ ತೆಂಡೆಗಳ ಜಾತಿ ಮುಖಂಡರೇ ಆಗಿದ್ದಾರೆ. ಶ್ರೀಮಂತ ರೈತರು ಈ ಎರಡು ಪಕ್ಷಗಳಲ್ಲಿ ಹಂಚಿಹೋಗಿದ್ದಾರೆ. ರೈತ ಸಂಘಕ್ಕೆ ಒಂದು ಹಂತದಲ್ಲಿ ಇದನ್ನು ಭೇದಿಸಲು ಸಾಧ್ಯವಾಗಿದ್ದರೂ ಅದಕ್ಕೆ ಆದ ಹಿನ್ನಡೆ ಇವುಗಳ ಶಕ್ತಿಗೆ ಇನ್ನಷ್ಟು ಕಾಣಿಗೆ ನೀಡಿದೆ.

ಬಿಜೆಪಿ ಇನ್ನೂ ಜಿಲ್ಲೆಯಲ್ಲಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಒಂದು ಜಿಲ್ಲಾ ಪಂಚಾಯತ್ ಸ್ಥಾನವನ್ನು (ಕೆ.ಆರ್. ಪೇಟೆಯಿಂದ) ಹೊಂದಿರುವ ಬಿಜೆಪಿ ಒಂದು ಶಕ್ತಿಯಾಗಿ ಬೆಳೆಯುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಆದರೂ ಅದಕ್ಕೆ ಸಂಘ ಪರಿವಾರದ ಕೆಲವು ಕಾರ್ಯಕರ್ತರಿದ್ದಾರೆ. ಇದನ್ನು ಗಂಭೀರವಾಗಿಯೇ ಪರಿಗಣಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಯಾವುದೇ ನೆಲೆಯಿಲ್ಲ.

ರೈತ ಸಂಘ : ರೈತರ ಸಂಘವು ಜಿಲ್ಲೆಯಲ್ಲೂ ಎರಡು ಬಣವಾಗಿದ್ದರೂ ಬಹುಪಾಲು ಪುಟ್ಟಣ್ಣಯ್ಯನವರ ಜೊತೆಯಲ್ಲೇ ಉಳಿದಿದೆ. ಹಿಂದಿದ್ದ ತನ್ನ ಪ್ರಭಾವದಲ್ಲಿ ಗಣನೀಯ ಭಾಗವನ್ನು ಕಳೆದುಕೊಂಡಿದೆ. ಅದರ ಅನೇಕ ಕಾರ್ಯಕರ್ತರು, ಮುಖಂಡರು ಬೇರೆ ಪಕ್ಷಗಳಲ್ಲಿ ನೆಲೆ ಕಂಡುಕೊಂಡಿದ್ದಾರೆ. ಎರಡು ಜಿಲ್ಲಾ ಪಂಚಾಯಿತಿ ಸ್ಥಾನಗಳನ್ನು ಹೊಂದಿದ್ದರೂ ಹಿಂದಿನಂತೆ ಹೋರಾಟಗಳನ್ನು ಸಂಘಟಿಸುವಲ್ಲಿ ಸಫಲವಾಗುತ್ತಿಲ್ಲ.

ರೈತ ಸಂಘ ರಾಜಕೀಯವಾಗಿ ದುರ್ಬಲವಾದರೂ ಇನ್ನೂ ತಳಮಟ್ಟದಲ್ಲಿ ಪ್ರಾಮಾಣಿಕ ಕಾರ್ಯಕರ್ತರಿದ್ದಾರೆ. ಆದ್ದರಿಂದ ಈಗಲೂ ಅದಕ್ಕೊಂದು ಶಕ್ತಿಯಿದೆ. ರೈತ ಸಂಘ ಇತರೆ ಪ್ರಗತಿಪರ ಶಕ್ತಿಗಳೊಡಗೂಡಿ ಜನರ ಪ್ರಶ್ನೆಗಳನ್ನು ಕೈಗೆತ್ತಿಕೊಂಡರೆ ನೆಲೆಕಂಡುಕೊಳ್ಳುವ ಅವಕಾಶವಿದೆ.

ಶಿವಸೇನೆ : ಮಂಡ್ಯ ನಗರದಲ್ಲಿ ಅತ್ಯಂತ ಅಪಾಯಕಾರಿಯಾಗಿ ಬೆಳೆಯುತ್ತಿರುವ ಕೋಮುವಾದಿ ಸಂಘಟನೆ ಶಿವಸೇನೆ. ಅದರ ಪ್ರಚಾರದ ಶೈಲಿ, ಕಾರ್ಯಕರ್ತರ ಉನ್ಮಾದ ಜನತೆಯ ಗಮನ ಸೆಳೆಯುತ್ತಿದೆ. ಜನರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುತ್ತಾ ವ್ಯಾಪಕ ಪ್ರಚಾರ ಪಡೆಯುತ್ತಿದೆ. ಇದರ ಅಪಾಯವನ್ನು ಈಗಲೇ ಗುರುತಿಸಿ ಜನತೆ ಇದರ ವಿಷ ಚಕ್ರಕ್ಕೆ ಸಿಲುಕದಂತೆ ತಿಳುವಳಿಕೆ ಮೂಡಿಸಿ ನಮ್ಮ ಹೋರಾಟಗಳತ್ತ ಸೆಳೆಯಬೇಕಾಗಿದೆ. ಶಿವಸೇನೆ ಪ್ರಮುಖವಾಗಿ ಮಂಡ್ಯದ ವರ್ತಕರಿಂದ ಹಣ ವಸೂಲಿ ಮಾಡುತ್ತಿದೆ. ಬ್ಲಾಕ್ ಮೇಲ್ ತಂತ್ರವನ್ನು ಮಾಡುತ್ತಿದೆ.

ಎಡ ಪಕ್ಷಗಳು ಮತ್ತು ಸಿಪಿಎಂ

ಮಂಡ್ಯ ಜಿಲ್ಲೆಯ ಮಟ್ಟಿಗೆ ಎಡ ಪಕ್ಷಗಳಿಗೆ ಯಾವುದೇ ಇತಿಹಾಸವಿಲ್ಲ. ನಮ್ಮ ಪಕ್ಷವೇ ಮಂಡ್ಯ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಏಕ ಮಾತ್ರ ಎಡ ಪಕ್ಷ. ಅದು ಸಂಘಟನೆಯ ಲೆಕ್ಕದಲ್ಲಿ ಮಳವಳ್ಳಿ ತಾಲ್ಲೂಕಿನ 3 ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಕೆಲಸ ಮಾಡಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಜವಾಬ್ದಾರಿಯನ್ನು ಅರಿತು ಕ್ರಿಯಾಶೀಲವಾಗಿ ತೊಡಗಿಸಿಕೊಂಡರೆ, ಜನರ ಸಮಸ್ಯೆಗಳ ಆಧಾರದಲ್ಲಿ ಪಕ್ಷವನ್ನು ಇತರೆ ಸಾಮೂಹಿಕ ಸಂಘಟನೆಗಳನ್ನು ಕೆಲಸಕ್ಕಿಳಿಸಿದರೆ ಪಕ್ಷವನ್ನು ವಿಸ್ತರಿಸಲು ವಿಪುಲವಾದ ಅವಕಾಶಗಳಿವೆ.

ಕೃಷಿಯೇ ಮುಖ್ಯ ವಲಯವಾದ ನಮ್ಮ ಜಿಲ್ಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳ ಪರಿಣಾಮವಾಗಿ ಕೃಷಿ ವಲಯ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರತಿ ಎರಡು ವರ್ಷಗಳಿಗೊಮ್ಮೆ ಕಬ್ಬಿನ ಬೆಳೆಗಾರರು ಬಿಕ್ಕಟ್ಟಿಗೆ ಸಿಲುಕುತ್ತಿದ್ದಾರೆ. ಕಾರ್ಖಾನೆಗಳು ಕೋಟ್ಯಾಂತರ ರೂ ಹಣವನ್ನು ರೈತರಿಗೆ ಪಾವತಿಸಬೇಕಾಗಿದೆ. ಇದರ ವಿರುದ್ಧ ನಿರಂತರವಾಗಿ ಧ್ವನಿಯೆತ್ತುತ್ತಿದ್ದರೆ ರೈತ ಸಂಘ ಬಲಹೀನಗೊಂಡಿರುವುದರಿಂದ ಈ ವಿಭಾಗದ ಸಮಸ್ಯೆಯನ್ನು ಗಂಬೀರವಾಗಿ ಅಧ್ಯಯನ ನಡೆಸಿ ಹೋರಾಟ ರೂಪಿಸಬೇಕಾಗಿದೆ. ಇದು ಪಕ್ಷದ ವಿಸ್ತರಣೆಗೆ ಹೆಚ್ಚು ಅವಕಾಶ ಕಲ್ಪಿಸಲಿದೆ. ಇದುವರೆಗೆ ಡಿ.ವೈ.ಎಫ್.ಐ ಎಸ್.ಎಫ್.ಐ ಕೃಷಿ ಕೂಲಿಕಾರರ ಸಂಘ ರೈತ ಸಂಘದ ಹೆಸರಿನಲ್ಲಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಮಾತ್ರ ಸ್ವಲ್ಪಮಟ್ಟಿನ ಮಧ್ಯ ಪ್ರವೇಶ ಸಾಧ್ಯವಾಗಿದೆ.

ಎನ್ಕೆಗೆ ಅಂತಿಮ ನಮನ....

ಪುಟ 5 ರಿಂದ

ಇಂದಿಗೂ ಕಣ್ಮುಂದ ಬರುತ್ತಿವೆ. ಅವರ ಆರೋಗ್ಯದ ಬಗ್ಗೆ ಎಂದೂ ಕಾಳಜಿ ವಹಿಸಲ್ಲಿಲ್ಲ. ಅವರೇಳಿದ ಕಾರ್ಯಕ್ರಮ, ಉದ್ದೇಶಗಳಿಗೆ ದುಡಿಯುವುದೇ ಅವರಿಗೆ ಕೋರುವ ಶಾಂತಿ.

ನ್ಯಾಯವಾದಿ ಕೆ.ಎಸ್.ಪಾಟೀಲ್: ಮಾತನಾಡುವುದೇ ಕಷ್ಟವಾಗುತ್ತಿದೆ. 1944 ರಿಂದಲೂ ನಾವು ಸ್ನೇಹಿತರು. ನಮ್ಮನ್ನೆಲ್ಲಾ ಪಕ್ಷಕ್ಕೆ ತಂದವರು. ಕೆಂಬಾವುಟಕ್ಕೆ ನಿಷ್ಠರನ್ನಾಗಿಸಿದರು, ನಿಷ್ಠರಾಗಿದ್ದರು. ಎನ್.ಕೆ.ಯವರ ಅಗಲಿಕೆ ಎಲ್ಲರಿಗಾದ ನಷ್ಟ. ನಾವೆಲ್ಲರೂ ಅವರ ಹಾದಿಯಲ್ಲಿ ಸಾಗೋಣ.

ವಿ.ಎಮ್.ಕಾಳೆ (ಬ್ಯಾಂಕ ನೌಕರರ ಮುಖಂಡ) : ಎನ್‌ಕೆ ಸತ್ತಿಲ್ಲ. ಅವರು ಅಮರರಾಗಿದ್ದಾರೆ. ನಮ್ಮೆಲ್ಲರ ಹಿರಿಯ ಸಂಗಾತಿ ಬ್ಯಾಂಕ್, ಎಲ್‌ಐಸಿ, ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅಮರರಾಗಿರುವ ಎನ್.ಕೆ.ಯವರಿಗೆ ನಾವು ಮತ್ತಷ್ಟು ಕೆಲಸ ಮಾಡುವುದರೊಡನೆ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.

ಜಿ.ಎನ್.ನಾಗರಾಜ್: ಮಾತೇ ಹೊರಡುತ್ತಿಲ್ಲ. 2 ದಶಕಗಳು ಅವರ ಜೊತೆಯಲ್ಲಿ ಒಂದೇ ಉದ್ದೇಶಕ್ಕೆ ಕೆಲಸ ಮಾಡಿದೆವು. ಅವರ ಅನುಭವಗಳನ್ನು ನಮಗಿನ್ನೂ ವರ್ಗಾಯಿಸಬೇಕಿತ್ತು. ದಬ್ಬಾಳಿಕೆಯನ್ನು ಎಂದೂ ತಡೆದುಕೊಳ್ಳಬಾರದ ಪಾಠವನ್ನು ನಮಗೆ ಬೋಧಿಸಿದ್ದಾರೆ. ಸ್ವಾತಂತ್ರ್ಯ ನಂತರದ ಹೊಸ ದಾಳಿಗಳನ್ನು ನಾವು ಎದುರಿಸಬೇಕು, ಅದು ಎನ್.ಕೆಯವರ ನುಡಿಯಾಗಿತ್ತು. ಸತ್ಯಕ್ಕೆ, ಸಿದ್ಧಾಂತಕ್ಕೆ ಸದಾ ನಿಷ್ಠರಾಗಿದ್ದರು. ಪಕ್ಷ ಇಬ್ಭಾಗವಾದಾಗ ಸಿಪಿಐ(ಎಂ) ನಲ್ಲಿ ನಿಂತರು. ಪಕ್ಷದ ಪತ್ರಿಕೆಗೆ ಆಸ್ಪತ್ರೆಯಿಂದಲೇ ಶ್ರಮಿಸಿದರು. ನಾವಿದನ್ನು ಮುಂದೆ ಕೊಂಡೊಯ್ಯ ಬೇಕು. ಐಕ್ಯರಂಗದ ಎಸ್.ವೈ.ಗುರುಶಾಂತ್, ಸಿಐಟಿಯುವಿನ ವರಲಕ್ಷ್ಮಿಯನ್ನು ಒಳಗೊಂಡು ಇನ್ನೂ ಅನೇಕ ಸಂಗಾತಿಗಳು ಶ್ರದ್ಧಾಂಜಲಿ ಸಲ್ಲಿಸಿದರು.

ಸಿಪಿಐ(ಎಂ) ಪಕ್ಷದ ಉ.ಕ.ಜಿಲ್ಲಾ 5ನೇ ಸಮ್ಮೇಳನ ನಡೆಯುತ್ತಿದೆ. ಕಾರವಾರ ಕೆಂಬಾವುಟದ ಅತಿ ಮಹತ್ವದ ತಾಣ. ಪಕ್ಷಕ್ಕಾಗಿ ಮಾಡಿದ ತ್ಯಾಗದ ಕಲೆ ಇರುವ ಕಾರವಾರದಲ್ಲಿ ನಾಲ್ಕಾರು ದಶಕಗಳ ಹಿಂದೆ ನಡೆದ ಕೆಲವು ಮುಖ್ಯ ಘಟನೆಗಳನ್ನು ಸಮ್ಮೇಳನದ ಈ ಸಂದರ್ಭದಲ್ಲಿ ನೆನಪಿಸಲಾಗಿದೆ.

ಇತಿಹಾಸದ ಪುಟಗಳಿಂದ

ಉತ್ತರ ಕನ್ನಡದಲ್ಲಿ ಕೆಂಬಾವುಟದ ಹೆಜ್ಜೆ ಗುರುತುಗಳು....

ವಿಠ್ಠಲ ಭಂಡಾರಿ

ಉತ್ತರ ಕನ್ನಡದಲ್ಲಿ ಕೆಂಬಾವುಟವನ್ನು ಮೊಟ್ಟಮೊದಲ ಬಾರಿಗೆ ಹಾರಿಸಿದ್ದು ಈ ಜಿಲ್ಲೆಯ ರೈತರು ತಾನು ಊಳುತ್ತಿದ್ದ ಭೂಮಿ ಪಡೆಯುವ ಹೋರಾಟದಲ್ಲಿ ಧೀರೋದಾತ್ತವಾಗಿ ಹೋರಾಡಿದ ರೈತರು ಈ ಜಿಲ್ಲೆಯಲ್ಲಿ ಹೋರಾಟದ ಪರಂಪರೆಯನ್ನು ಬೆಳೆಸಿದವರು. ಸ್ವಾತಂತ್ರ್ಯ ಪೂರ್ವದಿಂದ ಇಲ್ಲಿಯವರೆಗೆ ಅನ್ಯಾಯದ ವಿರುದ್ಧ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಲು ರೈತ ಆಯ್ಕೆ ಮಾಡಿಕೊಂಡಿದ್ದು ಕೆಂಬಾವುಟದ ಕಿಸಾನ್ ಸಭಾವನ್ನು. ಅದರಲ್ಲೂ ಕಾರವಾರ ತಾಲೂಕಿನ ಹಳ್ಳಿ ಹಳ್ಳಿಗಳು ಎಚ್ಚೆತ್ತ ರೈತನ ದನಿಗೆ ಧನಿ ಕೂಡಿಸಿದವು. ಅದು ಘೋಷಣೆ ಯಾಯಿತು, ಆಳುವವರಿಗೆ ಘರ್ಜನೆಯಾಗಿ ಕೇಳಿತು.

1937 ರಲ್ಲಿ ಕಾರವಾರ ತಾಲೂಕು ರೈತ ಕೂಟವನ್ನು ಸ್ಥಾಪಿಸಲಾಯಿತು. ಅದರ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದವರು ಸೈಯದ್ ಹೈದರ್ ಇಸೂಬ ಸಾಬ್. ಕಿನ್ನರ, ಬಳಗಾ, ಹಳಗಾಗಳಲ್ಲಿ ರೈತ ಕೂಟ ಸ್ಥಾಪನೆ ಆಯಿತು. ಆಗ ರಚಿಸಲಾದ ತಾತ್ಪಾರ್ತಿಕ ಸಮಿತಿಯಲ್ಲಿ ಹೈದರ್ ಇಸೂಬ ಸಾಬ್

ಕಿಸಾನ ಸಭಾ, ಕಾರವಾರ

ನನ್ನ ಉತ್ತರ

ಸನ್ ೧೯೩೯ ನೇ ಇಸವಿಯ ಮುಂಬಯಿಯ ಟೆನೆನ್ಸಿ ಆಕ್ಟ ನಂಬರು ೨೯ ನೆಯ ಸೆಕ್ಷನ್ ೧, ಕ್ಲಾಸ್ ನಂ. (೮) ನೆಯ ಪ್ರಕಾರ ನಾನು ಹೇಳುವುದೇನಂದರೆ ನಾನು ಸಾಗುವಳಿ ಮಾಡುವ ಭೂಮಿಯ ಉತ್ಪತ್ತಿಯಿಂದ ಸಾಗುವಳಿದಾರನ ಕೂಲಿಹಿಡಿದು ಸಾಗುವಳಿ ಖರ್ಚನ್ನು ಒಟ್ಟು ಉತ್ಪನ್ನದೊಳಗಿಂದ ವಜಾ ಮಾಡಿದ ಬಳಿಕ ಉಳಿದದ್ದರಿಂದ ಗೇಣಿ ಕೊಡಲು ತಯಾರಿದ್ದೇನೆ. ಖರ್ಚಿನ ತಪ್ಸೀಲು ಮಾಹಿತಿ ಕಿಸಾನ ಸಭೆಯ ಕಾರ್ಯಕರ್ತರ ಕಡೆಯಿಂದ ಪಡೆಯಬಹುದು.


ಇದೇ ನನ್ನ ಉತ್ತರ.

ಹುಬಳಿ ಪ್ರಿಂ. ವರ್ಕ್ಸ.

ಅಧ್ಯಕ್ಷರಾಗಿದ್ದರೆ ಪರ್ಸುನಾಯ್ಕ ಉಪಾಧ್ಯಕ್ಷರಾಗಿ, ಎಸ್.ಜಿ.ಮಾಳ್ವೇಕರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಇದೇ ಸಮಿತಿ 1944 ರ ವರೆಗೂ ಮುಂದುವರಿಯಿತು. ಹೀಗೆ ರೈತರು ಒಟ್ಟಾಗುತ್ತಿರುವುದನ್ನು ನೋಡಿ ಕಮ್ಯುನಿಸ್ಟ್ ಪಕ್ಷದ ಎನ್.ಎಲ್.ಉಪಾಧ್ಯಾಯ ಬಂದು ರೈತರಿಗೆ ಮಾರ್ಗದರ್ಶನ ಮಾಡಿದರು. ಒಗ್ಗಟ್ಟು ಚಳುವಳಿಯಾಗಿ ಪರಿವರ್ತನೆಯಾಯಿತು.

1994 ರಲ್ಲಿ ಅಂಕೋಲದ ಹಿರೇಗುತ್ತಿಯ ಮೊರಟಾದಲ್ಲಿ ಒಂದು ಸಭೆ ನಡೆಯಿತು. ಈ ಸಭೆಯಲ್ಲಿ ಪ್ರಸಿದ್ಧ ಹೋರಾಟಗಾರರಾಗಿದ್ದ ನೆರೆಯ ರಾಜ್ಯದ ಶ್ಯಾಮರಾವ್ ಪುರುಳೇಕರ್ ಭಾಗವಹಿಸಿದ್ದರು. ಇವರೊಂದಿಗೆ ಎನ್.ಎಲ್. ಉಪಾಧ್ಯಾಯ ಕೂಡ ಭಾಗವಹಿಸಿದ್ದರು. ಅಂದು ನಡೆದ ಸಭೆಯಲ್ಲಿ ಪೂರ್ಣಪ್ರಮಾಣದ ಜಿಲ್ಲಾ ಸಮಿತಿ ರಚಿಸಲಾಯಿತು. ಹೊನ್ನಪ್ಪ ರಾಮಚಂದ್ರ ನಾಯ್ಕ ಅಧ್ಯಕ್ಷರಾಗಿ, ಹೈದರಇಸೂಬ ಸಾಬ್ ಉಪಾಧ್ಯಕ್ಷರಾಗಿ, ಎನ್.ಜಿ.ಮಾಳ್ವೇಕರ್ ಕಾರ್ಯದರ್ಶಿಯಾಗಿ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಭಾಗದ ರೈತ ನಾಯಕರು ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ಎಸ್.ವಿ.ಪರುಳೇಕರ ಅವರ ಮಾರ್ಗದರ್ಶನದಲ್ಲಿ ನಡೆದ ಈ ಸಮಿತಿ - ಉ.ಕ. ಜಿಲ್ಲೆಯಲ್ಲಿ ರೈತರ ಸಂಘಟನೆ ಮಾಡಿ ಕಿಸಾನ್ ಸಭಾದ ಕೆಂಬಾವುಟ ಹಾರಿಸುವ ಪಣ ತೊಟ್ಟಿತು.

ಮಾಡಿದರು. ಮಂಗಳೂರು, ಧಾರವಾಡ, ಖಾನಾಪುರ, ಮುಂಬೈ ಪ್ರಾಂತಗಳಿಗೆ ಹದ್ದುಪಾರು ಮಾಡಲಾಯಿತು. 1950 ರ ಜನವರಿ 26 ರಂದು ಇವರನ್ನೆಲ್ಲ ಬಿಡುಗಡೆ ಮಾಡಲಾಯಿತು. ಒಂದಿಷ್ಟು ಜನರನ್ನು ನಾಸಿಕ್ ಜೈಲಿನಲ್ಲಿ ಇಡಲಾಯಿತು. ಇಲ್ಲಿ ನಡೆದ ಒಂದು ಗೋಳಿಬಾರ್ ಪ್ರಕರಣದಲ್ಲಿ ಉಳಗಾದ


ಉತ್ತರ ಕನ್ನಡ ಜಿಲ್ಲಾ ರೈತರ 5 ನೇ ಪರಿಷತ್ತು

ಉ.ಕ.ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಹೋರಾಟದ ಮೊದಲ ಮೈಲುಗಲ್ಲಾಗಿರುವುದು. 1945 ರಲ್ಲಿ ಕನ್ನರ್‌ನಲ್ಲಿ ನಡೆದ ಕಿಸಾನ್ ಸಭಾ ಸಮ್ಮೇಳನ. ಕಿನ್ನರ್‌ನಲ್ಲಿ ನಡೆದ ಈ ಸಮ್ಮೇಳನದಲ್ಲಿ ಉಷಾತಾಯಿ ಡಾಂಗೆ, ಎನ್.ಎಲ್. ಉಪಾಧ್ಯಾಯ, ಭೋಗಲೆ ಮೊದಲಾದವರು ಭಾಗವಹಿಸಿದ್ದರು. ಅದು ನಡೆದ ಮರುವರ್ಷವೇ ಹಳಗಾದಲ್ಲಿ ಜಿಲ್ಲಾ ಪರಿಷತ್ ನಡೆದಾಗ ಅದರಲ್ಲಿ ಬಾಲಸಿಂಗ್ ಮಾಸ್ತರ್, ಎಸ್.ಎಸ್.ಮಿರಜಕರ್, ಎನ್.ಎಲ್. ಉಪಾಧ್ಯಾಯ, ಬಂಗಾಲದ ಎಸ್.ಎನ್. ಮುಖರ್ಜಿ ಭಾಗವಹಿಸಿದ್ದರು.

ಇಂತಹ ಸಮ್ಮೇಳನ, ಪರಿಷದ್‌ನಲ್ಲಿ ರೈತ ನಾಯಕರು ಒಟ್ಟಾಗಿ ಸೇರಿ ಚರ್ಚಿಸಿದ್ದು ತಮ್ಮ ಬಿಡುಗಡೆಯ ದಾರಿಯನ್ನು. 1944 ರಿಂದ 1948 ರವರೆಗೆ ಕಿಸನ್ ಸಭಾ (ಕೆಂಬಾವುಟ) ಕಾರವಾರದಲ್ಲಿ ಮಹಾನ್ ಗೇಣಿ ಬಂದಿ ಚಳುವಳಿ ನಡೆಸಲಾಯಿತು. ಗೇಣಿದಾರ ರೈತರ ಹೆಸರು ಗ್ರಾಮ ರೆಕಾರ್ಡಿನಲ್ಲಿ ದಾಖಲು ಪಡಿಸಲು ಮತ್ತು ಅಕ್ರಮವಾಗಿ ಗೇಣಿಯನ್ನು ಜಮೀನ್ದಾರರು ಗೇಣಿದಾರ ರೈತರಿಂದ ವಸೂಲಿ ಮಾಡುವುದನ್ನು ತಡೆಯಲು ಮತ್ತು ಗೇಣಿ ವಸೂಲಿಗೆ ಒಂದು ಪರಿಮಿತಿಗಾಗಿ ಒತ್ತಾಯಿಸಿ ಪ್ರಾರಂಭವಾದ ರೈತರ ಹೋರಾಟ ಇಡೀ ಕಾರವಾರ ತಾಲೂಕಿನಲ್ಲಿ ವ್ಯಾಪಿಸಿತು. ಆಗ ರೈತ ಕೂಟದ ನೇತೃತ್ವ ವಹಿಸಿದವರು ಕೈತಾನ್ ಮನವೇಲಿ ಡಿಸೋಜಾ, ಹೈದರ್ ಇಸೂಬಸಾಬ, ಪರ್ಸು ಜೋಗನಾಯ್ಕ, ನಾಗರಣಾ ಮಾಳ್ಸೇಕರ್, ಹೊನ್ನಪ್ಪ ರಾಮಚಂದ್ರ, ನೇತೃತ್ವದ ಶಿಸ್ತು ಹೋರಾಟ ದಿಂದಾಗಿ, ನಿರಂತರ ಚಳುವಳಿಯಿಂದಾಗಿ ಗ್ರಾಮ ರೆಕಾರ್ಡಿನಲ್ಲಿ ಸಂ.ಕು. ಎಂದು 1948 ರಲ್ಲಿ ದಾಖಲಾಯಿತು. ಗೇಣಿ ರೈತರಿಂದ ಎಕ್ರೆಗೆ 20/- ರೂ. ಗಿಂತ ಹೆಚ್ಚು ಗೇಣಿ ವಸೂಲಿ ಮಾಡಬಾರದೆಂದು ಕಾಯ್ದೆ ಬಂದಿತು.

ರೈತ ಹೋರಾಟ ಏಕಕಾಲದಲ್ಲಿ ಸ್ವಾತಂತ್ರ್ಯ ಹೋರಾಟವಾಗಿಯೂ ಕೂಡ ಹೊರಹೊಮ್ಮಿತ್ತು. ದೇಶದ ಶೋಷಕ ಜಮೀನ್ದಾರರ ವಿರುದ್ಧ ಹೋರಾಡುತ್ತಲೇ ಬ್ರಿಟಿಷ ಸರ್ಕಾರದ ರೈತವಿರೋಧಿ ನೀತಿಯ ವಿರುದ್ಧ ಕೂಡ ಹೋರಾಟ ಸಾಗಿತ್ತು. ಹೀಗಾಗಿ ಅವರ ಕೆಂಗಣ್ಣಿಗೆ ರೈತಕೂಟ ಬೀಳಬೇಕಾಯಿತು.


1948 ರಿಂದ 1955 ರವರೆಗೆ ಗೇಣಿಯ ಪರಿಮಿತಿಯ ಬಗ್ಗೆ ಇನ್ನೊಂದು ಸುತ್ತಿನ ಮಹತ್ವದ ಚಳುವಳಿ ನಡೆಯಿತು. 1948 ರ ನಂತರ ಕಿಸಾನ್ ಸಭಾದ ಬಹುತೇಕ ನಾಯಕರನ್ನು ಗಡಿಪಾರು

ಗಣುಮಾಬಲ ನಾಯ್ಕ ಪೋಲೀಸರ ಗುಂಡಿಗೆ ಬಲಿಯಾದರು. (ಈ ಘಟನೆಯ ಕುರಿತು ಕತೆಗಾರ ನಿರಂಜನ ಅವರು ಕಥೆ ಬರೆದಿದ್ದಾರೆ) ಜಮೀನ್ದಾರರ ವಿರುದ್ಧ ಹೋರಾಡಿ, ಇಡೀ ವ್ಯವಸ್ಥೆಗೆ ಚಳುವಳಿ ಮೂಲಕ ಬಿಸಿ ತಟ್ಟಿಸಿದ ಗಣುನಾಯ್ಕ ಉ.ಕ.ದ ರೈತ ಹೋರಾಟದಲ್ಲಿ ಹುತಾತ್ಮನಾದ ಮೊದಲಿಗನಾಗಿದ್ದಾನೆ. ನಂತರದ ಹೋರಾಟಕ್ಕೆ ಸ್ಪೂರ್ತಿಯ ಕೇಂದ್ರವಾಗಿದ್ದಾರೆ.

ಕಾರವಾರದಲ್ಲಿ ನಡೆದ ಈ ಎಲ್ಲಾ ಹೋರಾಟಗಳು ಇಡೀ ರಾಜ್ಯದ ಗಮನ ಸೆಳೆದವು. ದಿನನಿತ್ಯ ನಾವು ಅನುಭವಿಸುತ್ತಿರುವ ಶೋಷಣೆಯ ನೊಗವನ್ನು ಕಿತ್ತೆಸೆಯಲು ಕಮ್ಯುನಿಸಂ ಸಿದ್ಧಾಂತ ಅವರ ನೆರವಿಗೆ ಬಂದಿತು.

1950 ರವರೆಗಿನ ಹೋರಾಟ ಉ.ಕ.ಜಿಲ್ಲೆಯ ರೈತ ಚಳುವಳಿಯ ಮೊದಲ ಘಟ್ಟವಾದರೆ 2ನೇ ಘಟ್ಟ ಪ್ರಾರಂಭ ಆಗುವುದು 1950 ರಿಂದ ಸುಮಾರು 1956 ರವರೆಗೆ ಸರ್ಕಾರ ಗೇಣಿ ಹೆಚ್ಚಿಗೆ ವಸೂಲಿ ಮಾಡಿದ್ದರಿಂದ ಮತ್ತೆ ಚಳುವಳಿ ಪ್ರಾರಂಭ ವಾಯಿತು. ಇದು ಇಡೀ ಜಿಲ್ಲೆಯನ್ನು ವ್ಯಾಪಿಸಿತು.

ಕಿಸಾನ್ ಸಭಾ ನಡೆಸಿದ ಹೋರಾಟದ


ಎನ್.ಎಲ್.ಉಪಾಧ್ಯಾಯ

ವೈವಿಧ್ಯತೆಯನ್ನು ನಾವು ಗಮನಿಸಬೇಕು. ರೈತರ ಗೇಣಿಯನ್ನು ನಿಗದಿ ಮಾಡುವ ಕ್ರಮದ ಬದಲಾವಣೆ ಆದಾಗ ಕಿಸಾನ್ ಸಭಾ 'ನನ್ನ ಉತ್ತರ' ಎಂಬ ಸಣ್ಣ ಕರಪತ್ರವನ್ನು ಪ್ರಕಟಿಸಿತು (ಚಿತ್ರದಲ್ಲಿ ಇದೆ). 'ಸನ್ 1939 ನೇ ಇಸವಿಯ ಮುಂಬಯಿಯ ಟೆನೆನ್ಸಿ ಆಕ್ಟ್ ನಂಬ್ರು 29 ನೆಯ ಸೆಕ್ಷನ್ 1, ಕ್ಲಾಸ್ ನಂ.(8) ನೆಯ ಪ್ರಕಾರ ನಾನು ಹೇಳುವುದೇನೆಂದರೆ ನಾನು ಸಾಗುವಳಿ ಮಾಡುವ ಭೂಮಿಯ ಉತ್ಪತ್ತಿಯಿಂದ ಸಾಗುವಳಿದಾರನ ಕೂಲಿ ಹಿಡಿದು ಸಾಗುವಳಿ ಖರ್ಚ ನನ್ನು ಒಟ್ಟು ಉತ್ಪನ್ನ ದೊಳಗಿಂದ ವಜಾ ಮಾಡಿದ ಬಳಿಕ ಉಳಿದದ್ದ ರಿಂದ ಗೇಣಿ ಕೊಡಲು ತಯಾರಿದ್ದೇನೆ. ಖರ್ಚಿನ ತಪ್ಶೀಲು ಮಾಹಿತಿ ಕಿಸಾನ್ ಸಭೆಯ ಕಾರ್ಯಕರ್ತರ ಕಡೆಯಿಂದ ಪಡೆಯಬಹುದು. ಇದೇ ನನ್ನ ಉತ್ತರ' ಈ ಕರಪತ್ರ ಕಾರವಾರದ ಬಹುತೇಕ ರೈತರ ಕೈಯಲ್ಲಿ ಕಿಸಾನ್ ಸಭಾ ಕೊಟ್ಟಿದ್ದು. ಗೇಣಿ ವಸೂಲಿಗೆ ಬಂದವರಿಗ ಪ್ರತಿಯೊಬ್ಬರೂ ಇದೇ ಕರಪತ್ರವನ್ನು ಕೊಟ್ಟು, ಏನೂ ಮಾತನಾಡದೆ ಕಳುಹಿಸಿದರು. ಇದು ಗೇಣಿ ವಸೂಲಿದಾರರಲ್ಲಿ ಮುಜುಗರವನ್ನು ಉಂಟು ಮಾಡಿತು. ಇದೊಂದು ಮಾದರಿಯ ಪ್ರತಿಭಟನೆ ಆಗಿತ್ತು.

ಇನ್ನೊಂದು ಘಟನೆ ತೀರಾ ಸ್ವಾರಸ್ಯಕರವಾಗಿತ್ತು. ಉ.ಕ. ಜಿಲ್ಲೆಯ ಕರಾವಳಿ ಭಾಗದಲ್ಲಿ ಹಿಂದೆ ಮೇಲ್ಜಾತಿಯ (ಬ್ರಾಹ್ಮಣ) ಮನೆಯಲ್ಲಿ ಯಾರಾದರೂ ಸತ್ತರೆ ಅವರ ಕೆಲಸಕ್ಕೆ 'ಪಟಗಾರ' ಸಮುದಾಯ ದವರು ನಿರ್ದಿಷ್ಟ ಪಡಿಸಿದ ಮನೆಗೆ ಹೋಗಬೇಕಿತ್ತು. ಈ ಕೆಲಸ ಮುಗಿಸಿ ಅವರು ಮತ್ತೆ ತಮ್ಮ ದಿನದ ದುಡಿತಕ್ಕೆ ಹೋಗ ಬೇಕಾದ ಪದ್ಧತಿ ಇತ್ತು. ಅನೇಕ ವರ್ಷಗಳಿಂದ ಇದು ನಡದೇ ಇತ್ತು. ಆದರೆ ಒಮ್ಮೆ ಒಡೆಯನ ಮನೆಯಲ್ಲಿ ಯಾರೋ ಒಬ್ಬರು ಸತ್ತಿದ್ದು ಪಟಗಾರ ಆಳಿಗೆ ತಿಳಿಯಲೇ ಇಲ್ಲ. ಆತ ಬೆಳಿಗ್ಗೆ ಎದ್ದು ಎಲ್ಲೋ ಕೆಲಸಕ್ಕೆ ಹೋಗಿದ್ದ. ಆದರೆ ಸಂಜೆ ಬಂದಾಗ ಕ್ರಮ ತಪ್ಪಿದ್ದಕ್ಕಾಗಿ ಮರಕ್ಕೆ ಕಟ್ಟಿ ಹಾಕಿ ಅವನಿಗೆ ಹೊಡೆಯಲಾಯಿತು. ಇಂತಹ ಪ್ರಕರಣ ಒಂದರೆಡು ಸಲ ನಡೆದಾಗ ರೈತ ಸಂಘದವರು ಪ್ರವೇಶಿಸಿ ಪಟಗಾರ ಸಮುದಾಯಕ್ಕೆ ಒಂದು ವಿಷಯ ಹೇಳಿಕೊಡುತ್ತಾರೆ. ಪ್ರತಿದಿನ ಬೆಳಿಗ್ಗೆ ಎದ್ದು ನಿಗದಿ ಮಾಡಿದ ಒಡೆಯನ ಮನೆ ಬಾಗಿಲಿಗೆ ಹೋಗಿ 'ಇಂದು ನಿಮ್ಮಲ್ಲಿ ಯಾರಾದರೂ ಸತ್ತಿದ್ದಾರೆಯೇ? ಸತ್ತಿದ್ದರೆ ಹೇಳಿ. ನಾವುಕೆಲಸ ಮುಗಿಸಿ ಹೋಗುತೇವೆ. ಇಲ್ಲದಿದ್ದರೆ ನೀವು ಹೊಡೆಯುವುದ ಬಡಿಯುವುದು ಮಾಡುತ್ತೀರಲ್ಲ.ಅವೆಲ್ಲಾ ಬೇಡವೆಂದೇ ಸತ್ತಿದ್ದಾರೆಯೋ ಇಲ್ಲವೋ ಕೇಳಿ ಹೋಗೋಣ ಎಂದು ಬಂದೆ' ಎಂದು ಪ್ರತಿಯೊಬ್ಬರು ಪ್ರತಿದಿನ ಹೋಗಿ ಕೇಳಬೇಕೆಂದು ನಿರ್ಣಯಿಸ ಲಾಯಿತು. ಇವರು ಹೇಳಿಕೊಟ್ಟಂತೆ ಈ ಆಳುಗಳು ಪ್ರತಿಮನೆಗೆ ಒಳಗೆ ಹೋಗಿ ಪ್ರತಿದಿನ 'ನಿಮ್ಮಲ್ಲಿ ಯಾರಾದರೂ ಸತ್ತಿದ್ದಾರೆಯೇ?' ಎಂದು ಕೇಳಿದಾಗ ಕೆಲವು ಸಹಿಸಿಕೊಂಡ ಒಡೆಯರು ಜಗಳಕ್ಕಿಳಿದು ನಂತರ 'ನೀವು ಬೆಳಿಗ್ಗೆ ಎದ್ದು ಬಂದು ಮನೆ ಬಾಗಿಲಲ್ಲಿ ಅಪಶಕುನದ ಮಾತನಾಡುವುದು ಬೇಡ. ನಮ್ಮ ಮನೆಯಹೆಣದಕೆಲಸ ಮಾಡುವುದು ಬೇಡ' ಎಂದು ಬಿಟ್ಟೇಬಿಟ್ಟರು. ಅಲ್ಲಿಂದ ಮುಂದೆ ಪಟಗಾರ ಸಮುದಾಯ ಯಾರದೋ ಮನೆಯ ಶವದ ಬಿಟ್ಟಿ ಕೆಲಸ ಮಾಡುವುದು ತಪ್ಪಿತು.

ಉತ್ತರ ಕನ್ನಡ ಜಿಲ್ಲಾ ರೈತರ 5ನೇ ಪರಿಷತ್ತು

'ಏನೇ ಬರಲಿ ಒಗ್ಗಟ್ಟಿರಲಿ, ಕೆಂಬಾವುಟ ಹಾರುತಿರಲಿ'

'ಹೆಚ್ಚಾಗಿದ್ದ ಗೇಣಿ ಕೊಡುವುದಿಲ್ಲ ಜುಲುಮ್ ದಬ್ಬಾಳಿಕೆಗೆ ಹೆದರುವುದಿಲ್ಲ' ಎಂದು ಘೋಷಣೆಯೊಂದಿಗೆ 1969 ರಲ್ಲಿ 24 ಫೆಬ್ರವರಿ (ಸೋಮವಾರ) ಕಾರವಾರ ಕಲೆಕ್ಟರ್ ಕಛೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ಮತಪ್ರದರ್ಶನ ಹಮ್ಮಿಕೊಂಡಿತ್ತು. ಸಾವಿರಾರು ಜನ ರೈತರು ಭಾಗವಹಿಸಿದ್ದ ಈ ಮತಪ್ರದರ್ಶನದ ಪೂರ್ವಭಾವಿ ಯಾಗಿ 1968

ಪುಟ 12 ಕ್ಕೆ

ಕನ್ನಡ ಚಿತ್ರರಂಗದಲ್ಲೀಗ ಅಲ್ಲೋಲ ಕಲ್ಲೋಲ. ನಿರ್ಮಾಪಕರು ನಟರುಗಳ ನಡುವೆ ಬಡಿದಾಟ, ವ್ಯಾಗ್ಯುದ್ಧ. ಅದ್ದೂರಿ ಸಿನಿಮಾ ಮಾಡಬೇಕೆಂದು ಸಾಲ ಸೋಲ ಮಾಡಿ ಎಗ್ಗಿಲ್ಲದೇ ಹಣ ಸುರಿಯಲಾಗುತ್ತಿದೆ. ಕನ್ನಡ ಚಿತ್ರರಂಗದ ಮಾರುಕಟ್ಟೆಯಲ್ಲಿ ಗಳಿಸಬಹುದಾದ ವ್ಯಾಪ್ತಿಗೂ ಮೀರಿದ ಹೂಡಿಕೆಯಿಂದಾಗಿ ಹಲವಾರು ಬಿಕ್ಕಟ್ಟುಗಳು ಸಂಭವಿಸಿದೆ. ಇದರಲ್ಲಿ ಕಪ್ಪುಹಣ - ಮಾಫಿಯಾದ ಪಾಲು ಹೆಚ್ಚುತ್ತಿದೆ. ಇಂತಹ ಹೂಡಿಕೆ ಒತ್ತಡಗಳು ಮತ್ತು ಹಣದ ಆಸೆಗಾಗಿ ಮಿತಿ ಮೀರಿ ಒಪ್ಪಿಕೊಳ್ಳುವ, ಬೇಡುವ ನಿರ್ಮಾಪಕರು ಮತ್ತು ನಟ ನಟಿಯರ ನಡುವೆ ಸ್ಫೋಟಗೊಂಡಿರುವ ಅಸಹ್ಯ ಅನಾರೋಗ್ಯಕರ ವ್ಯಾಜ್ಯಗಳ ಒಂದು ನೋಟ ಇಲ್ಲಿದೆ...


ಪ್ರೇಮಾ

ಚಿತ್ರನಗರಿಯಲ್ಲಿ ಗೂಳಿಕಾಳಗ

ಇಂದು ಚಿತ್ರೋದ್ಯಮವು ಪ್ರಬಲ ವ್ಯಾಪಾರೋದ್ಯಮವಾಗಿ ಮಾರ್ಪಟ್ಟಿದೆ. ಇಲ್ಲಿ ಕಾಸು-ಕಾಲ ಪ್ರತಿಭೆ ಕ್ರಿಯಾಶೀಲತೆ ಯಾವುದಕ್ಕೂ ನೆಲೆ ಬೆಲೆ ಇಲ್ಲ. ಕೇವಲ ಲಾಭ! ಲಾಭ!! ನಟ-ನಟಿ, ನಿರ್ದೇಶಕ-ನಿರ್ಮಾಪಕರ ನಡುವೆ ಅನ್ಯೋನ್ಯತೆಗಿಂತ ಪ್ರತಿಷ್ಠೆ, ಎಣ್ಣೆ ಸೀಗೇಕಾಯಿ ಸಂಬಂಧ. ಹೀಗಾಗಿಯೇ ಕನ್ನಡ ಚಿತ್ರರಂಗದಲ್ಲಿ ಸಮಸ್ಯೆಗಳ ಮೇಲೆ ಸಮಸ್ಯೆಗಳು ಬಿಕ್ಕಟ್ಟಿನೊಳಗೆ ಬಿಕ್ಕಟ್ಟುಗಳು ಉಲ್ಬಣಗೊಳ್ಳುತ್ತಿವೆ.

ಮೊನ್ನೆ ಮೊನ್ನೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ ಮತ್ತು ನಿರ್ದೇಶಕ ದಿನೇಶ್ ಬಾಬು ನಡುವಿನ ವಿವಾದ ತಾರಕಕ್ಕೇರಿ ವಾದ ವಿವಾದ ಪ್ರತಿವಾದಗಳು ನಡೆದು ದಿನೇಶ್ ಬಾಬುವಿಗೆ 6 ತಿಂಗಳ ಬಹಿಷ್ಕಾರದ ಶಿಕ್ಷೆಯೊಂದಿಗೆ ಪರ್ಯಾವಸಾನಗೊಂಡಿತು. ಈ ನೆನಪು ಮಾಸುವ ಮುನ್ನವೆ 'ಪರ್ವ' ಚಿತ್ರದ ನಿರ್ಮಾಪಕ ಶಿಲ್ಪಾ ಶ್ರೀನಿವಾಸ, ನಟಿ ಪ್ರೇಮಾ ಮತ್ತು H_2O ನಿರ್ಮಾಪಕ ಧನರಾಜ್, ನಟ ಉಪೇಂದ್ರರ ನಡುವೆ ಕದನ ಆರಂಭಗೊಂಡಿದ್ದು ನ್ಯಾಯಾಲಯದ ಕಟ್ಟೆಯನ್ನು ಮತ್ತು ಫಿಲಂ ಛೇಂಬರ್ ತಲುಪಿದೆ.

'ಪರ್ವ' ಚಿತ್ರದ ನಿರ್ಮಾಪಕ ಶಿಲ್ಪ ಶ್ರೀನಿವಾಸ ತಮ್ಮ ಚಿತ್ರದ ನಾಯಕಿ ಪ್ರೇಮಾರ ಮನೆಗೆ ಧಾವಿಸಿ ಒಂದು ದಿನದ ಚಿತ್ರಣಕ್ಕೆ ಹಾಜರಾಗಬೇಕೆಂದು ಕೇಳಿದ್ದಾರೆ. ಆದರೆ ಪ್ರೇಮಾ ಈಗಾಗಲೇ ಬೇರೊಂದು ಚಿತ್ರಕ್ಕೆ ಡೇಟ್ ಕೊಟ್ಟಿರುವುದರಿಂದ


ಉಪೇಂದ್ರ


ಧನರಾಜ್

ಅದು ಸಾಧ್ಯ ಇಲ್ಲ ಎಂದಿದ್ದಾರೆ. ಆ ದಿನದ ಚಿತ್ರೀಕರಣಕ್ಕೆಂದೇ 20 ಲಕ್ಷ ರೂ ವೆಚ್ಚದ ಸೆಟ್ ನಿರ್ಮಿಸಿ ಕ್ಲೈಮಾಕ್ಸ್ ಹಾಡಿನ ದೃಶ್ಯಕ್ಕೆ ತಯಾರು ನಡೆಸಿದ್ದ ನಿರ್ಮಾಪಕರು, ಚಿತ್ರದ ನಾಯಕ ವಿಷ್ಣುವರ್ಧನ, ಇನ್ನೊಬ್ಬ ನಾಯಕಿ ನಟಿ ರೋಜಾ ರನ್ನು ಕರೆಸಿದ್ದಾರೆ. ಜೊತೆಗೆ 2000 ಸಹ ನಟ-ನಟಿಯರನ್ನು ಗುಡ್ಡೆಹಾಕಿದ್ದಾರೆ. ಆ ಒಂದು ದಿನದ ವೆಚ್ಚವೇ 1 ಲಕ್ಷ ರೂಗಳಿಗೂ ಅಧಿಕವಂತೆ. ಈಗಾಗಲೇ ಆ ಚಿತ್ರಕ್ಕೆ 4 ಕೋಟಿ ರೂ. ಖರ್ಚಾಗಿದೆಯಂತೆ. ಅದರ ಮೇಲೆ ಬಡ್ಡಿ, ಚಕ್ರಬಡ್ಡಿ ಈ ಎಲ್ಲವೂ ತಲೆಯೊಳಗೆ ಸೇರಿ ಗಿರಕಿ ಹೊಡೆಸಿಕೊಂಡು ಶ್ರೀನಿವಾಸ್ ತನ್ನ ಸಿನಿಮಾದ ಚಿತ್ರೀಕರಣಕ್ಕೆ ಬಾರದೆ ಹೋದರೆ ಮನೆಯವರನ್ನೆಲ್ಲಾ ಕೊಚ್ಚಿ ಹಾಕುತ್ತೇನೆ ಎಂದು ಶ್ರೀನಿವಾಸ ಆರ್ಭಟಿಸಿದ್ದರಂತೆ. ಇಷ್ಟಕ್ಕೆ ಸುಮ್ಮನಾಗದೆ ಪ್ರೇಮಾರ ಮನೆಯ ಮುಂದಿನ ಹೂ ಕುಂಡಗಳನ್ನು ಒಡೆದು ಹಾಕಿದ್ದಾರೆ. ಪ್ರಕರಣ ಈಗ ಪೊಲೀಸ್ ಠಾಣೆ ಮುಟ್ಟಿದೆ.

ಈ ಬಗ್ಗೆ ನಟಿ ಪ್ರೇಮಾ ಇದರಲ್ಲಿ ನನ್ನದೇನೂ ತಪ್ಪಿಲ್ಲ. ಈ ಚಿತ್ರಕ್ಕಾಗಿ ನನ್ನ ಕೈಮೀರಿ ಸಹಕರಿಸಿದ್ದೇನೆ. 50 ದಿನಗಳ ಜೊತೆಗೆ ಮತ್ತು 25 ದಿನಗಳ ಡೇಟ್ಸ್ ಕೊಟ್ಟಿದ್ದೇನೆ. ಇನ್ನು ಹೆಚ್ಚು ದಿನಗಳು ಬೇಕೆಂದಾಗ ಡಿಸೆಂಬರ್‌ನಲ್ಲಿ 'ಪರ್ವ'ಕ್ಕಾಗಿ ಮತ್ತೇ 15 ದಿನಗಳನ್ನು ಮಿಸಲಿರಿಸಿದ್ದೇನೆ ಇಷ್ಟೆಲ್ಲಾ ಸಹಕರಿಸಿದರು ಅವರು ಹೀಗೇಕೆ ವರ್ತಿಸಿದರೂ ಎಂಬುದು ಪ್ರೇಮಾರ ಪ್ರಶ್ನೆ.

ಈ ಎಲ್ಲಾ ಅಬ್ಬರ ಆರ್ಭಟಗಳ ನಂತರ ನಿರ್ಮಾಪಕ ಶಿಲ್ಪಾ ಶ್ರೀನಿವಾಸರಿಗೆ ತಮ್ಮ ತಪ್ಪು ವರ್ತನೆ ಬಗ್ಗೆ ಜ್ಞಾನೋದಯವಾಗತೊಡಗಿದೆಯಂತೆ. ತಮ್ಮ ಅಸಹಾಯಕತೆಯಿಂದ ಉದ್ಭವಿಸಿದ 'ಆಕ್ರೋಶ' ಅವರ ಹೆಸರಿಗೆ ಕಳಂಕ ತಂದಿದೆ.

ಪ್ರೇಮಾಳ ಮನೆಯ ಮುಂದೆ ನಡೆದ ಘಟನೆಯ ಬಗ್ಗೆ ಪೊಲೀಸರು ಬರೆದುಕೊಂಡ ದೂರಿಗೆ ಕರ್ನಾಟಕ ಫೀಲಂ ಛೇಂಬರ್‌ನ ಪದಾಧಿಕಾರಿಗಳ ಮತ್ತು ನಿರ್ಮಾಪಕರ ಸಂಘದ ಅಧ್ಯಕ್ಷ ಬಸವಂತಕುಮಾರ್ ಪಾಟೀಲ್ ಸಹಿ ಹಾಕಿದ್ದಾರೆ.

ತನ್ನ ಮಿತಿ ಮೀರಿದ ವರ್ತನೆಯಿಂದ ಉದ್ಯಮ ದವರ ಕೆಂಗಣ್ಣಿಗೆ ಗುರಿಯಾಗಿ ರುವ ಶಿಲ್ಪ ಶ್ರೀನಿವಾಸ ಪೊಲಿಸ್ ಠಾಣೆಯಿಂದಲೇ ಫೋನ್ ಮೂಲಕ ಪ್ರೇಮಾರಲ್ಲಿ ಕ್ಷಮೆ ಕೇಳಿದ್ದಾರೆ. ಛೇಂಬರ್‌ನ ತೀರ್ಮಾನಕ್ಕೆ ತಾನು ಬದ್ಧ ಎಂದು ಪ್ರೇಮಾ ಕೂಡಾ ಹೇಳಿದ್ದಾರೆ. ಈಗ ಶ್ರೀನಿವಾಸ ಮತ್ತು 'ಪರ್ವ' ಚಿತ್ರದ ಭವಿಷ್ಯ ಛೇಂಬರ್‌ನಲ್ಲಿ ನಿರ್ಧಾರವಾಗಿದ್ದು ಶ್ರೀನಿವಾಸ 25 ಸಾವಿರ ದಂಡ ತೆರುವುದು ಮತ್ತು ಪ್ರೇಮಾರವರು 'ಪರ್ವ' ಚಿತ್ರೀಕರಣಕ್ಕೆ ಸಹಕರಿಸಬೇಕೆಂದು ತಿಳಿಸಿದ್ದಾರೆ.

ಉಪೇಂದ್ರ - H_2O - ಧನರಾಜ್

ಶಿಲ್ಪಾ ಶ್ರೀನಿವಾಸ ಮತ್ತು ಪ್ರೇಮಾರ ಪ್ರಕರಣ ಒಂದು ಹಂತ ತಲುಪುತ್ತಿರುವಾಗಲೇ ಮತ್ತೊಬ್ಬ ನಿರ್ಮಾಪಕ ಧನರಾಜ್ ಸ್ಫೋಟಗೊಂಡಿದ್ದಾರೆ. ಕಳೆದ ಒಂದು ವರ್ಷದಿಂದ H_2O ಎಂಬ ಚಿತ್ರಕ್ಕೆ


ಠಾಣೆಯಲ್ಲಿ ಶಿಲ್ಪಶ್ರೀನಿವಾಸ

ಹತ್ತು ಕೋಟಿ ರೂ ಸುರಿದರೂ ಇಲ್ಲಿವರೆಗೆ ಬರೀ ಚಿತ್ರೀಕರಣ ಮಾತ್ರ ಮುಗಿದಿದ್ದು, ಡಬ್ಬಿಂಗ್ ಕಾರ್ಯ ಆಗಿಲ್ಲ. ನಟ ಉಪೇಂದ್ರರ ಅಸಹಕಾರದಿಂದ ತಾನು ಭಾರೀ ಸಂಕಷ್ಟಗೊಳಗಾಗಿದ್ದೇನೆ ಎಂಬುವುದು ಧನರಾಜ್ ಗೋಳು. ಈ ಬಗ್ಗೆ ಧನರಾಜ್ ಫಿಲಂ ಛೇಂಬರ್‌ಗೆ ದೂರು ಸಲ್ಲಿಸಿ ಅದರ ಮೊರೆ ಹೋಗಿದ್ದಾರೆ.

ಕೋಟ್ಯಾಂತರ ರೂಗಳ ಸಾಲ, ಬಡ್ಡಿ, ಚಕ್ರ ಬಡ್ಡಿಯಡಿಯಲ್ಲಿ ಸಿಕ್ಕ ನರಳುತ್ತಿರುವ ನಿರ್ಮಾಪಕ ಧನರಾಜ್ ತಮ್ಮ ಚಿತ್ರವನ್ನು ಉಪೇಂದ್ರ ಮುಗಿಸಲಿ ಎಂದು ಕಾದು ಕಾದು ಸುಸ್ತಾಗಿದ್ದಾರೆ. ಹೀಗೆ ಸುಸ್ತಾಗಿದ್ದ ಧನರಾಜ್‌ಗೆ ಉಪೇಂದ್ರ ಇನ್ನೂ 45 ಲಕ್ಷರೂ ನೀಡಿದರೆ ಮಾತ್ರ H_2O ಚಿತ್ರದ ಡಬ್ಬಿಂಗ್‌ಗೆ ಹಾಜರಾಗುವೆ ಎಂಬ ಸಂದೇಶ ರವಾನಿಸಿದ್ದಾನೆ. ಒಪ್ಪಂದ ಆಗಿರುವುದು 60 ಲಕ್ಷ ರೂಗಳಿಗೆ ಮಾತ್ರ ಅದನ್ನು ಈಗಾಗಲೇ ಕೊಟ್ಟಾಗಿದೆ ಎಂಬುದು ಧನರಾಜ್ ನಿಲುವು. ಆದರ ಉಪೇಂದ್ರ ತಾನು ಈ ಚಿತ್ರಕ್ಕಾಗಿ ಎಷ್ಟು ಸಮಯ ನೀಡಿದ್ದೇನೆ, ಎಷ್ಟು ಕೆಲಸ ಮಾಡಿದ್ದೇನೆ ಎಂಬ ಹೊಸರಾಗದಿಂದ ಕಂಗಾಲಾಗಿರುವ ಧನರಾಜ್ ಫೀಲಂ ಛೇಂಬರ್ ಮುಂದೆ ಉಪೇಂದ್ರ ವಿರುದ್ಧ ದೂರು ದಾಖಲಿಸಿದ್ದಾರೆ. ಈಗ H_2O (ನೀರು) ಸಮಸ್ಯೆ ಕಾವೇರಿ ಸಮಸ್ಯೆಗಿಂತಲೂ ಹಿರಿದಾಗಿ ಛೇಂಬರ್ ಕಾಡತೊಡಗಿನೆ.

ಕನ್ನಡ ಪ್ರೇಕ್ಷಕರಿಗೆ ಕಳೆದೆರಡು ವರ್ಷಗಳಿಂದ ಕ್ರಿಯಾಶೀಲತೆ ಇಲ್ಲದ ಕೇವಲ ಬರೀ ರಿಮೇಕ್ ಚಿತ್ರಗಳನ್ನೇ ಚಿತ್ರೋದ್ಯಮ ನೀಡಿರಬಹುದು, ಆದರೆ ತೆರೆಯ ಮೇಲೂ ತೋರಿಸಲಾಗದ ಮನರಂಜನೆಯನ್ನು ಕರ್ನಾಟಕದ ಪ್ರೇಕ್ಷಕರಿಗೆ ನೈಜವಾಗಿಯೂ ನೀಡುತ್ತಿದೆ.

ರೀಮೇಕ್‌ಗಳನ್ನೇ ನೇರ ಭಟ್ಟಿ ಇಳಿಸುವುದನ್ನು ಕಲಿತಿರುವ ಕನ್ನಡ ಚಿತ್ರೋದ್ಯಮದಲ್ಲಿ ಈಗಾಗಲೇ ಮೂರು ಇಲಾಖೆಗಳು ಬಂದ್ ಆಗಿದೆ. ಕನ್ನಡ ಚಿತ್ರ ರಂಗದಲ್ಲಿ ನಿರ್ದೇಶಕರ ಅವಶ್ಯಕತೆ ಇಲ್ಲ, ನಕಲು ಮಾಡುವುದರಿಂದ ಕತೆಗಾರರ ಮತ್ತು ಚಿತ್ರ ಕತೆ ಬರೆಯುವವರ ಅವಶ್ಯಕತೆ ಬೇಡವಾಗಿದೆ. ಆಗ ಸಂಗೀತ ಮತ್ತು ಸಾಹಿತ್ಯವನ್ನು ನೇರ ಭಟ್ಟಿ ಇಳಿಸುತ್ತಿರುವುದರಿಂದ ಅವರೂ ಬೇಡವಾಗುತ್ತಿದ್ದಾರೆ. ಒಟ್ಟಾರೆಯಾಗಿ ಚಿತ್ರರಂಗದ ಏಳಿಗೆ, ಸೃಜನಶೀಲ ಚಿತ್ರಕ್ಕಿಂತಲೂ ಲಾಭ ಮತ್ತು ಪ್ರತಿಷ್ಠೆ ಹೆಮ್ಮ ವಾಗತೊಡಗಿದೆ. ಹೊಂದಾಣಿಕೆ, ಸಹಕಾರಗಳಿಂದ ಬೆಳೆಯಬೇಕಾದ ಚಿತ್ರರಂಗ ಈಗ ಬಿಕ್ಕಟ್ಟಿನಲ್ಲಿದೆ.

ನಿರ್ಮಾಪಕರ ಸಂಘದಲ್ಲೂ ಬಂಡಾಯ

ಪರ್ವ ಮತ್ತು H_2O ವಿವಾದದಿಂದಾಗಿ ನಿರ್ಮಾಪಕ ಸಂಘದಲ್ಲೂ ಬಂಡಾಯದ ಕೂಗು ಎದ್ದಿದೆ. ಹಾಲಿ ಅಧ್ಯಕ್ಷ ಬಸವಂತ ಕುಮಾರ ಪಾಟೀಲ ವಿರುದ್ಧ ಸಮರ ಸಾರಿರುವ ರಾಕ್‌ಲೈನ್ ವೆಂಕಟೇಶ್, ಕೆ. ಮಂಜು, ಎಸ್.ಎ ಗೋವಿಂದರಾಜ್, ಎಸ್.ಎ. ರೆಹಮಾನ್, ಎನ್ ಕುಮಾರ್, ಜೈ ಜಗದೀಶ್, ಎಂ. ದ್ಯಾಳ ಮತ್ತು ಮುನಿರತ್ನಂ ರಾಜಿನಾಮೆ ನೀಡಿದ್ದು ಸಾರ ಗೋವಿಂದು ಅವರನ್ನು ಅಧ್ಯಕ್ಷ ಗಾದಿಗೆ ಏರಿಸಲು ಹವಣಿಸುತ್ತಿದ್ದಾರೆ. ಸಂಘ ಈಗ ಇಬ್ಭಾಗದ ಸನಿಹ ನಿಂತಿದೆ ಎಂಬ ಕೂಗು ಗಾಂಧಿನಗರ ಆವರಿಸಿದೆ.

- ಎಂ.ಜಯರಾಮ

ಉ.ಕ. ಕೆಂಬಾವುಟದ ಹೆಜ್ಜೆ ಗುರುತುಗಳು...

ಪುಟ 11 ರಿಂದ

ನೇ ಇಸವಿಯಲ್ಲಿ 5ನೇ ಪರಿಷತ್ತು ನಡೆಯಿತು. 2 ದಿನ ನಡೆದ ಚಾರಿತ್ರಿಕ ರೈತ ಪರಿಷತ್ತು ಕಾರವಾರ ನಗರ ಉತ್ತರಕ್ಕೆ ನಾಲ್ಕು ಮೈಲಿನಷ್ಟು ದೂರ ಇರುವ ಹೊಟೆಗಾಳಿಯಲ್ಲಿ ಗಣುನಾಯ್ಕ ನಗರದಲ್ಲಿ ನಡೆಯಿತು. ಸಮ್ಮೇಳನದ ಪೂರ್ವದಲ್ಲಿ ನಾಲ್ಕಾಣೆ ಕೊಟ್ಟು 18 ವರ್ಷಕ್ಕೆ ಮೇಲ್ಪಟ್ಟವರು ಸದಸ್ಯರಾಗುವಂತೆ ಜಿಲ್ಲೆಯ ಜನರಲ್ಲಿ ಸಂಘಟನೆ ವಿನಂತಿಸಿತು.

ಈ ಸಮ್ಮೇಳನವು 'ಮೈಸೂರು ಭೂಸುಧಾರಣಾ ಕಾಯ್ದೆಯಿಂದಾಗಿ ಈಗಾಗಲೇ ಗೇಣಿ ರೈತರಿಗಿದ್ದ ಸೌಲಭ್ಯ ನಷ್ಟವಾಗಿ ಗುಂಟೆಗೆ ಎಂಟಾಣೆಯಂತೆ ಕೊಡಬೇಕಾಗಿದ್ದ ನಿಯಮದ ಬದಲು ಗುಂಟೆಗೆ ಎರಡೂವರೆ-ಮೂರು ರೂಪಾಯಿವರೆಗೂ ಗೇಣಿ ತೆರುವ ಪ್ರಸಂಗ ಜಿಲ್ಲೆಯ ರೈತರಿಗೆ ಬಂದಿದೆ. ಇದನ್ನು ತಡೆಗಟ್ಟುವುದು, ಅಂತೆಯೇ ಪರಿಹಾರ ಧನ ಕೊಡದೆಯೇ ಊಳುವವನು ಹೊಲದೊಡೆಯನಾಗುವ ಬಗೆಗೆ ರೈತರನ್ನು ಸಿದ್ಧಗೊಳಿಸಬೇಕಾಗಿದೆ. ರೈತರ ಸಾಲದಹೊರೆಯ ಬಗ್ಗೆ ಪರಿಹಾರ ಸಹ ಹೊಂದಬೇಕಾಗಿದೆ. ಬಂಜರುಭೂಮಿಯ ಅತಿಕ್ರಮಣವನ್ನು ಕ್ರಮಗತ ಮಾಡಿಕೊಂಡು ಹೆಚ್ಚಿನ ಬಂಜರು ಭೂಮಿಗಳ ಸರಿಯಾದ ವಿತರಣೆ ಆಗುವಂತೆ ವ್ಯವಸ್ಥೆಯಾಗಬೇಕಾಗಿದೆ(ಚಿತ್ರದಲ್ಲಿದೆ) ಎಂದು ಪ್ರಾಂತ ರೈತ ಸಂಘ ಅಂದು ಕರೆ ನೀಡಿತ್ತು. ಆದರೆ ಎಷ್ಟೋ ಹೋರಾಟ ನಡೆದರೂ ಈ ಎಲ್ಲಾ ಬೇಡಿಕೆಗಳು ಬಹುತೇಕ ಹಾಗೆ ಇದೆ. ಹಾಗಾಗಿ ಹಿಂದೆ ಜಿಲ್ಲೆಯ ರೈತರು ಕೆಂಬಾವುಟದಡಿಯಲ್ಲಿ ಒಟ್ಟಾಗಿ ಚಳುವಳಿಗಿಳಿಯುವ ಸ್ಫೂರ್ತಿಯನ್ನು ಪಡೆದು ಮತ್ತೆ ಬೀದಿಗೆ ಇಳಿಯಬೇಕಾಗಿದೆ. ಇಲ್ಲದಿದ್ದರೆ ಗಣುನಾಯ್ಕ, ಹೈದರ್‌ಸಾಬ್, ಮಾಳ್ವೇಕರ್, ಗೋವಿಂದ ಶೇಟ್, ದೀಪಣ್ಣ ಶೆಟ್ಟಿ, ಪಕೀರ ಪಡ್ತಿ, ಪಿಕಾಳೆ ವಕೀಲ, ಕೈತಾಸ್, ಎಂ.ಎಸ್.ಧಾರೇಶ್ವರ ಮುಂತಾದ ಅನೇಕರ ತ್ಯಾಗಕ್ಕೆ ನಾವು ಅವಮಾನ ಮಾಡಿದಂತೆ.

ಇಂತಹ ರೈತಹೋರಾಟದ ನೆಲೆ ಕಾರವಾರದಲ್ಲಿ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನ ನಡೆಯುತ್ತಿರುವು ಆಶಾದಾಯಕ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಚೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee, Editor S.Y GURUSHANTH